# ಕಂಬಾರ ಅವರ ನಾಟಕಗಳು

## ಮುನ್ನುಡಿ

ಇದು ನನ್ನ ಆಯ್ದ ಐದು ಏಕಾಂಕ ನಾಟಕಗಳ ಸಂಗ್ರಹ. ಹಲವಾರು ವರ್ಷಗಳ ಹಿಂದೆಯೇ ಇವು ಪ್ರಕಟಗೊಂಡು - ಪ್ರಚಲಿತವಾದುವು. ಕನ್ನಡದಲ್ಲಿ ಏಕಾಂಕಗಳ ಕೊರತೆ, ಈ ನಾಟಕಗಳನ್ನು ಪುನಃ ಸಂಗ್ರಹಿಸಿ ಪ್ರಕಟಿಸುವಂತೆ ಪ್ರೇರೇಪಿಸಿದೆ. ಇದನ್ನು ಪ್ರಕಟಿಸಲು ಮುಂದಾದ ಪ್ರಕಾಶಕರನ್ನು ಕೃತಜ್ಞತೆಯಿಂದ ಸ್ಮರಿಸುವೆ.

**– ಚಂದ್ರಶೇಖರ ಕಂಬಾರ**

ಬೆಂಗಳೂರು

೨೫ - ೧೦ - ೧೯೮೪

## ಅಂಗಿಮ್ಯಾಲಂಗಿ

## ದೃಶ್ಯ ಒಂದು

**ಅಂಗೀಯ ಮ್ಯಾಲಂಗಿ ಛೆಂದೇನೊ ನನರಾಯ |**
**ರಂಬಿ ಮ್ಯಾಲ ಪ್ರತಿರಂಬಿ | ಬಂದರ |**
**ಛೆಂದೇನೊ ರಾಯ ಮನಿಯಾಗ ||**
**– ಜಾನಪದ ಸಾಹಿತ್ಯ**

<u>ಪಾತ್ರಗಳು</u>

**ನರಸಣ್ಣ**
**ಬುದ್ಧಣ**
**ಚಂಬಣ್ಣ**
**ಶಾಂತ**
**ಕಾಶಮ್ಮ**

––

[ತೆರೆ ಏಳುತ್ತಲೂ ವಿಶಾಲವಾದೊಂದು ಕೋಣೆಯ ಕಲ್ಪನೆ ಬರುವಂಥ ವ್ಯವಸ್ಥೆ. ಎಡಬದಿಗೆ ಒಂದು, - ಬಲಬದಿಗೊಂದು, - ಹೀಗೆ ಎರಡು ಬಾಗಿಲುಗಳು. ಎಡಗಡೆಯ ಬಾಗಿಲಿಗೆ ಎದುರಾಗಿ - ಮುಖ ಎತ್ತಬೇಕಾದತ್ತ ಮಾಡಿದ ಇನ್ನೆರಡು ಕುರ್ಚಿಗಳು. ಬಲಬದಿಯ ಕುರ್ಚಿಯ ಹಿಂಬದಿಗೆ - ಪುಸ್ತಕದ ಒಂದು ಅಲಮಾರು. ಅದರ ಮೇಲೆ ಅಂಥಿಂಥ ಬಟ್ಟೆಗಳ ಅಸ್ತವ್ಯಸ್ತ ಕಟ್ಟೆ. ಅದರಿಂದೀಚೆಗೆ ಮಾರು

ಅಂತೆರದಲ್ಲಿ ಒಂದು ಸ್ಟೂಲು, ಅದರ ಮೇಲೆ ತೆರೆದ ಫೋನೋ ಪೆಟ್ಟಿಗೆ. ಹಾಡೊಂದರ ಕುತ್ತಿಗೆಯನ್ನು ತರನನದಿಂದ ಹಿಸುಕುತ್ತ ನರಸಣ್ಣ ಎಡಬಾಗಿಲಿನಿಂದ ಬರುತ್ತಾನೆ. ಕೈಯಲ್ಲಿ ಅಂದಿನ ಪತ್ರಿಕೆ. ಉಡುಪು - ನೈಟ್‌ಸೂಟು - ಅದೇ ಬಣ್ಣದ ಸಡಿಲಾದ ಅಂಗಿ. ತಲೆಗೆ ಎಣ್ಣೆ ಇಲ್ಲ. ಎಡಬಾಗಿಲ ಬಳಿಯ ಕುರ್ಚಿಯಲ್ಲಿ ಕುಳಿತು ಕೊಳ್ಳಹೋಗಿ - ಪತ್ರಿಕೆಯಿಂದ ಚೆನ್ನಾಗಿ ಜಾಡಿಸಿ ಕುಳಿತುಕೊಂಡು ಪತ್ರಿಕೆ ಓದತೊಡಗುತ್ತಾನೆ. ತುಸು ಸಮಯ ಸತ್ತಬಳಿಕ - ಬುದ್ದಣ್ಣ ಬಲಬಾಗಿಲಿನಿಂದ ಪ್ರವೇಶಿಸಿ ಕೋಣೆಯೆಲ್ಲವನ್ನೂ ನಾಟಕೀಯವಾಗಿ ಈಕ್ಷಿಸುತ್ತ - ]

**ಬುದ್ದಣ್ಣ :-** (ನಾಟಕದ ಧಾಟಿಯಲ್ಲಿ) ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೋ?

ಹೊಸ್ತಿಲಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡಯನಿದ್ದಾನೊ ಇಲ್ಲವೋ?
ತನುವಿನೊಳಗೆ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ,
ಮನೆಯೊಳಗೆ ಮನೆಯೊಡೆಯನಿಲ್ಲಾ -
ಕೂಡಲ ಸಂಗಮದೇವ।…….
ಯಾರಿರುವಿರೊಳಗೆ? - ಇದ್ದೀರೇನು?
ಇದ್ದರೂ ಇರಬಹುದು ದಿಕ್ಕಿರದ ಹಾಳು ಮನೆ.
ಅಯ್ಯಾ ರಾಯರೆ, - ಇದ್ದೀರೇನು ಒಳಗೆ?

(ನರಸಣ್ಣ ಆತನ ಈ ನಾಟಕವೆಲ್ಲವನ್ನೂ ಮುಗುಳು ನಗುತ್ತ ನಿರುಕಿಸುತ್ತಿದ್ದಾನೆ. ಬುದ್ದಣ್ಣ ಮಾತು ಮುಗಿಸುತ್ತಲೂ ಪತ್ರಿಕೆಯನ್ನು ಇನ್ನೊಂದು ಕುರ್ಚಿಯ ಮೇಲೆ ಒಗೆದು ಮುಗುಳು ನಗುತ್ತ ಕೈಮುಗಿಯುತ್ತಾನೆ.)

**ನರಸಣ್ಣ :-** ದಯಮಾಡಿಸಬೇಕು. ಪಾದಬೆಳಿಸಬೇಕು. ಕವಿಗಳಿಗೆ ಸುಸ್ವಾಗತ! ಬರಬೇಕು…ಹೂಂ…ಅಲ್ಲೇ ಕುರ್ಚಿ ಇದೆ, ಕೂತ್ಕೊಳ್ಳಬೇಕು.

**ಬುದ್ದಣ್ಣ :-** (ನಾಟಕದ ಗುಂಗಿನಲ್ಲಿಯೇ ಕುಳಿತುಕೊಳ್ಳುತ್ತ) ಇರಲಿ! ಇರಲಿ! ಭಕ್ತಶಿರೋಮಣಿಗಳ ಒತ್ತಾಯವನ್ನು ಅಲ್ಲಗಳೆಯಲಿಕ್ಕಾದೀತೆ?

**ನರಸಣ್ಣ :-** ಸಾಕು ಬಿಡೋ ನಾಟ್ಕಾ. ಟೀ ಗೀ ಏನಾದರೂ ಮಾಡಬೇಕೋ…ಅಥವಾ……

**ಬುದ್ದಣ್ಣ :-** ಛೀ! ಛೀ! ಗಂಡಸರ ಕೈಯಿಂದಾದ ಚಹಾ! ಅದೂ ನಾನು ಸ್ವೀಕರಿಸೋದು! ಸಾಧ್ಯವಿಲ್ಲ! ಸಾಧ್ಯವಿಲ್ಲ!
**ನರಸಣ್ಣ :-** ಮತ್ತೆ ಬಂದೆಯಲ್ಲಾ ನಿನ್ನ ಹಳೇ ಹಾಡಿಗೇ.

**ಬುದ್ದಣ್ಣ :-** (ಗಂಭೀರನಾಗಿ) ಹಳೇದೋ ಹೊಸದೋ ನಿನಗೇ ಗೊತ್ತು. ಹೋಗಲಿ ಬಿಡು, ಆ ಹಾಳು ವಿಷಯ ಮತ್ತೇಕೆ?
(ಆಲಮಾರಿನಲ್ಲಿ ಪುಸ್ತಕವೊಂದನ್ನು ಹಿರಿದು ಧೂಳು ಜಾಡಿಸಿ ಮೊದಲ ಪುಟ ತಿರುವಿ ಬಾಯಿ ಮಾಡಿ ಓದತೊಡುಗತ್ತಾನೆ.)

(Narasu's Home Library - ಬುಕ್ ನಂಬರ್ ೩೬! ಶಹಬ್ಬಾಶ್! ಈ ಪುಸ್ತಕದ ನಂಬರ ಕೂಡ ಎಷ್ಟು ಅರ್ಥಗರ್ಭಿತವಾಗಿದೆಯಲ್ಲೋ! ಮೂರು ಈ ಮನೆಯಲ್ಲಿ - ಆರು ತೌರು ಮನೆಯಲ್ಲಿ.

**ನರಸಣ್ಣ :-** (ಬೇಸರದಿಂದ) ಎಷ್ಟು ಎತ್ತರದ ಧ್ವನಿಯಲ್ಲಿ - ಎಷ್ಟು ನೂರು ಸಲ ಹೇಳಿದರೆ ಆ ವಿಷಯವನ್ನು ನೀನು ಮರೆಯುತ್ತೀಯೋ ನನಗೆ ಅರ್ಥವಾಗುತ್ತಿಲ್ಲ. ಹೋಗಲಿ ಬಿಡು, ಅಂದ ಹಾಗೇ ನಾನು ಹೇಳಿದ್ದೇನಾಯ್ತು ಕವಿ?

**ಬುದ್ದಣ್ಣ :-** ಸಧ್ಯ ಇನ್ನರ್ಧಾ ತಾಸಿನಲ್ಲಿ ಇಲ್ಲೇ ಬರ್ತಾಳೆ. ಏನು ಕೇಳುತ್ತಿಯೋ ಕೇಳು... ಈ ಫೋನೋಗ್ರಾಮ್ ಏನಾದರೂ ಹಾಡುತ್ತೆಯೇ?

**ನರಸಣ್ಣ :-** ಅದು ಕೆಟ್ಟು ಹಳೇ ಮಾತಾಗಿ ಹೋಯ್ತು. ಅವಳು ಇಲ್ಲಿಗೇ ಬರ್ತಾಳಾ?

**ಬುದ್ದಣ್ಣ :-** ಹೂಂ ಯಾಕೆ ಬರ್ಬಾರ್ದಾಗಿತ್ತೇನು?

**ನರಸಣ್ಣ :-** ಹಾಗೇನಿಲ್ಲ, ನಾನಿದ್ದಾಗ ನಿನ್ನೆದುರು ಉತ್ತರಾ ಕೊಡ್ತಾಳೋ ಇಲ್ಲೋ - ಅಂತ.

**ಬುದ್ದಣ್ಣ :-** ನಡುವೆ ನಾನು ಯಾಕೆ?...ಈ ಫೋನೋಗ್ರಾಂ ನಿಜವಾಗ್ಲೂ ಹಾಡೋಲ್ಲ?

**ನರಸಣ್ಣ :-** ಕೆಟ್ಟಿದೆ. ದುರಸ್ತಿ ಮಾಡಿಸಬೇಕು.

**ಬುದ್ದಣ್ಣ :-** ಹೌದ್ಹೌದು, ಅತ್ತಿಗೆ ತೌರಿಗೆ ಹೋದಂದೇ ಈ ಫೋನೊ ಗ್ರಾಂದ ಹಾಡೂ ನಿಂತಿರಬೇಕು - ಅಲ್ಲವೇ?

**ನರಸಣ್ಣ :-** ಹೌದಾ? ಮತ್ತೆ ಅದೇ ವಿಷಯ - ಅದೇ ಮಾತು - ಅದೇ ಕಥೆ ಅಪ್ಪಾ, ಎಷ್ಟು ಸಲ - ಎಷ್ಟು ಪರಿಯಾಗಿ ಹೇಳಿದರೂ ಮತ್ತೆ ಅದನ್ನೇ ಹಾಡುತ್ತೀಯಲ್ಲೋ ದಾಸ?

**ಬುದ್ದಣ್ಣ :-** ನೀನು ಮೇಲಿಂದ ಮೇಲೆ ಹಾಗೆ ಹೇಳಿದರೂ ಮತ್ತೆ ಮತ್ತೆ ನಾನೂ ಅದನ್ನೇ ಹಾಡುತ್ತೇನಲ್ಲಾ - ನನಗೂ ಅದೇ ಆಶ್ಚರ್ಯ! ಇಷ್ಟಾಗಿಯೂ ನನಗೆ ಗೊತ್ತಿಲ್ಲವೇ - ಆಗೋ ಪ್ರಯೋಜನ ಅಷ್ಟರಲ್ಲೇ ಇದೆ - ಅಂತ. ಧಡ್ಡ ದೇವರು ನನಗೆ ನಾಚಿಕೆಯನ್ನೇಕೆ ಹಾಕಿಲ್ಲ. ನಾನೇನು ಮಾಡಲಿ?

**ನರಸಣ್ಣ :-** ನೋಡು ಕವಿ, ನನ್ನ ಮಾತನ್ನು ದಯಮಾಡಿ ಮನಸ್ಸಿಗೆ ಹಚ್ಚಿಕೋಬೇಡ. ಹಿಡಿದ ಹಟ ನಾನೆಂದೂ ಬಿಡೋನಲ್ಲ. ಇದು ನಿನಗೆ ಗೊತ್ತಿಲ್ಲದ ಮಾತೇನೂ ಅಲ್ಲ.

**ಬುದ್ದಣ್ಣ :-** (ಬೇಸರದಿಂದ ನಿಟ್ಟುಸಿರೆಳೆದು) ಹೂ. ಮಹಾ ಮಹಾ ಕಾರ್ಯಕ್ಕಾಗಿ - ಧ್ಯೇಯ ಗುರಿಗಳಿಗಾಗಿ ಹಟ ತೊಡುವವರನ್ನು ಕಂಡಿದ್ದೆ. ಒಬ್ಬಳನ್ನು ಬಿಟ್ಟು ಇನ್ನೊಬ್ಬಳನ್ನು ಲಗ್ನವಾಗುವುದಕ್ಕೂ ಹಟ ತೊಡ್ತಾರೇಂತ ನನಗೆ ಈ ವರೆಗೂ ತಿಳಿದಿರಲಿಲ್ಲ. ಅಂತೂ ನೀನೊಂದು ಒಳ್ಳೇ ಉದಾಹರಣೆ ದೊರೆತ ಹಾಗಯ್ತು.

**ನರಸಣ್ಣ :-** (ಕಾವೇರಿ, ಲಘುವಾಗಿ) ನಾವೆಲ್ಲಾ ಕ್ಷುಲ್ಲಕ ಜನ. ನಮ್ಮಂಥವರಿಗೆ ನಿಮ್ಮಂಥಾ ಧ್ಯೇಯ - ಗುರಿ - ಎಲ್ಲಿಂದ ಬರಬೇಕು?

**ಬುದ್ದಣ್ಣ :-** (ಆದರೂ ಶಾಂತನಾಗಿ) ನೀನೆಷ್ಟು ರೇಗಿದರೂ ನನ್ನ ಮೇಲೇನೂ ಪರಿಣಾಮವಾಗುವುದಿಲ್ಲ - ಇದನ್ನು ಚೆನ್ನಾಗಿ ತಿಳಿದುಕೋ. ನೋಡು ನರಸೂ. (ತಿಳಿಸಿ ಹೇಳುವಂತೆ) ನಿನ್ನ ತಾಯಿಯ ನನ್ನ ಮೇಲಿನ ವಾತ್ಸಲ್ಯಕ್ಕೆ ಕೃತಜ್ಞನಾಗಿ ಇನ್ನೊಮ್ಮೆ ಹೇಳುತ್ತೇನೆ - ಹೆಣ್ಣಿನ ಮರುಕ ಯಾರಿಗೂ ಒಳ್ಳೇದಲ್ಲ. ನೀನು ಶಾಂತಳನ್ನು ಲಗ್ನವಾಗುವ ಮೊದಲೇ ಯೋಚಿಸಿ ಮದುವೆಯಾಗಬೇಕಿತ್ತು. ಅವಳ ರೂಪ - ಬಣ್ಣ - ಇವನ್ನೆಲ್ಲಾ ನೀನು ಮದುವೆಯಾಗುವ ಮುನ್ನವೂ ಕಂಡುದುಂಟು. ಇಷ್ಟಾಗಿಯೂ ಮದುವೆಗೊಪ್ಪಿದೆಯಲ್ಲಾ -

**ನರಸಣ್ಣ :-** (ಅದೇ ಧಾಟಿಯಲ್ಲಿ) ನಮ್ಮಿಬ್ಬರ ಗೆಳೆತನಕ್ಕೆ ಕೃತಜ್ಞನಾಗಿ ನಾನು ಇನ್ನೊಮ್ಮೆ ಹೇಳುತ್ತೇನೆ ಕೇಳು - ಸಾಯಲಿರುವ ತಾಯಿಯ ಸಮಧಾನಕ್ಕಾಗಿ ಅವಳನ್ನು ಮದುವೆಯಾದದ್ದು, ನನ್ನ ತಪ್ಪೆ? ಇಷ್ಟಕ್ಕೇ ಜೀವನದಲ್ಲಿ ಖೂನಿ ಮಾಡಿದ ಅಪರಾಧಿಯಂಥೆ ನನ್ನನ್ನು ನೀನು ಕಾಣಬೇಕೇ?

**ಬುದ್ದಣ್ಣ :-** ಎಷ್ಟು ಹಗುರಾಗಿ ಮಾತಾಡ್ತೀಯಲ್ಲೋ ಆಸಾಮಿ ಒಮ್ಮೆಲೇ ಯಾರನ್ನಾದರೂ ಕೊಂದರೆ ಅದು ಅಂಥ ದೊಡ್ಡ ಅಪರಾದ ಖಂಡಿತ ಅಲ್ಲ. ಆದರೆ ದಿನಾಲೂ - ಕ್ಷಣ ಕ್ಷಣಕ್ಕೂ ಶಾಂತಳನ್ನು ಜೀವಂತ ಖೂನಿ ಮಾಡ್ತಾ ಇದ್ದೀಯಲ್ಲಾ - ಇದು ಮಹಾಪರಾಧ! ಹೇಳು ಅವಳು ಏನು ತಪ್ಪು ಮಾಡಿದಾಳೇಂತ ಅವಳಿಗೀ ಶಿಕ್ಷೆ! (ಅಣಕದಿಂದ) ತಾಯಿ ಹೇಳಿದಳು - ಈತ ಮದುವೆಯಾದ; ನಿನ್ನ ತಾಯಿಯ ಮನಸ್ಸಿನಲ್ಲಿ ಮದುವೆಯ ಶಾಸ್ತ್ರ ಮುಗೀಲಿ ಅಂಬೋದು ಅಷ್ಟೇ ಇದ್ದಿತೋ - ಅಥವಾ ಎಲ್ಲರ ಹಾಗೆ ಇವರೂ ಸಂಸಾರ ಮಾಡಲಿ - ಅಂತ ಆಸೆ ಕೂಡ ಇದ್ದಿತೋ? ನೀನು ಮೊದಲೇ ಇಷ್ಟು ಬುದ್ಧಿಯನ್ನು ಉಪಯೋಗಿಸಿದ್ದರೆ ನೀನಲ್ಲ - ನಿನ್ನಂಥ ಇನ್ನೊಬ್ಬ ಚೆಲುವ ಅವಳಿಗೆ ಸಿಕ್ಕೇ ಸಿಗುತ್ತಿದ್ದ. ಇದರಲ್ಲೇನಾದರೂ ಸಂಶಯವಿದೆಯೇ?

**ನರಸಣ್ಣ :-** (ಕವಿ ಬಿರುಸಾದುದನ್ನು ಗಮನಿಸಿ ನಗುತ್ತ) ಎಂಥಾ ಸುರಸುಂದರಿಯ ಪಕ್ಷ ಕಟ್ಟಿ ಮಾತಾಡ್ತಾ ಇದ್ದೀಯೋ - ಮಹಾಕವಿ! ಏನು ದಿವ್ಯವೋ ನಿನ್ನ ಸೌಂದರ್ಯ ದೃಷ್ಟಿ! ಆಹಾಹಾ! ಏನು ರೂಪ! ಏನು ಬಣ್ಣ! ಕವಿರಾಜಾಃಅವಳು ಹೆಣ್ಣೂಂತ ಕರೆಯಿಸಿಕೊಳ್ಳೋದಕ್ಕೆ ಒಂದು ಮಸಡಿಯಾದರೂ ಬೇಡವೇ? ಒಂದು ಧ್ವನಿ?... ಒಂದು ಬಣ್ಣ? ಅದೂ ಹೋಗಲಿ, ಅವಳ ತಂದೆ ಕನ್ನಡದ ನಾಲ್ವತ್ತೇಳು ಅಕ್ಷರಗಳ ಪೈಕಿ ಮೊದಲಿನ ಹದಿನಾಲ್ಕನ್ನಾದರೂ ಕಲಿಸಿರಬಾರದೇ?... ಹೂಂ... ಅಂತೂ ಆ ಎರೇಮಣ್ಣು ನಿನ್ನ ಮೇಲೆ ಇಷ್ಟೊಂದು ಬೆಳಕು ಬೀರಿದೆಯಲ್ಲಾ... ಏನೇ ಆದರೂ ನೀನು ದಿವ್ಯದೃಷ್ಟಿಯುಳ್ಳವನೆನ್ನೋದರಲ್ಲಿ ಸಂಶಯವೇ ಇಲ್ಲ.

**ಬುದ್ದಣ್ಣ :-** ನಾನು ಕೇಳಿದ ಪ್ರಶ್ನೆಗೆ ನೇರ ಉತ್ತರ ಸಿಗಲಿಲ್ಲ. ಪರವಾ ಇಲ್ಲ. ಕೇಳು ನರಸೂ, ಹೆಣ್ಣೊಂದರ ಬೆಲೆ ಕೇವಲ ಅವಳ ರೂಪದ ಮೇಲೆ ಕಟ್ಟಬಾರದು. ನೋಡಬೇಕಾದ್ದು ಮೈಕಟ್ಟನ್ನಲ್ಲ... ಅವಳು ಕಟ್ಟಿದ ಮನೆಯನ್ನು ಮೈಬಣ್ಣಾ ಅಲ್ಲ - ಗುಣ ಉಜ್ಜಬೇಕು.

**ನರಸಣ್ಣ :-** ಲೆಕ್ಚರ್ ಆಯ್ತೇ?

ಬುದ್ದಣ್ಣ - ಆಯ್ತು. ಇನ್ನು ಮೇಲೆ ನಿನ್ನಿಷ್ಟ. ಈಗಲೂ ನಾನು ಹೇಳೋದು - ಶಾಂತಳನ್ನು ಕರೆದುಕೊಂಡು ಬಾ - ಎಂದೇ.

**ನರಸಣ್ಣ :-** ಲೆಕ್ಚರ್ ಮುಗಿಯಿತೆಂದು ನೀನೇ ಹೇಳಿದ್ದು ಈಗ ಮತ್ತೆ -

**ಬುದ್ದಣ್ಣ :-** (ಅಸಹನೆಯಿಂದ) ಪಂಡಿತರೆದುರು ಲೆಕ್ಚರ್ ಕೊಡುವನೂ ಧಡ್ಡನೇ? ನಮಸ್ಕಾರ್.

(ಬುದ್ದಣ್ಣ ಏಳುತ್ತಿರುವಾಗಲೇ ಆತನನ್ನು ನರಸಣ್ಣ, ಕುರ್ಚಿಯಲ್ಲೇ ಹತ್ತಿಕ್ಕಿ)

**ನರಸಣ್ಣ :-** ಹೌದ? ಸಿಟ್ಟು ಬಂತು. ಕವಿ, ನಾನೆಂದಾದರೂ ಈ ವಿಷಯವೊಂದನ್ನು ಬಿಟ್ಟು ನಿನಗೆ ಎದುರಾಡಿದ್ದುಂಟೆ? ನೀನು ಹಾಕಿದ ಗೆರೆದಾಟಿದ್ದುಂಟೇ? ಈ ಹಾಳು ವಿಷಯವನ್ನೇ ಮತ್ತೆ ಮತ್ತೆ ಕೆದರಿ ಗಾಯವನ್ನೇಕೆ ಹೆಚ್ಚಿಸಿಕೊಳ್ಳಬೇಕು? ಗಾಳಿ ಸುದ್ದಿ ಕೈ ನೋಯಿಸಿಕೊಳ್ಳುವ ಈ ಎಬಡತನ ಇನ್ನಾದರೂ ಬಿಡಬಾರದೆ? ನೀನು ಕೂಡ ಅವಳ ವಕಾಲತ್ತು ವಹಿಸುವುದು ನಿಜವಾಗಿಯೂ ದುಃಖದ ಸಂಗತಿ. (ಆಕ್ಷೇಪಿಸುತ್ತ) ನೀನೇ ನೋಡುತ್ತೀಯಲ್ಲ - ಇಬ್ಬರ ಮನಸ್ಸಿಗೂ ಒಂದು ನೆಮ್ಮದಿಯಿಲ್ಲ - ಒಂದು ಶಾಂತಿಯಿಲ್ಲ.

**ಬುದ್ದಣ್ಣ :-** ತಾನಾಗಿ ಮನೆಗೆ ಬಂದ ಶಾಂತಿಯನ್ನು ತೌರಿಗೋಡಿಸಿದರೆ - ಇನ್ನೆಲ್ಲಿಯದಯ್ಯಾ ಶಾಂತಿ? ಮನೆಯ ನೆಮ್ಮದಿಯನ್ನೋಡಿಸಿ ಈ ಹಾಳು ಧೂಳನ್ನೆಲ್ಲ ಒಳಗೆ ಕರೆದುಕೊಂಡು ಬಿಟ್ಟೆ.

**ನರಸಣ್ಣ :-** ನೋಡು ಬುದ್ದಣ್ಣ, - ನೀನು ಹೀಗೆಲ್ಲಾ ಮಾತಾಡಿದರೆ ನಾನೂ ಸ್ವಲ್ಪ ನಾಲಿಗೆ ಉದ್ದ ಬಿಡಬೇಕಾದೀತು. "ಮನೆ ನಂದು - ಮನನಂದು, ತಿಳಿದ ಹಾಗೆ ಮಾಡುತ್ತೇನೆ. ಇಷ್ಟಾಗಿಯೂ ನಡುವೆ ಇಣಿಕಿ ಹಾಕೋದಕ್ಕೆ ನೀನು ಯಾರು?" - ಎಂದೂ ಕೇಳಬೇಕಾದೀತು.

**ಬುದ್ದಣ್ಣ :-** ಕೇಳಬೇಕಾದೀತು ಯಾಕೆ - ಕೇಳಿಯೇ ಬಿಟ್ಟೆಯಲ್ಲ ಸ್ವಾಮಿ, ತಾವು ದೊಡ್ಡವರು. ಈ ವರೆಗೆ ಈ ದಡ್ಡ ಒಂದೆರಡು ಬಿಸಿ ಮಾತು ಆಡಿದ್ದರೆ ಅದೆಲ್ಲ ನಿಮ್ಮ ತಾಯಿಯ ಮೇಲಿನ ಪ್ರೇಮದಿಂದ ಎಂದಾದರೂ ಅನ್ನಿ, ಗೆಳೆತನ ಎಂದಾದರೂ ಹೆಸರಿಡಿ -

**ನರಸಣ್ಣ :-** (ನಡುವೆ ತಡೆದು) ನೋಡಿದೆಯಾ ಇಷ್ಟಕ್ಕೇ ಸಿಟ್ಟು.

**ಬುದ್ದಣ್ಣ :-** ಸಿಟ್ಟೆಲ್ಲಿಂದ ಬಂತು? (ಮುಗುಳು ನಗುತ್ತ) ಅಥವಾ ಸಿಟ್ಟೂಂತ ಇದಕ್ಕೇ ಅನ್ನೋದಾದರೆ ಅದನ್ನು ಬರುವ ಹಾಗೆ ಮಾತಾಡಿದವನು ನೀನೇ ತಾನೇ? ಅಂತೂ ನಿನ್ನ ಸಹವಾಸದಲ್ಲಿರಬಯಸುವವರು ಎರಡನ್ನು ಬಿಡಬೇಕು. ಒಂದು ನಾಚಿಕೆ, ಇನ್ನೊಂದ ಉ ಸಿಟ್ಟು. ಶಾಂತ ಬರೋ ಹೊತ್ತಾಯ್ತು. ಏನು ಕೇಳುತ್ತೀಯೋ ಕೇಳು, ನಾನು ಹೋಗಬೇಕು. (ಎದ್ದು ಹೊರಡತೊಡಗುತ್ತಲೂ ನರಸಣ್ಣ ಅಡ್ಡಬಂದು)

**ನರಸಣ್ಣ :-** ಹೀಗೆ ನಡುದಾರಿಯಲ್ಲೇ ಕೈ ಬಿಡೋದು ನಿನಗೆ ಸೇರುತ್ತಲ್ಲವೇ ಕವಿ?

**ಬುದ್ದಣ್ಣ :-** ಮತ್ತೆ ನನಗೇನು ಮಾಡಂತೀಯಾ? ಕರೆದುಕೊಂಡು ಬಾಂತ ನೀನು ಹೇಳಿದೆ - ನಾನು ಕರೆದು ಬಂದೆ. ಇನ್ನೇನಾಗಬೇಕು?

**ನರಸಣ್ಣ :-** ನಿನ್ನೊಡನೆ ಮಾತನಾಡಿದ ಹಾಗೆ ಸಲಿಗೆಯಿಂದ ನನ್ನೊಡನೆ ಅವಳು ಎಂದಾದರೂ ಮಾತನಾಡಿದ್ದುಂಟೆ ಬುದ್ದಣ್ಣ?

**ಬುದ್ದಣ್ಣ :-** ನೀನು ಅವಳನ್ನು ಮಾತನಾಡಿಸಿದ್ದರೆ ತಾನೆ ಅವಳು ಮಾತಾಡಬೇಕು? ಹೋಗಲಿ ಸುತ್ತು ಬಳಸಿ ಪೀಠಿಕೆ ಹಾಕಬೇಡ , ಏನು ಮಾಡಲಿ ಹೇಳು?

**ನರಸಣ್ಣ :-** (ಕೈ ಹಿಡಿದು ಬುದ್ದಣ್ಣನನ್ನು ಕುರ್ಚಿಯಲ್ಲಿ ಕುಳ್ಳಿರಿಸಿ ತಾನೂ ಒಂದರಲ್ಲಿ ಕುಳಿತು ತಿಳಿಸಿ ಹೇಳುವವರಂತೆ)

ನೋಡು ಬುದ್ದಣ್ಣ, ಇದರಲ್ಲಿ ನಿನಗೆ ಗೊತ್ತಿಲ್ಲದ್ದು ಏನೂ ಇಲ್ಲ. ನಾನು ಇನ್ನೊಂದು ಮದುವೆ ಮಾಡಿಕೊಳ್ಳಬೇಕಂಬೋದು -

**ಬುದ್ದಣ್ಣ :-** ಅದಂತೂ ನಿನ್ನ ದಿನನಿತ್ಯದ ಪಲ್ಲವಿ. ಅದು ಅವಳಿಗೂ ಗೊತ್ತು. ಇಷ್ಟಕ್ಕೆ ಅವಳನ್ನೇಕೆ ಇಲ್ಲಿಗೆ ಕರೆಸಬೇಕಲು?

**ನರಸಣ್ಣ :-** (ಇನ್ನೂ ತಿಳಿಸಿ ಹೇಳುತ್ತ) ಯಾಕೆಂದರೆ ಇನ್ನೊಂದು ಮದುವೆ ಮಾಡಿಕೊಳ್ಳಬೇಕಾದರೆ ಘಟಸ್ಫೋಟವಾಗಬೇಕು - ಅಂದರೆ ಸೋಡ ಪತ್ರ - ಅಂತ. ಇಲ್ಲಾ - ಅವಳು ಇನ್ನೊಂದು ಮದುವೆಗೆ ತಾನಾಗಿ ಒಪ್ಪಿಗೆ ಕೊಡಬೇಕು. ಅದಕ್ಕಾಗಿ.....

(ಬುದ್ದಣ್ಣ ಗಂಭೀರನಾಗಿ ಅಧೋಮುಖಿಯಾಗುತ್ತಲೂ ನರಸಣ್ಣ ಅಷ್ಟಕ್ಕೇ ತನ್ನ ಮಾತು ನಿಲ್ಲಿಸುತ್ತಾನೆ.)

**ಬುದ್ದಣ್ಣ :-** ಇದರಲ್ಲಿ ನಿನಗೆ ಯಾವುದು ಇಷ್ಟ?

**ನರಸಣ್ಣ :-** ಎರಡಕ್ಕೂ ಸಿದ್ಧ

**ಬುದ್ದಣ್ಣ :-** ಮದುವೆಗೆ ಒಪ್ಪಿಗೆ ಕೊಟ್ಟ ಮೇಲೆ ಅವಳ ಗತಿ?

**ನರಸಣ್ಣ :**- ನನ್ನ ಮನೆ ಇದ್ದೇ ಇದೆ. ಬಂದು ಹಾಯಾಗಿರಲಿ -

**ಬುದ್ದಣ್ಣ :**- ಆಳಾಗಿ! ಅಲ್ಲವೆ? ನರಸೂ, ನೀನಿದ್ದೀ - ಅವಳಿದ್ದಾಳೆ; ಅಂತೂ ಕೇಳು, ಹ್ಯಾಗೆ ಒಪ್ಪಿದರೆ ಹಾಗೆ, ನಡುವೆ ನಾನ್ಯಾರು?

**ನರಸಣ್ಣ :**- ಹೀಗೆ ನಡುವೇ ಕೈಬಿಟ್ಟರೆ ಮುಂದಿನ ಹೊಣೆ ನನ್ನಿಂದ ಹೊರಲು ಸಾಧ್ಯವೇ ಬುದ್ಧ? ಅವಳು ಮದುವೆಗೆ ಒಪ್ಪಿದರೆ ಮುಂದಿನದನ್ನೆಲ್ಲ ನೀನು ಹೇಳಿದ ಹಾಗೆ ಚಾಚೂ ತಪ್ಪದೆ ಕೇಳೋದು - ನನ್ನ ಜವಾಬ್ದಾರಿ. ಇನ್ನುಳಿದದ್ದು ನಿನ್ನದು.

**ಬುದ್ದಣ್ಣ :**- ಇನ್ನುಳಿದದ್ದೆಂದರೆ?

**ನರಸಣ್ಣ :**- ಅವಳನ್ನು ಒಪ್ಪಿಸುವದು. ಒಂದು ದೃಷ್ಟಿಯಿಂದ ಘಟಸ್ಫೋಟವಾಗುವುದು ಒಳ್ಳೆಯದು. ಅವಳೂ ಇನ್ನೊಬ್ಬನನ್ನು ಮದುವೆಯಾಗಿ ಸುಖದಿಂದಿರಬಹುದು. ಅಷಟಾಗಿ ಮದುವೆ ಅನಿವಾರ್ಯವೆನ್ನುವುದಂತೂ ನನ್ನ ಗುಣ ಬಲ್ಲ ನಿನಗೆ ಗೊತ್ತಿರಬೇಕು.

**ಬುದ್ದಣ್ಣ :**- ಅಂದರೆ ಅವಳನ್ನು ನಾನೇ ಕೇಳಬೇಕಂತೀಯೇನು?

**ನರಸಣ್ಣ :**- ನನಗಿನ್ನು ಯಾರಿದ್ದಾರೆ?

**ಬುದ್ದಣ್ಣ :**- (ತುಸು ಹೊತ್ತು ನೀರವನಾಗಿ ಕುಳಿತು) ನಿನ್ನ ಇಷ್ಟವನ್ನು ನೀನಿದೀಗ ತಿಳಿಸಿದಂತೆ ಅವಳಿಗೆ ರಿಪೋರ್ಟು ಮಾಡುತ್ತೇನೆ. ಮುಂದಿನದು ದೈವದಿಚ್ಛೆ. (ಹೊರಗೆ ನೋಡುತ್ತ) ಬರ್ತಾ ಇದಾಳೇಂತ ಕಾಣಶ್ತದ. ನೀನು ಒಳಗೆ ಕೂತಿರು. ಬದಿಯ ಕೋಣೆಯಲ್ಲೇ ಇರು. ನಮ್ಮ ಸಂಭಾಷಣೆ ನೀನು ಕೇಳಬೇಕೆಂದು ನನ್ನಿಷ್ಟ. (ನರಸಣ್ಣ ಬಲಬಾಗಿಲ ಕಡೆಗೊಮ್ಮೆ ನೋಡಿ ಎಡಬಾಗಿಲಿನಿಂದ ಒಳಗೆ ಹೋಗುತ್ತಾನೆ. ಬುದ್ದಣ್ಣ ಗಂಭೀರನಾಗಿ ಪ್ರೇಕ್ಷಕರತ್ತ ಬೆನ್ನು ತಿರುಗಿಸಿ ವಿಚಾರಮಗ್ನನಾಗುತ್ತಾನೆ. ಬಲಬಾಗಿಲಿನಿಂದ ಶಾಂತ ತೀರ ಸಣ್ಣ ಧ್ವನಿಯಲ್ಲಿ 'ಅಣ್ಣಾ ಎಂದು ಕರೆಯುತ್ತಾಳೆ. ಬುದ್ದಣ್ಣ ತಿರುಗಿ ನಿಂತು ಒತ್ತಾಯದಿಂದ ನಗೆ ತರಲೆತ್ನಿಸಿ ಸೋಲುತ್ತ)

**ಬುದ್ದಣ್ಣ :**- ಬಾ ಶಾಂತ. ಒಳಗೆ ಬಾ… ಮನೆ ನಿಂದೇ ಅಲ್ಲವೇ? ಬಾ, ಕೂತುಕೊ.

(ಶಾಂತ ಸಾವಕಾಶವಾಗಿ ಒಳಬಂದು ಬಾಗಿಲ ಬಳಿಯಲ್ಲಿಯ ಮೂಲೆಯಲ್ಲಿ ನಿಂತುಕೊಳ್ಳುತ್ತಾಳೆ. ಬಣ್ಣ ಕಪ್ಪಾದರೂ ಲಕ್ಷಣವಂತೆ. ಒಳಗೆ ತನ್ನವರು ಇದ್ದಾರೇನೋ ಎಂದು ಅಧೈರ್ಯದಿಂದ ಎಡಬಾಗಿಲ ಕಡೆಗೆ ನೋಡುತ್ತಿರುವಾಗ)

**ಬುದ್ದಣ್ಣ :**- ಒಳಗೆ ಯಾರೂ ಇಲ್ಲ. ನಿಶ್ಚಿಂತಳಾಗಿ ಕೂತ್ಕೊಬಾರ್ದೆ?

**ಶಾಂತ :**- (ನಿಂತುಕೊಂಡೇ) ಯಾಕಣ್ಣಾ ಕರೆಸಿದಿರಿ?

**ಬುದ್ದಣ್ಣ :**- ಇದ್ದೇ ಇದೆ ಹಳೇ ಹಾಡುಇ. ನಿಮ್ಮ ತಂದೆ ಎಲ್ಲಿ - ಯಾಕೇ ಅಂತ ಏನಾದರೂ ಕೇಳಿದರೇ?

**ಶಾಂತ :**- ನಿಮ್ಮ ಮನೆಗೆ ಹೋಗುತ್ತೇನಂತ ಹೇಳುತ್ಲೂ ಸುಮ್ಮನಾದರು.

**ಬುದ್ದಣ್ಣ :**- ಅಂದಹಾಗೇ ಅವರೇನಾದರೂ - ನರಸಣ್ಣನ ವಿಷಯ ಯೋಚ್ನೆ ಮಾಡಿದರೇನು?

**ಶಾಂತ :**- ಏನೂ ಇಲ್ಲ. ನಿಮಗೊಮ್ಮೆ ಭೇಟಿಯಾಗ್ಲಿಕ್ಕೆ ಹೇಳೂಂತ ಹೇಳಿದ್ರು.

**ಬುದ್ದಣ್ಣ :**- (ಹೇಳಲೋ ಬೇಡವೋ ಎಂಬಂತೆ ಅನುಮಾನಿಸುತ್ತ) ಸರಿ.

**ಶಾಂತ :**- ಯಾಕಣ್ಣ ಕರೆಸಿದ್ರಿ?

**ಬುದ್ದಣ್ಣ :**- (ಅನಿವಾರ್ಯವಾಗಿ ಹೇಳಲೇಬೇಕಾದುದರಿಂದ ವಿಷಾದಿಸಿ) ನೋಡು ಶಾಂತ, ಎರಡನೆ ಮದುವೆ ಬೇಕೂಂತ ಹಾರಾಡ್ತಾ ಇರೋ ನರಸಣ್ಣನ ವಿಷಯ ನಿನಗೂ ಗೊತ್ತಿರಬೇಕು.....

**ಶಾಂತ :**- ಹೂಂ.....

**ಬುದ್ದಣ್ಣ :**- ನಿಜವಾಗಿಯೂ ಇಂಥ ಪ್ರಶ್ನೆ ಕೇಳಲಿಕ್ಕೆ ನನಗೆ ತುಂಬಾ ನಾಚಿಕೆ ಆಗ್ತಾ ಇದೆ. ಆದರೂ ನೀವಿಬ್ಬರೂ ಹೀಗೆ ದೂರ ದೂರಾಗಿರೋದು ಅಷ್ಟು ಒಳ್ಳೇದಲ್ಲ. ಎಷ್ಟು ದಿನಾಂತ ಇರೋದು? ನರಸಣ್ಣನ ಮನಸ್ಸೇನಾದರೂ ಪರಿವರ್ತನೆ ಹೊಂದಬಹುದು - ಅಂತ ?ಈಗ ಎರಡು ವರ್ಷ ನೋಡಿದ್ದಾಯ್ತು. ಇನ್ನೂ ನೋಡ್ತಾ ಕುಳಿತುಕೊಳ್ಳೋದು ಇಬ್ಬರಿಗೂ ಯೋಗ್ಯವಲ್ಲ. ಯಾವುದಾದರೊಂದು ನಿರ್ಣಯಕ್ಕೆ ನೀವಿಬ್ಬರೂ ಆದಷ್ಟು ಬೇಗ

## ದೃಶ್ಯ ಎರಡು

[ನರಸಪ್ಪನ ಮನೆ, ಹಿಂದೆ ಕಂಡ ಕೋಣೆಯೇ ಈಗಲೂ ಕಾಣುತ್ತಿದೆಯಾದರೂ ತುಂಬ ಬದಲಾವಣೆಯಾಗಿದೆ. ಸ್ವಚ್ಚವಾದ ಪರದೆ ಎಡಬಾಗಿಲಿಗೆ ತೂಗುತ್ತಿದೆ. ನಡುವೆ ಒಂದು ಪುಟ್ಟ ಟೇಬಲ್ಲು ಹೊಸದಾಗಿ ಬಂದಿದೆ. ಅದರ ಸುತ್ತಲೂ ನಾಲ್ಕು ಕುರ್ಚಿಗಳು. ಮೇಜಿನ ಮೇಲೊಂದು ಹೂವಿನ ಹೂಜಿ ಕೂಡ! ಪುಸ್ತಕದ ಅಲಮಾರು ವ್ಯವಸ್ಥೆಯಲ್ಲಿದ್ದು ಬದಿಯ ಸ್ಟೂಲಿನ ಮೇಲೆ ಫೋನೋ ತೆರೆದೇ ಇದೆ. ಅದರ ಬದಿಗೊಂದು ಊದಿನ ಕಡ್ಡಿಯುಳ್ಳ ಪಾತ್ರೆ. ಬುದ್ದಣ್ಣ ಎಡಬಾಗಿಲಿನಿಂದ ಅವಸರವಾಗಿ ಹೊರಬಂದು ಮತ್ತೆ ಆ ಬಾಗಿಲ ಕಡೆಗೆ ಮುಖ ಮಾಡಿ...]

**ಬುದ್ದಣ್ಣ :**- ನಾನು ಹೇಳಿದ್ದನ್ನು ಮಾತ್ರ ಮರೆಯಬೇಡ - ಹೂಂ... ಅದು ಹಾಗೇ ಇರಲಿ. ಈ ಅರಿವೆಗಳನ್ನೆಲ್ಲಾ ಆ ಪೆಟ್ಟಿಗೆಯಲ್ಲಿ ಹಾಕಿಡು. ಆ ಒಳಗಿನ ಕೋಣೆ ಕಸಗುಡಿಸಿದೆಯೋ ಇಲ್ಲವೋ ನೋಡು, (ಫೋನೋಗ್ರಾಂದ ಕಡೆಗೆ ಬರುತ್ತ - ) ಇದು ಹಾಡುತ್ತೋ ಇಲ್ಲವೋ (ಬಲ ಬಾಗಿಲಿನಿಂದ ಹೊರಗೊಮ್ಮೆ ಇಣಿಕಿ) Good………!

(ಫೋನೋ ತಿರುಗುವುದಕ್ಕೂ ನರಸಣ್ಣ ಅತ್ಯವಸರದಿಂದ ಒಳಬರುವುದಕ್ಕೂ ಸರಿಹೋಗುತ್ತದೆ. ನರಸಣ್ಣ ಆಶ್ಚರ್ಯದಿಂದ ಮನೆಯನ್ನು ನೋಡತೊಡಗುತ್ತಾನೆ.)

**ನರಸಣ್ಣ :**- ವ್ಹಾ! ಇದೇನೋ ಕವಿ ಮಾಯಾಬಾಝಾರ! ಎಲಾ! ಎಲಾ! ಏನಿದು! ನೀನು ಮನೆಯನ್ನು ಈ ರೀತಿ ಪರಿವರ್ತಿಸಬಲ್ಲೆ - ಅಂಬೋದು ನನಗೂ ಗೊತ್ತಿರಲಿಲ್ಲ ಬಿಡು! ಎಲಾ……

**ಬುದ್ದಣ್ಣ :**- ಇದೆಲ್ಲಾ ನನ್ನದಲ್ಲಯ್ಯಾ. ಆ ಭಾಂಡೆ ಬೆಳಗೋ ಬಾಯೀ ಕೆಲಸ. ಮುಂಜಾನೆಯಿಂದ ಈ ಮನೆಗೊಂದು ಆಕಾರ ಕೊಡೋದಕ್ಕೆ ಪ್ರಯತ್ನ ಮಾಡ್ತಾ ಇದ್ದಾಳೆ ಪಾಪ. ನಿನಗೆ ತುಂಬಾ ಸೇರುತ್ತಲ್ಲವೆ ಮನೆ? (ರೆಕಾರ್ಡು ಹಚ್ಚುವುದಕ್ಕೆ ತೊಡಗುತ್ತಾನೆ.)

**ನರಸಣ್ಣ :**- ಸೇರದೇನು ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ನರಸಣ್ಣ! ಆ ಕೆಟ್ಟಫೋನೋ ತೀರುವೋದರಲ್ಲಿ ಏನರ್ಥವಿದೆ - ಬಿಡಬಾರದೆ?

**ಬುದ್ದಣ್ಣ :**- ಅಯ್ಯೊ ಎರಡು ತಾಸು ತಲೆ ಕುಟ್ಟಿಕೊಂಡು ದುರಸ್ತಿ ಮಾಡೀನಿ. ನೀನೇ ನೋಡೀಯಂತೆ ನಿಲ್ಲು. (ರಿಕಾರ್ಡು ಸುರ್ಯ್‌ಗುಡ ತೊಡಗುವುದು.)

**ನರಸಣ್ಣ :**- (ನಗುತ್ತ) ಅಂತೂ ಈ ಮನೆಯ ಹಾಡು ಈ ಹೊತ್ತು ತಿರುಗಿ ಬರುತ್ತದೆ - ಅನ್ನಲು.

(ಫೋನೋಗಾಂ ಹಾಡತೊಡುಗ್ತದೆ - )
ಸೌಂದರ್ಯವೆಂಬುದು ಕಣ್ಣೀನ ತುತ್ತಲ್ಲ
ಕಣ್ಣಿಗು ಕಣ್ಣಾಗಿ ಒಳಗಿಹುದು.
ರೂಪ ಲಾವಣ್ಯಕ್ಕೆ ಅಳೆಯಲು ಬಾರದು
ಅವುಗಳೆ ಇದರೊಂದು ಕಣವಿಹವು.

(ಪದ್ಯ ಮುಗಿದು ಇನ್ನೊಮ್ಮೆ ಅದೇ ಪಲ್ಲವಿ ಪ್ರಾರಂಭವಾಗುತ್ತಿರುವಾಗಲೇ ನರಸಣ್ಣ ಅದನ್ನು ಅಷ್ಟಕ್ಕೇ ನಿಲ್ಲಿಸುತ್ತಾನೆ. ಬುದ್ದಣ್ಣ ಸುಮ್ಮನಾಗುತ್ತಾನೆ. ಅಷ್ಟರಲ್ಲಿ ಹೊರಗೆ - ಮನೆಯ ಮುಂದೆ ಕಾರು ನಿಂತ ಸಪ್ಪಳವಾಗುತ್ತದೆ. ಇಬ್ಬರೂ ಗಡಬಡಿಸಿ ಹೊರಗೆ ಓಡಿ ಹೋಗುತ್ತಾರೆ. ಸ್ವಲ್ಪ ಸಮಯವಾಗುತ್ತಲೂ ನರಸಣ್ಣ ಮುಂದಾಗಿ ಬಂದು ……)

**ನರಸಣ್ಣ :**- ಬನ್ನಿ ಬನ್ನಿ… ಒಳಗೆ ಬನ್ನಿ. ಬಸ್ಸಿನಿಂದ ಬರ್ತೀರೇನೋ ಅಂತ ತಿಳಿದಿದ್ದೆ. ಬನ್ನಿ ಬನ್ನಿ…..

(ಮೊದಲು ಚಂಬಣ್ಣ ಆ ಮೇಲೆ ಕಾಶಮ್ಮ ಅವರ ಹಿಂದೆ ಹಿಂದೆ ಬುದ್ದಣ್ಣ ಬರುತ್ತಾರೆ. ಚಂಬಣ್ಣ ಹತ್ತು ಹಡೆದವರಂಥ ವಯಸ್ಸು, ಮುಖ. ಉಡುಪು ಸಾದಾ - ಆದರೂ ಸ್ವಚ್ಛವಾದುದು. ಕಾಶಮ್ಮ ಹೇಳಿ ಕೇಳಿ ಅವನ ಹೆಂಡತಿ - ಇವಳೇ ಹತ್ತು ಹಡೆದಾಕೆ.)

**ನರಸಣ್ಣ :**- (ಕುರ್ಚಿ ತೋರಿಸುತ್ತ) ಕೂತ್ಕೊಳ್ಳಿ ಕೂತ್ಕೊಳ್ಳಿ (ಅತಿಥಿಗಳು ಕುಳಿತುಕೊಂಡಾದ ಮೇಲೆ ಬುದ್ದಣ್ಣನೂ ಕುಳಿತುಕೊಳ್ಳುತ್ತಾನೆ. ನರಸಣ್ಣ ನಿಂತುಕೊಂಡೇ) ಇವರು ಬುದ್ದಣ್ಣ - ನನ್ನ ಸ್ನೇಹಿತರು. ಕವಿಗಳು ,ನಮ್ಮೂರ ಹೈಸ್ಕೂಲಿನಲ್ಲಿ ಟೀಚರಾಗಿದ್ದಾರೆ. (ಪರಸ್ಪರ ನಮಸ್ಕಾರ ವಿನಿಮಯ.)

**ಚಂಬಣ್ಣ :**- ತುಂಬ ಸಂತೋಷ. ನಿಮ್ಮ ಕವಿತೆಗಳನ್ನು ನಾನು ದಿನ ಪತ್ರಿಕೆಯಲ್ಲಿ ಓದಿದ ಹಾಗಿವೆ. ಅಲ್ಲವೇ? ಮತ್ತೇನು ಮನೆ ತುಂಬ ಸೊಗಸಾಗಿದೆ. ಸ್ವಂತ ಮನೆ ತಾನೇ?

**ನರಸಣ್ಣ :**- ಹೌದು.

**ಚಂಬಣ್ಣ :**- ತುಂಬ ಸೊಗಸಾಗಿದೆ. ಮನೆಯಲ್ಲಿ ಅಕ್ಕ ತಂಗಿ - ಯಾರಾದರೂ…..?

**ನರಸಣ್ಣ :**- ಯಾರೂ ಇಲ್ಲ. ಸಧ್ಯಕ್ಕೆ ನಾನೊಬ್ಬನೇ.

**ಬುದ್ದಣ್ಣ :**- ನೀವು ಮನಸ್ಸು ಮಾಡಿದರೆ ಮೂವರಾಗುತ್ತಾರೆ ಮನೆಯಲ್ಲಿ.

**ನರಸಣ್ಣ :**- … ಅಂದರೆ ಕವಿಗಳನ್ನು ಕೂಡಿಸಿಕೊಂಡೂ ಅಂತ.

**ಚಂಬಣ್ಣ :**- Good! ನೀವು ಒಬ್ಬರೇ ಇದ್ದೂ ಮನೆ ಹೀಗಿಟ್ಟಿದ್ದೀರಾ?

**ಬುದ್ದಣ್ಣ :**- ಇಲ್ಲ. ಕೆಲಸದಾಕೆ ಒಬ್ಬಳಿದ್ದಾಳೆ. ಅವಳಿಂದ ಇದೆಲ್ಲಾ ಬಿಟ್ಟೆ.

**ಚಂಬಣ್ಣ :**- ಎಷ್ಟು ಕೋಣೆ ಮನೆಗೆ?

**ನರಸಣ್ಣ :**- ಇನ್ನೂ ಮೂರುಂಟು. ಬನ್ನಿರಲ್ಲ ನೋಡೋಣ.

(ಎಲ್ಲರೂ ಕೂಡಿ ಒಳಗೆ ಹೋಗುವರು. ಸ್ವಲ್ಪ ಸಮಯದ ನಂತರ ಭಾಂಡೆ ಬೆಳಗುವ ಬಾಯಿ, ಮುಖದ ತುಂಬ ಸೆರಗು ಹೊತ್ತುಕೊಂಡು ಚಹದ ವಗೈರೆಗಳೊಂದಿಗೆ ಬಂದು ಟೇಬಲ್ಲಿನ ಮೇಲೆ ಕಪ್ಪು ಬಸಿಗಳನ್ನು ಓರಣವಾಗಿ ಇಡತೊಡಗುವಳು. ಕಾಶಮ್ಮ ಸಾವಕಾಶವಾಗಿ ಹೊರಬಂದು ಮತ್ತೆ ಸ್ವಸ್ಥಾನದಲ್ಲಿ ಕುಳಿತುಕೊಳ್ಳುತ್ತ...)

**ಕಾಶಮ್ಮ :**- ಇದೇ ಊರಿನವಳೇನಮ್ಮಾ ನೀನು?

**ಬಾಯಿ :**- ಹೂಂ.....

**ಕಾಶಮ್ಮ :**- ದಿನಾಲೂ ಎಷ್ಟು ತಾಸು ದುಡೀಬೇಕುಇ?

**ಬಾಯಿ :**- ಬೆಳಿಗ್ಗೆ ಒಂದು ತಾಸು ದುಡಿದರೆ ಆಯ್ತು.

**ಕಾಶಮ್ಮ :**- ಹಾಗಾದರೆ ನರಸಣ್ಣನವರ ಮೊದಲಿನ ಹೆಂಡತಿಯ ಗುರುತು ನಿನಗೆ ಚೆನ್ನಾಗಿ ಇದ್ದಿರಬೇಕಲು.

**ಬಾಯಿ :**- ಹೂಂನ್ರಿ... (ಅವಳಿಗೆ ಕಾಣದಂತೆ ಕಂಬನಿ ಮಿಡಿದು)
**ಕಾಶಮ್ಮ :**- ಹ್ಯಾಗಮ್ಮಾ ಅವಳ ಸ್ವಭಾವ?
**ಬಾಯಿ :**- ಯಜಮಾನ್ರೇs ಹೇಳುತ್ತಿದ್ದರು - ಅವಳು ಭಾಳ ಅಸಹ್ಯದಾಳಂತ.

**ಕಾಶಮ್ಮ :**- ಈಗ ಇವರು ಎರಡನೆ ಮದುವೆ ಮಾಡಿಕೊಇಳ್ಳಬೇಕೂಂತ ಇದಾರಲ್ಲಾ - ಅದಕ್ಕ ಅವಳೇನೂ ತಕರಾರು ತಗೀಲಿಲ್ಲಾ?

**ಬಾಯಿ :**- ಏನೂ ಇಲ್ರಿ. ಭಾಂಡೇ ಎಲ್ಲಾ ಬೆಳಗಲಾಕ ನನ್ನ ಒಬ್ಬ ಆಳಿನ ಹಾಂಗಾದರೂ ಇಟ್ಟಗೊಂಡರೆ ಸಾಕಂತ ಹೇಳಿದಳ್ರಿ.

**ಕಾಶಮ್ಮ :**- ಹೌದಾ? ಈಗೆಲ್ಲಿ ಅವಳು?

**ಬಾಯಿ :**- ತೌರಮನ್ಯಾಗದಾಳ್ರಿ. (ಚಂಬಣ್ಣ - ಬುದ್ದರ್ಣಣನವರ ಮಾತುಗಳಲು ಕೇಳಬರುತ್ತವೆ.)

**ಕಾಶಮ್ಮ :**- ತೌರಮನೆ - ಇದೇ ಊರು ಅಂತ ಕಾಣಸ್ತದ.

**ಬಾಯಿ :**- ಹೂನ್ರಿ..... (ಒಳಗೆ ಹೋಗುವಳು. ಅದೇ ಬಾಗಿಲಿನಿಂದ ಮೊದಲು ಚಂಬಣ್ಣ ಬುದ್ದಣ್ಣ - ಆ ಮೇಲೆ ನರಸಣ್ಣ ಬಂದು ಕುರ್ಚಿಗಳಲ್ಲಿ ಕುಳಿತುಕೊಳ್ಳುತ್ತಾರೆ.)

**ಚಂಬಣ್ಣ :**- ಎಲಾ! ಟೀ ಯಾರಿಗೆ ಬೇಕಿತ್ತು ಈವಾಗ? ಸುಮ್ಮನೇ ನಿಮಗೆಲ್ಲ ತೊಂದರೆ.

**ಬುದ್ದಣ್ಣ :-** ತೊಂದರೆ ಏನು ಬಂತು ತಕ್ಕೊಳ್ಳಿ.

**ಚಂಬಣ್ಣ :-** ನೋಡಿ ಬುದ್ದಪ್ಪನವರೇ, ನನಗುಳಿದಿರೋದು ಇನ್ನೊಂದೇ ಸಂಶಯ. ಅದಷ್ಟು ಪರಿಹಾರವಾದರೆ ಆಯ್ತು.

**ಬುದ್ದಣ್ಣ :-** ಅದೇನು ಹೇಳಿರಲ್ಲ. ಆದಷ್ಟು ಬಿಚ್ಚಿ ಮಾತನಾಡೋದು ಒಳ್ಳೇದು.

**ಚಂಬಣ್ಣ :-** ನೋಡಿ. ದಯಮಾಡಿ ಮನಸ್ಸಿಗೆ ಹಚ್ಚಿಕೋ ಬೇಡಿ. ಒಬ್ಬ ಮಗಳಿಗೆ ನಾನು ತಂದೆಯಾದ್ದರಿಂದ ಇದನ್ನೆಲ್ಲಾ ಯೋಚಿಸಬೇಕಾಗಿದೆ.

**ಬುದ್ದಣ್ಣ :-** ಅದಕ್ಕೇನಂತೆ ಕೇಳಬಹುದಲ್ಲ.

**ಚಂಬಣ್ಣ :-** ನರಸಪ್ಪನವರ ಮೊದಲೇ ಸಂಬಂಧದ ವಿಷಯ ನನಗೇನೂ ಗೊತ್ತಾಗಲಿಲ್ಲ. ಈಗಾಗಲೇ Divorce ಏನಾದರೂ ಆಗಿದೆಯೆ – ಅಥವಾ ಅವರೇ ಸ್ವತಃ ಒಪ್ಪಿಗೆ ಕೊಟ್ಟರೇ? – ಇದನ್ನೆಲ್ಲಾ ನಾನು ಯಾಕೆ ವಿಚಾರಿಸ್ತ ಇದೀನಂತಂದ್ರೆ – ಎಷ್ಟಾದರೂ ಕಾನೂನಂದ್ರೆ ಕಾನೂನೇ ಅಲ್ವೆ? ಆ ಮೇಲೆ ನಾವು ನೀವು ಇರುಳು ಕಂಡ ಬಾವಿಗೆ ಹಗಲು ಹೊತ್ತಿನಲ್ಲೇ ಬಿದ್ದ ಹಾಗಾದೀತು – ಅಲ್ಲ – ಮಾತು ಹೇಳ್ತೀನಿ.

**ಕಾಶಮ್ಮ :-** ಸ್ವಂತ ಅವಳೇ ಒಪ್ಪಿಗೆ ಕೊಟ್ಟಿದಾಳೇಂತ ಬಿಡೀಂದ್ರೆ.

**ಚಂಬಣ್ಣ :-** Good! ನಿನಗ್ಯಾರೇ ಹೇಳಿದ್ದು?

**ಕಾಶಮ್ಮ :-** ಯಾರೇನು? ಇವರ ಮನೆಗೆ ಭಾಂಡೇ ಬೆಳಗಲಿಕ್ಕೆ ಬರ್ತಾಳಲ್ಲ – ಹೆಂಗಸು – ಅವಳು, (ನರಸಣ್ಣ ಆಶ್ಚರ್ಯದಿಂದ ಕಣ್ಣರಳಿಸಿ ನೋಡತೊಡಗುತ್ತಾನೆ.) ಒಬ್ಬ ಮನೆಯ ಆಳಿನ ಹಾಗೆ ನಡೆಸಿಕೊಂಡ್ರೂ ಸಾಕಂತ ಹೇಳಿದಳಂತೆ. ಸೋಡಪತ್ರ ಇಸಿದುಕೊಂಡರೆ ಇನ್ನೊಬ್ಬ ಗಂಡನಾದರೂ ಸಿಗಬೇಡವೇ ಹೆಸರು ಹೇಳಿಕೊಳ್ಳಿಕ್ಕೆ?

**ಬುದ್ದಣ್ಣ :-** ಹೂಂ – ಅದೂ ಸರಿ ಅನ್ನಿ – ಈಗಿನ ಹೆಣ್ಣು ಹೆಚ್ಚಾದ ಕಾಲದಲ್ಲಿ!

**ಚಂಬಣ್ಣ :-** (ಚಹಾ ಗುಟುಕರಿಸುತ್ತ) ಚಹಾ ಅವಳೇ ಮಾಡಿದ್ದಾ? Good! ನೋಡಿ, ಬುದ್ದಪ್ಪನವರೇ, ನಾನು ಇಂದಿನ ಕಾಲದ ಮನುಷ್ಯ. ಸಂಪ್ರದಾಯ – ಗಿಂಪ್ರದಾಯ ನನ್ನ ಮಟ್ಟಿಗೆ ಎಲ್ಲಾ ಗೊಡ್ಡು ಹರಟೆ. ಮುಚ್ಚುಮರೆ – ನನಗೆ ಬೇಕಿಲ್ಲ . ಬಾಯಿಬಿಟ್ಟು ಹೇಳಲೇಬೇಕೆಂದರೆ ನನಗೆ ನಿಮ್ಮಸಂಬಂಧ ತುಂಬ ಇಷ್ಟ. ಇನ್ನು ನೀವು ಬಂದು ಕನ್ಯಾ ನೋಡುವುದೊಂದೆ ಬಾಕಿ. ಏನಂತೀರಿ?

**ಬುದ್ದಣ್ಣ :-** ಹೌದು ಯಾಕಲ್ಲ?
**ಚಂಬಣ್ಣ :-** ಗೋಣು ಹಾಕಿದರೆ ನಿಮ್ಮ ಕರ್ತವ್ಯವೆಲ್ಲಾ ಮುಗಿದಂತಾಗಲಿಲ್ಲ. ಎಲ್ಲಾ ಭಾರ ನೀವೇ ಹೊರಬೇಕು. ಅದೀಗ ನಿಜವಾದ ಗೆಳೆತನ.

**ನರಸಣ್ಣ :-** (ನಗುತ್ತ) ಅವನು ಹೊರೋಲ್ಲಾಂದರೂ ನಾವು ಕೇಳಬೇಕಲ್ಲ.

**ಚಂಬಣ್ಣ :-** ಸರಿ ಸರಿ. ಹಾಗಾದರೆ ನಾವು ಬರುತ್ತೇವೆ. ನೀವು ಈ ಹೊತ್ತೇ ಯಾಕೆ ನಮ್ಮೂರಿಗೆ ಬರಬಾರದೂ – ಅಂತ? ನೋಡಿ – ಇಂಥಾ ಕೆಲಸ ಎಷ್ಟು ಸಾಧ್ಯವೋ ಅಷ್ಟು ಬೇಗ ಮುಗಿಸಬೇಕು. ಶುಭಸ್ಯ ಶೀಘ್ರಂ, ಏನಂತೀರಿ ಬುದ್ದಣ್ಣಾ...?

**ಬುದ್ದಣ್ಣ :**- ಅದು ಸರಿ. ಆದರೆ -
**ಚಂಬಣ್ಣ :**- ನೋಡಿ, ಆದರೆ ಗೀದರೆ - ಇಂಥಾ ಸಂದರ್ಭದಲ್ಲಿ ಉಚ್ಚರಿಸಬಾರದು. ಹೇಗೂ ನಮ್ಮ ಕಾರಿದೆ. ನೋಡಿ ಬರೋದಕ್ಕೇನು? ನಿಮಗೆ ಸೇರಿತು - ಇಲ್ಲಾ - ಅದೆಲ್ಲಾ ಆ ಮೇಲೆ. ನನ್ನ ಸ್ನೇಹಿತನೊಬ್ಬನಿದ್ದಾನೆ. ಅವನ ಮನೆಗಿಷ್ಟು ಹೋಗಿ ಬರ್ತೀವಿ. ಬರೋದರಲ್ಲೇ ನೀವು ಇಬ್ಬರೂ ಸಿದ್ಧರಾಗಿರಬೇಕು. ಆತ ಮನೆಯಲ್ಲಿ ಇಲ್ಲದಿದ್ದರೆ ಐದಾರು ನಿಮಿಷಗಳಲ್ಲೇ ತಿರುಗಿ ಬರಬಹುದು... ಸಿದ್ಧವಾಗಿರಬೇಕು. ಹಂ?

(ಎದ್ದು ಹೊರಡುವರು. ಕಾಶಮ್ಮನೂ ಬೆಂಬತ್ತುವಳು. ಬಾಗಿಲವರೆಗೆ ಹೋಗಿ ಮತ್ತೆ ತಿರುಗಿ ನಿಂತು - "ಸಿದ್ಧವಾಗಿರಬೇಕು ಹೂಂ?" - ಎಂದು ಹೋಗುತ್ತಾರೆ. ಹೊರೆಗೆ ಕಾರು ಹೊರಟ ಸಪ್ಪಳವಾಗಿ ನರಸಣ್ಣ ತುಂಬ ಉತ್ಸಾಹದಿಂದ ಬಾಗಿಲ ವರೆಗೆ ಹೋಗಿ ಅದು ದೂರ ಹೋದುದು ಖಾತ್ರಿಯಾಗುತ್ತಲೂ ಓಡಿ ಬಂದು ಬುದ್ದಣ್ಣನ ಭುಜಗಳನ್ನು ಅಲುಗಿಸುತ್ತ)

**ನರಸಣ್ಣ :**- ಕವಿ, ನಿನ್ನ ಉಪಕಾರವನ್ನು ಹೇಗೆ ಸ್ಮರಿಸಬೇಕೋ ನನಗೆ ತಿಳೀತಾ ಇಲ್ಲ. ಅಂದ ಹಾಗೇ - ಈ ಬಾಯಿನ್ನ ಎಲ್ಲಿಂದ ಹಿಡಿದು ತಂದೆಯೋ ಖೋಡೀ?

ಬುದ್ದಣ್ಣ - ನನ್ನ ಉಪಕಾರ ಸ್ಮರಿಸೋ ಮೊದಲು ಅವಳ ಉಪಕಾರ

************

## ಅಸ್ತೋ - ವ್ಯಸ್ತ

[ತುಸು ಸಮಯದವರೆಗೆ ತೆರೆ ಹಾಗೇ ಬಿದ್ದಿದ್ದು ಗಂಟೆಯೊಂದಿಗೆ ಸರಿಯುತ್ತದೆ. ಆಮೇಲೆ ಒಮ್ಮೆಲೆ ಪರಾಕು ಕೇಳಿಸತೊಡಗುತ್ತದೆ.]

ಭೋ ಪರಾಕ್! ಭೋಭೋ ಪರಾಕ್!
ರಾಜಕಾರಣಿ ಚಂಡಪ್ರಚಂಡ ಹೆಂಡತಿಗೆ ಗಂssಡ.
ಸರ್ವಗುಣಾನ್ವಿತ - ಲಂಚ ನಿರ್ಮೂಲನ ಮಲ್ಲಾ!
ಭೋ ಪರಾಕ್! ಭೋ ಪರಾಕ್!

(ಅದು ಪೂರ್ಣ ಮುಗಿಯುವವರೆಗೆ ರಂಗದ ಅತ್ತ ಇತ್ತ ರಾಜನು ಸುಳಿದಾಡಬೇಕು. ಆ ಮೇಲೆ ಪರಾಕು ಮುಗಿಯುತ್ತಲೂ ಅಸನಾರೂಢನಾಗುತ್ತನೆ. ವಂದಿಮಾಗಧರೂ ಕುರ್ಚಿಯಲ್ಲಿ ಕೂಡ್ರುತ್ತಾರೆ. ರಾಜನ ಸಧ್ಯದ ಉಡುಪು ತುಂಬ ವಿಕಾರ. ತಲೆಯ ಮೇಲೆ ಬಸವಾನಿಯಿಂದ ಕಸಿದುಕೊಂಡ ಕಿರೀಟ. ಒಂದು ಊಲನ್ ಕೋಟು, ಅದೇ ನಿಲುವಂಗಿ, ಕೆಳಗೆ ನೈಟ್ ಸೂಟು. ವಂದಿಮಾಗಧರು ಮಂತ್ರಿಗಳ ಹಾಗೆ, ಕುರ್ಚೆಗಳು ಖಾಲೀ ಬಿದ್ದಿದ್ದರೆ ಸ್ವಚ್ಛ ಉಡುಪುಳ್ಳ ಪ್ರೇಕ್ಷಕರು ಹೋಗಿ ಕುಳಿತುಕೊಳ್ಳಬಹುದು. ತಮ್ಮನ್ನು ;ಪ್ರದರ್ಶಿಸಿಕೊಳ್ಳಬೇಕೆನ್ನುವ ಜನರು ಪ್ರಜೆಗಳಾಗಿ ರಂಗದ ನೆಲದ ಮೇಲೆ - ಕೂಡ್ರಬೇಕು. ಇಷ್ಟಾದ ಮೇಲೆ ಸೂತ್ರಧಾರನು - ಅವನೇ ಪ್ರಧಾನಮಂತ್ರಿ - ಎದ್ದು ಮೈಕಿನ ಹತ್ತಿರ ನಿಂತುಕೊಳ್ಳುತ್ತಾನೆ.)

**ಪ್ರಧಾನ ಮಂತ್ರಿ :**- ಮಹಾ ಅಯೋಧ್ಯೆಯ ಮಹಾ ಚಕ್ರವರ್ತಿಗಳಾದ ಮಹಾರಾಜರೇ, ಮತ್ತು ಮಹಾಪ್ರಜೆಗಳೇ, ನಮ್ಮೀ ಪುರವು ಈ ಹೊತ್ತಿನ ದಿವಸದಂಥಾ ಮಹಾದಿನವನ್ನು ಇನ್ನೆಂದಿಗೂ ಕಾಣಲಾರದು. ಅಳಿದ ಮಹಾರಾಜರುಗಳವರು ತಮ್ಮ ಶೌರ್ಯ, ಧೈರ್ಯ,

ಸ್ಥೈರ್ಯ, ಉತ್ಸಾಹಗಳಿಂದ ನಮ್ಮ ಮಹಾನಾಡನ್ನು - ಬಹಳ ಚಲೋದಾಗಿ ಮನೋಹರವಾಗಿ - ಸುಂದರವಾಗಿ ಆಳಿದರು. ಅವರ ಆಕಸ್ಮಿಕ ನಿಧನದ ನಂತರ ರಾಜ್ಯಕ್ಕೆ ದಿಕ್ಕಿಲ್ಲದಂತಾಯ್ತು. ರಾಜ್ಯವೆಂಬ ಶಿಶು ಅನಾಥವಾಯ್ತು. ತಬ್ಬಲಿಯಾಯ್ತು. ಅದಕ್ಕೆ ಕಾಲಕಾಲಕ್ಕೆ ಹಾಲುಕುಡಿಸುವವರೂ ಎರೆಯುವವರು ಇಲ್ಲದಾದರು. ಇಂಥಾ ಯಾವ ಪರೀಕ್ಷಾ ಸಮಯದಲ್ಲಿ - ಬಿಕ್ಕಟ್ಟಿನಲ್ಲಿ - ಮಹಾರಾಜರ ಸಂತಾನ ಸಂಬಂಧಿಗಳು ಇಲ್ಲದ್ದರಿಂದ ಚುನಾವಣೆ ನಡೆಯುವುದು ಅನಿವಾರ್ಯವಾಯಿತು. ಅದೂ ಯಶಸ್ವಿಯಾಗಿ ಸಾಗಿ ಇದೀಗ ನಮ್ಮಜ ಶ್ರೀಮಾನ್ ರಾಮರಾಜರವರು -

**ರಾಜ :**- (ಎದ್ದು ಮಂತ್ರಿಯ ಬಳಿ ಹೋಗಿ) ಮಹಾಚಕ್ರವರ್ತಿಗಳಾದ ರಾಮರಾಜರು -

**ಪ್ರ. ಮಂತ್ರಿ :**- ಹೂಂ - ಇದೀಗ ಶ್ರೀಮಾನ್ ಮಹಾಚಕ್ರವರ್ತಿಗಳಾದ ರಾಮರಾಜರವರು ಆರಿಸಿಬಂಧರು. ಅನಾಯಕವಾಗಿದ್ದ ನಾಡಿಗೆ ಮತ್ತೆ ಒಬ್ಬ ಸಮರ್ಥ ಪ್ರಭುಗಳು ದೊರೆತರು. ಇದು ನಮ್ಮ ಪುಣ್ಯವೇ ಅಲ್ಲವೇ?

**ಮಂತ್ರಿ ೧. :**- (ಮೈಕಿನ ಬಳಿ ದಡದಡ ಓಡಿಬಂದು) ಪುಣ್ಯವಲ್ಲದೆ ಇನ್ನೇನು? (ಎನ್ನುತ್ತ ಚಪ್ಪಾಳೆ ತಟ್ಟುವನು. ಎಲ್ಲರು ಚಪ್ಪಾಳೆ ತಟ್ಟುವರು.)

**ಪ್ರ. ಮಂತ್ರಿ :**- ಇನ್ನು ಮೇಲೆ ನಮ್ಮ ಮಹಾಪ್ರಭುಗಳ ಅಲ್ಪ ಪರಿಚಯ. ಇವರು ಹುಟ್ಟಿದ್ದು - ಕ್ರಿಸ್ತಪೂರ್ವ - ನಾಲ್ಕು -

ರಾಜ - (ಮೈಕಿನ ಬಳಿ ಓಡಿ ಬಂದು) ಅಲ್ಲಲ್ಲ - ನಾನು ಹುಟ್ಟಿದ್ದು ಕ್ರಿ.ಶ.೧೯೩೮ ರಲ್ಲಿ, ಹೆಹೆ...(ಮತ್ತೆ ಸ್ವಸ್ಥಾನ)

ಪ್ರ.ಮಂತ್ರಿ - ಹೂಂ - ೧೯೩೮ರಲ್ಲಿ, ಇದೇ ಊರಲ್ಲಿ. ಈ ಹಿಂದೆ ದೊಡ್ಡ ಹುದ್ದೆಯಲ್ಲಿದ್ದವರೂ ನಿಷ್ಕಪಟ ಮನಸ್ಸಿನಿಂದ, ನಿರ್ಮಲ ಹೃದಯದಿಂದ ಸೇವೆ ಸಲ್ಲಿಸಿದವರೂ ಆಗಿದ್ದಾರೆ. ಅವರು ಜನ - ದನಾನುರಾಗವನ್ನು ಹೊಂದಿದ್ದಾರೆ.ಪಡೆದಿದ್ದಾರೆ! ಅವರು ಬಲಿಷ್ಠರೂ,. ಶೂರರೂ, ಧೀರರೂ, ಕಠಿಣರೂ ಆಗಿರುವರಲ್ಲದೆ -

**ರಾಜ :**- (ಮೈಕ್ ಬಳಿ ಠಣ್ಣನೇ ಹಾರಿ) ಎಲ್.ಎಲ್.ಬಿ. ಪಾಸಾದವರೂ... ಆಗಿದ್ದಾರೆ. (ಸ್ವಸ್ಥಾನ)

**ಪ್ರ.ಮಂತ್ರಿ :**- ಇಂಥವರು ನಮ್ಮ ರಾಜ್ಯದಲ್ಲಿ ಹುಡುಕುತ್ತ ಹೋದರೂ ಸಿಗಲಾರರು. ಅದೇಕೆ ಸಿಗುವದೇ ಇಲ್ಲ. ಅಷ್ಟೇಕೆ ಸಿಕ್ಕಿಲ್ಲ. ಇನ್ನು ಮೇಲೆ ನಮ್ಮ ಪ್ರಭುಗಳು ಪ್ರಜೆಗಳನ್ನು ಕುರಿತು ಭಾಷಣ ಮಾಡಲಿದ್ದಾರೆ.

(ಕುಳಿತುಕೊಳ್ಳುವನು. ರಾಜನು ಠೀವಿಯಿಂದೆದ್ದು ಉಡುಪು ಸರಿಪಡಿಸಿ ಒಮ್ಮೆ ಪ್ರೇಕ್ಷಕರನ್ನೂ ಇನ್ನೊಮ್ಮೆ ಮಂತ್ರಿಗಳನ್ನೂ ಈಕ್ಷಿಸಿ "ನೀರು" ಎನ್ನುತ್ತಾನೆ. ಪ್ರ.ಮಂತ್ರಿ ಕೂಡಲೇ ಒಬ್ಬನನ್ನೂ ಓಡಿಸಿ ನೀರು ತರಿಸಿ ಮೇಜಿನ ಮೇಲೆ ಇರಿಸುತ್ತಾನೆ.)

**ರಾಜ :**- ನನ್ನ ಪ್ರೀತಿಯ ಪ್ರಜೆಗಳೇ, ಮಂತ್ರಿಗಳೇ, ಪ್ರೇಕ್ಷಕರೇ. ನೀವುಗಳೆಲ್ಲ ಒತ್ತಾಯ ಮಾಡಿ ನನ್ನನ್ನು ಈ ಸ್ಥಾನದ ಮೇಲೆ ಕೂಡ್ರಿಸಿದಿರಿ. ಅದಕ್ಕಾಗಿ ನಿಮಗೆ ನನ್ನ ಧನ್ಯವಾದಗಳು. ಈಗ ಕೆಲವು ದಿವಸಗಳ ಹಿಂದೆ ನನ್ನ ಮಿತ್ರರು ಬಂದು "ನೀವು ರಾಜರಾಗಬೇಕು" ಎಂದು ನನ್ನನ್ನು ಕೇಳಿದಾಗ ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ. "ನಾನು ಒಲ್ಲೆ - ಈ ಸ್ಥಾನಕ್ಕೆ ಇನ್ನು ಯಾರನ್ನಾದರೂ ಗುಣವಂತರನ್ನು ಆಯ್ದುಕೊಳ್ಳಿ. ನಾನು ಎಲೆಯಮರೆಯ ಹೂವಿನಂತೆ ಹಿಂದೆ ನಿಂತುಕೊಂಡೇ ಸೇವೆ ಮಾಡುತ್ತೇನೆ" ಎಂದು ಹೇಳಿದೆ. ಅದಕ್ಕವರು "ರಾಜ್ಯದಲ್ಲಿ ನಿಮ್ಮಷ್ಟು ಶೂರರೂ, ಧೀರರೂ, ಜಾಣರೂ, ಬಲಿಷ್ಠರೂ ಯಾರಿದ್ದಾರೆ? ನೀವು ಆಗಲೇಬೇಕು" ಹೀಗೆಂದು ನನ್ನ ಕಾಳು ಹಿಡಿದು ಕೇಳಿಕೊಂಡಾಗ ಪ್ರಜೆಗಳ ಸೇವೆಗಾಗಿ ನಾನು ಒಪ್ಪಬೇಕಾಯಿತು. ಇಲ್ಲದಿದ್ದರೆ ನಾನು ಈ ರಾಜ್ಯ ಪದವಿಯನ್ನು ಸ್ವೀಕರಿಸುತ್ತಿರಲಿಲ್ಲ. (ಮೇಜಿನ ಮೇಲಿನ ನೀರು ಕುಡಿಯುವನು.)

ನನ್ನ ನಾಡಬಾಂಧವರೇ,

ಈಗ ಐಲೀಕಡೆ ಏನು ಸಾಗಿದೆ? ಯಾರ್ಯಾರು ಎಷ್ಟೆಷ್ಟು ಮುಂದುವರಿದಿದ್ದಾರೆ? ಆದರೆ ನಮ್ಮ ದೇಶವು ಹಿಂದೆ ಉಳಿದಿದೆ. ಅದಕ್ಕಾಗಿ ನಮ್ಮ ದೇಶವು ಹೆಜ್ಜೆಗೊಂದು ಮೊಳ ಮುಂದೆ ಬರುವಂತೆ ನಾವು ಯತ್ನಶೀಲರಾಗಬೇಕು. ಅದಕ್ಕಾಗಿ ನಮ್ಮೆಲ್ಲರ ಬೆಮರು ಅಗತ್ಯ. ಬೆಮರು ಬಾರದವರುಸ ಕೊನೆಯ ಪಕ್ಷ ತಮ್ಮ ರಕ್ತವನ್ನಾದರೂ ಕೊಟ್ಟು ನಾಡಿನ ಈ ಮಹಾಕಾರ್ಯಕ್ಕೆ ತಮ್ಮ ಅಳಿಲು ಸೇವೆ ಸಲ್ಲಿಸಬೇಕು. ಅಂದಾಗ ಮಾತ್ರ ನಾವು ನಮ್ಮ ವೈರಿಗಳನ್ನು ಪ್ರತಿಭಟಿಸಲು ಶಕ್ತರಾಥೇವು - ಪ್ರತಿಭಟಿಸಬೇಕಾದರೆ ಶಕ್ತಿಬೇಕು. ಶಕ್ತಿಯಿಂದಲೇ ಯುಕ್ತಿ! ಯುಕ್ತಿಯಿಂದಲೇ ಭುಕ್ತಿ!! (ಮೇಜು ಗುದ್ದವನು. ಚಪ್ಪಾಳೆ)

**ಮಂತ್ರಿ ೧ :-** ಆಹಾ! ನಮ್ಮ ಅರಸರಲ್ಲಿ ಎಷ್ಟು ಚೋಟಿ ಅಭಿಮಾನವಿದೆ?

**ಮಂತ್ರಿ ೨ :-** (ಮೈಕಿನೆದುರು ಬಂದು) ಆಹಾ! ನಮ್ಮ ಅರಸನ ಮುತ್ಸದ್ದಿತನವು ಎಷ್ಟು ಇಂಚು ಉದ್ದವಿದೆ?

**ಮಂತ್ರಿ ೩ :-** ಆಹಾ! ನಮ್ಮ ಅರಸರ ತಲೆಯಲ್ಲಿ ಎಷ್ಟು ಬುಟ್ಟಿ ಜ್ಞಾನವಿದೆ?

**ರಾಜ :-** ನನ್ನ ಪ್ರಜೆಗಳು ಹೀಗೆ ಕೇಳಬಹುದು. ಶಕ್ತಿ ಬೇಕಾದರೆ ಹಾಲು ಕುಡಿಯಬೇಕಲು. ಹಾಲಿನಲ್ಲಿ ಗೌಳಿಯು ನೀರು ಕೂಡಿಸಿ ಕೊಡುತ್ತಾನಲ್ಲ, ಹೇಗೆ ಮಾಡೋಣ? - ಎಂದು. ಆದರೆ ನನ್ನ ಪ್ರಜೆಗಳೇ, ಈ ಚಿಂತೆ ನಿಮ್ಮ ಅರಸನಿಗೆ ಇಲ್ಲವೆಂದು ತಿಳಿಯಬೇಡಿ. ನನ್ನನ್ನೂ ಇದೇ ಚಿಂತೆ ಈ ಊರಿಗೆ ನಾನು ಕಲಿಯುವುದಕ್ಕೆ ಬಂದಾಗಿನಿಂದ ಕಾಡುತ್ತಿದೆ. ಗೌಳಿಯನ್ನು "ನೀರಿನಲ್ಲೇಕೆ ಹಾಲು ಕೂಡಿಸಿ ಕೊಡುತ್ತೀ?" ಎಂದು ಕೇಳಿದರೆ "ಇಲ್ಲ, ಎಮ್ಮೆಯೇ ಈ ಹೊತ್ತು ನೀರು ಹೆಚ್ಚು ಕುಡಿಯಿತು" ಎಂದು ಹೇಳುತ್ತಾನೆ. ಇನ್ನು ಮೇಲೆ ಎಮ್ಮೆ ಆಕಳುಗಳಿಗೆ ಯಾರೂ ನೀರು ಕುಡಿಸಬಾರದೆಂದು ನಿಮ್ಮ ಪ್ರಭುಗಳು ಆಜ್ಞೆ ಹೊರಡಿಸುತ್ತಾರೆ. ಅಂದರೆ ಉತ್ತಮ ಹಾಲು ಎಲ್ಲರಿಗೂ ದೊರೆಯುತ್ತದೆ.

(ಚಪ್ಪಾಳೆಯ ಹುಚ್ಚು ಹೊಡೆತ. ಮಂತ್ರಿಗಳು ಕುಣಿಕುಣಿದು ಚಪ್ಪಾಳೆ ತಟ್ಟಬೇಕು. ಅಷ್ಟರಲ್ಲಿ ಇಬ್ಬರು ಸೇವಕರು ಬಸವಾನಿಯನ್ನು ಬಂಧಿಸಿ ಹಿಡಿದು ತರುವರು.)

**ಸೇವಕರು :-** ಪ್ರಭೋ ಕಾಪಾಡಬೇಕು! ಕಾಪಾಡಬೇಕು!

**ರಾಜ :-** (ಓಡಿ ಹೋಗಿ 'ಸಿಂಹಾಸನ'ವನ್ನೇರಿ) ಇವನು ಯಾರು? ಇವನು ಮಾಡಿದ ತಪ್ಪೇನು?

**ಬಸವಾನಿ :-** (ಕೊಸರಿಕೊಳ್ಳಲು ಕ್ಷಣಕ್ಷಣವೂ ಯತ್ನಿಸುವನಾದರೂ ಸೇವಕರು ಬಿಡಲೊಲ್ಲರು.) ನಿನಗ ಈಗ ಹ್ಯಾಂಗ ಗುರುತ ಸಿಕ್ಕೀತಲೇ? ಯಾಕ ಮರವಾಗ್ಲಾಕ ಹತ್ತೇತೇನ? ನಿನ್ನ ತಲೀಮ್ಯಾಲಿನ ಕಿರೀಟ ಯಾರದದ ಅಂಬೋದರೆ ಗೊತ್ತದಃದನೋ ಇಲ್ಲೊ?

**ಪ್ರ. ಮಂತ್ರಿ :-** (ಓಡಿ ಬಳಿ ಬಂದು) ಬಸವಾನಿ, ನೀನಾದರೂ ಸುಮ್ಕಿರೋ ಮಾರಾಯಾ!

**ಬಸವಾನಿ :-** ನೀ ಯಾವನ್ಲೇ ನಡಕ?

**ರಾಜ :-** (ಸಿಂಹಾಸನದಿಂದ ಠಣ್ಣನೇ ಹಾರಿ ಬಂದು ನಾಟಕೀಯವಾಗಿ ಬಸವಾನಿಯನ್ನು ನೋಡುತ್ತ) ಮಂತ್ರೀ.....

**ಪ್ರ. ಮಂತ್ರಿ :-** ಮಹಾಪ್ರಭೂ!

**ರಾಜ :-** ನಮ್ಮ ಹಿಂದಿನ ರಾಜರಿಗೆ ಇನ್ನೂ ರಾಜ್ಯವಾಳುವ ಆಸೆಯಿದ್ದಿತಷ್ಟೆ? (ಪ್ರ. ಮಂತ್ರಿ ಪ್ರತಿ ಮಾತಿಗೂ ಬಾಗಿ ಹೂಂಗುಟ್ಟುವನು)... ಅವರು ಇಂಥಾ ನಿಲುವಂಗಿಯನ್ನೇ ಧರಿಸುತ್ತಿದ್ದರಷ್ಟೇ? ಅವರ ಮೂಗು ಚೋಟಿ ಉದ್ದವಾಗಿದ್ದಿತಷ್ಟೆ?... ಪ್ರಧಾನರೇ ತಿಳೀತು! ತಿಳೀತು!

**ಪ್ರ. ಮಂತ್ರಿ :-** ಪ್ರಭುಗಳು ಆಜ್ಞೆ ಮಾಡಬೇಕು.

**ರಾಜ :-** ಈತ ಹಿಂದಿನ ರಾಜನು ಎಂಬುದರಲ್ಲಿ ಸಂಶಯವಿಲ್ಲ. ಗೋರಿಯಿಂದ ಎದ್ದು ಭೂತವಾಗಿ ಇನ್ನೂ ರಾಜ್ಯವಾಳುವ ಆಸೆಯಿಂದ ಓಡಿ ಬಂದಿದ್ದಾನೆ.

**ಬಸವಾನಿ :-** ನಾ ಎಲ್ಲಿ ಸತ್ತೀದೇನಲೇ? ಕಣ್ಣೋ ಪರಟಿ ತೂತೊ? (ಪ್ರಧಾನ ಮಂತ್ರಿಯ ಕಡೆಗೆ ಮುಖ ಮಾಡಿ) ಯಾಕೋ ಕಿಟ್ಯಾ - ನಾ ಸತ್ತೀದೇನೇನಲೇ?

**ರಾಜ :-** ಹಹ್ಹಾ! ಇವನ ನಿಸ್ಸಂಶಯವಾಗಿ ಸತ್ತ ಮಹಾರಾಜ!

**ಬಸವಾನಿ :-** ಏಯ್, ನನಗ ಅಂಥಿಂ ಥಾ ಮಾತಾಡಬ್ಯಾಡಲೇ, ಮಂದ್ಯಾಗ ಬಾಯಿಗಿ ಬಂದ ಹೋಗತದ ಮತ್ತ. ನಂದೇನ ಖಮ್ಮಾನ ಬಾಯಿ!

**ರಾಜ :-** ನೀನು ಜೀವಂತನಾಗಿರುತ್ತೀ ಎಂಬೋದಕ್ಕೇನು ಸಾಕ್ಷಿ? ಯಾರು ಹೇಳುತ್ತಾರೆ? ಹಿಹ್ಹಿ! ಇವನನ್ನು ಕೂಡಲೇ ಭದ್ರವಾದ ಸಮಾಧಿಯಲ್ಲಿ ಮುಚ್ಚಿಗಿಡಿ. ಹೂಂ ಬೇಗ! (ಬಸವಾನಿ ತುಂಬ ಕೊಸರಿಕೊಳ್ಳಲೆತ್ನಿಸಿದರೂ ಬಿಡದೆ ಸೇವಕರು ಅವನನ್ನು ಹೊರೆಗೆ ಎಳೆದುಕೊಂಡು ಹೋಗುವರು. ಬಸವಾನಿ ಆ ಪ್ರಸಂಗದಲ್ಲಿ ತನ್ನ ಬಾಯಿಗೆ ಬಂದ ಬೈಗುಳಗಳನ್ನು ಒದರುತ್ತ ಹೋಗುವನು. ಪ್ರೇಕ್ಷಕರಲ್ಲಿ ಚಪ್ಪಾಳೆ. ಕುಳಿತ ಪ್ರಜೆಗಳು “ರಾಮರಾಜ ಮಹಾರಾಜಕಿ ಜೈ” - ಎಂದು ಉದ್ಘೋಷಿಸುವರು)

**ರಾಜ :-** ಮಹಾಮಂತ್ರೀ……

**ಪ್ರ.ಮಂತ್ರಿ :-** (ಎದ್ದು ನಿಂತು ಬಾಗಿ) ಪ್ರಭುಗಳೇ,

**ರಾಜ :-** ಈ ಹೊತ್ತಿನ ದರಬಾರನ್ನು ಇನ್ನು ಮೇಲೆ ಯಥಾಸಾಂಗವಾಗಿ ಪ್ರಾರಂಭಿಸಬಹುದೆಂದು ಮಹಾಪ್ರಭುಗಳು ಅಪ್ಪಣೆ ಕೊಡತ್ತೇವೆ.

**ಪ್ರ.ಮಂತ್ರಿ :-** (ಮತ್ತೆ ಬಾಗಿ) ಅಪ್ಪಣೆ ಪ್ರಭೂ. (ಚಪ್ಪಾಳೆ ತಟ್ಟಿ) ಯಾರಲ್ಲಿ?

**ಸೇವಕ :-** (ಪ್ರವೇಶಿಸಿ) ಏನಪ್ಪಣೆ ಪ್ರಭೂ?

**ಪ್ರ.ಮಂತ್ರಿ :-** ಬಹುಜನ ಪ್ರಜೆಗಳಿಂದ ಆಪಾದಿತನಾದ ಆ ವ್ಯಾಪಾರಿಯನ್ನು ಕೂಡಲೇ ಹಿಡಿದು ತನ್ನಿ.

**ಸೇವಕ :-** ಅಪ್ಪಣೆ. (ಬಾಗಿ ನಿಷ್ಕ್ರಮಣ, ಕೂಡಲೇ ಇಬ್ಬರು ಸೇವಕರು ವೈಶ್ಯಗ ಪ್ತನನ್ನು ಹಿಡಿದುಕೊಂಡು ಬಂದು ಸಭಾ ಮಧ್ಯದಲ್ಲಿ ನಿಲ್ಲಿಸಿ ಮತ್ತೆ ಬಾಗಿ ನಿಷ್ಕ್ರಮಿಸುತ್ತಾರೆ.)

**ರಾಜ :-** ಎಲಾ ಮಂತ್ರೀ ಈತನು ನೋಡುವುದಕ್ಕೆ ತುಂಬಾ ಸಂಭಾವಿತನಂತೆ ಕಾಣುತ್ತಾನೆ. ಈತನ ಮೇಲೆ ಯಾವ ದೋಷವನ್ನು ಹೊರಿಸಲಾಗಿದೆ?

**ಪ್ರ.ಮಂತ್ರಿ :-** (ಬಾಗಿ) ಚಿತ್ತೈಸಬೇಕು. ಈತನ ಹೆಸರು ವೈಶ್ಯ ಗುಪ್ತ. ಈತನು ನಮ್ಮ ರಾಜ್ಯದ ಶ್ರೇಷ್ಠ ವ್ಯಾಪಾರಿಯಿದ್ದು ಮೋಸ ಮಾಡಿ ಸರಕುಗಳ ಬೆಲೆಯನ್ನು ಬೇಕುಬೇಕಾದಂತೆ ಏರಿಸಿ ನಮ್ಮ ಪ್ರಜೆಗಳನ್ನು ಹಿಂಡುತ್ತಿದ್ದಾನೆ. ಸುಲಿಯುತ್ತಿದ್ದಾನೆ. ಹೀಗಾಗಿ ದುಡ್ಡಿನ ಮದದಿಂದ ಸೊಕ್ಕಿಗೆ ಬಂದಿದ್ದಾನೆ. ಇವನನ್ನು ನೋಡಿ ಪ್ರತಿಯೊಬ್ಬ ಪ್ರಜೆಯೂ ಗುರುಗುಟ್ಟುತ್ತಾನೆ. ಇವನನ್ನು ಪ್ರಭುಗಳ ಚಿತ್ತ ವಿಚಾರಿಸಿ ಪ್ರಜೆಗಳಿಗೆ ನ್ಯಾಯದಾನ ಮಾಡಬೇಕು.

**ರಾಜ :-** ಎಲೈ ಪ್ರಜೆಯೇ, ಮಂತ್ರಿಗಳೂ ಜನರೂ ನಿನ್ನ ಬಗೆಗೆ ಆಪಾದಿಸಿದ್ದು ನಿಜವೇ?

**ವೈಶ್ಯಗುಪ್ತ :-** (ಬಾಗಿ) ಮಹಾಪ್ರಭುಗಳವರು ನನ್ನ ಮಾತುಗಳನ್ನು ದಯಮಾಡಿ ಕೇಳುವ ಕೃಪೆ ಮಾಡಬೇಕು. ನಾನು ಜೀವನದಲ್ಲಿ ಎಂದೂ ಸುಳ್ಳು ಮಾತನಾಡಿದವನಲ್ಲ!

**ಪ್ರ. ಮಂತ್ರಿ :-** ಪ್ರಭುಗಳ ಎದುರಿನಲ್ಲಿ ಸುಳ್ಳು ಹೇಳುತ್ತೀಯಾ ಮೂಢಾ!

**ರಾಜ :-** ಹಾಗಾದರೆ ಇವರೆಲ್ಲರ ಆಪಾದನೆ ಸುಳ್ಳೇ? ನೀನು ಪ್ರಾಮಾಣಿಕನೆಂಬುದನ್ನು ಪ್ರಭುಗಳು ಹೇಗೆ ನಂಬಬೇಕು? ನಿನ್ನ ಪರವಾಗಿ ಸಾಕ್ಷಿ ಹೇಳಲು ಯಾರಿದ್ದಾರೆ?

**ವೈಶ್ಯಗುಪ್ತ :-** ನನ್ನ ಆರಾಧ್ಯ ದೇವತೆಯಾದ ಲಕ್ಷ್ಮೀದೇವಿ ಪ್ರಭೂ.

**ರಾಜ :-** (ವಿಚಿತ್ರ ಆಟಿಗೆಯನ್ನು ಕಂಡ ಮೂಕ ಮಗುವಿನಂತೆ ನಗುತ್ತ) ಹಹ್ಹ! ಏನಂದಿ? ಲಕ್ಷ್ಮೀದೇವಿ! ಹಿ ಹ್ಹಿ! ಓಹೋ ಹಾಗಾದರೆ ಅವಳಿಂದ ಸಾಕ್ಷಿ ಹೇಳಿಸುವೆಯಾ? ಆಗಲಿ. ಅವಳು ಬಂದು ಹೇಳಿದರೆ ನಾವು ನಂಬುತ್ತೇವೆ. ಎಲ್ಲಿ? ಅವಳನ್ನು ಕರೆ. ಅವಳ ದರ್ಶನದಿಂದ ನಾವೂ ಪುನೀತರಾಗೋಣ.

**ವೈಶ್ಯಗುಪ್ತ :-** ಪ್ರಭೋ, ಧರ್ಮಜ್ಞರಾದ ತಮ್ಮ ಸಂನಿಧಾನದಲ್ಲಿ ಹೇಗೆ ಬಿನ್ನೈಸಿಕೊಳ್ಳಬೇಕೆಂಬುದೇ ತಿಳಿಯದಾಗಿದೆ. ಪ್ರಭೂ ನಿಮ್ಮ ಮೇಲೆ ನನ್ನ ದೇವತೆಗೆ ತುಂಬ ಅಭಿಮಾನ, ಪ್ರೀತಿ, ವಾತ್ಸಲ್ಯ. ನೀವು ಅರಸರಾಗಿ ಆರಿಸಿ ಬಂದಂದಿನಿಂದ "ನನ್ನ ಪ್ರೀತಿಯ ಪುತ್ರನಾದ ಅರಸನಿಗೆ ನನ್ನ ಪ್ರಸಾದವನ್ನು ಕೊಡು. ಕ್ಕೊಡು, ಖೊಡೂ" ಎಂದು ದಿನಾಲೂ ಪೀಡಿಸುತ್ತಿದ್ದಾಳೆ.

**ರಾಜ :-** ಹಿಹ್ಹಿ!ಹ್ಹಿ! ಹ್ಹಿ ಹ್ಹಿ! ನಿಜವಾಗಿಯೂ? ಈಗ ಕೂಡಲೇ ಅವಳನ್ನು ಕರೆ. ತಡಬೇಡ.

**ವೈಶ್ಯಗುಪ್ತ :-** ಪ್ರಭೊ, ಹೆಣ್ಣು ಹೆಂಗಸಾದ ಅವಳು ಅನ್ಯರ ಎದುರಿಗೆ ಬರಲಿಕ್ಕೆ ಹೆದರುವಳು. ನಿಮಗೆ ನಾನು ಸಂಜೆಗೆ ತಮ್ಮ ಅರಮನೆಗೇ ಕರೆದು ತಂದು ಸಾಕ್ಷಿ ಹೇಳಿಸುವೆನು. ಪ್ರಭುಗಳು ನನ್ನನ್ನು ನಂಬಿ ನಾಡಿನ ಪ್ರಾಮಾಣಿಕತೆಯನ್ನು ಕಾಪಾಡಬೇಕು.

**ರಾಜ :-** (ತೃಪ್ತನಾಗಿ ಮುಗುಳು ನಗುತ್ತ) ಓಹೋ - ನೀನು ನನಗೆ ತುಂಬಾ ಪ್ರಾಮಾಣಿಕನಾಗಿ ಕಾಣುತ್ತೀಯೆ. ನಿನ್ನನ್ನು ಅವಮಾನಿಸುವದು ನ್ಯಾಯ ದೇವತೆಯನ್ನು ಅವಮಾನಿಸಿದಂತೆಯೇ ಸರಿ. ಈ ಹೊತ್ತು ಸಂಜೆಗೆ ನಿನ್ನ ಇಷ್ಟದೇವತೆಯ ದರ್ಶನ ಮಾಡಿಸು. ಮಹಾಪ್ರಧಾನರೇ ಇವನನ್ನು ಸ್ವತಂತ್ರಗೊಳಿಸಬೇಕು.

**ಪ್ರ. ಮಂತ್ರಿ :-** (ಆಶ್ಚರ್ಯದಿಂದ) ಪ್ರಭೋ ಏನಿದು ಅನ್ಯಾಯ? (ಸಾವುಕಾಶವಾಗಿ) - ಏ ರಾಮ್ಯಾ ಈ ಮಾತು ಇವನಿಗೆ ಅನ್ನೋದಲ್ಲೊ?

**ರಾಜ :-** (ಖೆಕ್ಕರಿಸಿ ಮಂತ್ರಿಯನ್ನು ನೋಡುತ್ತ) ರಾಜನ ಮೇಲೆ ಮಂತ್ರಿಯ ಅಧಿಕಾರವೇ? ಹೂಂ. ಸೇವಕರೇ ಏನು ನೋಡುತ್ತೀರಿ? ಅವನನ್ನು ಸ್ವತಂತ್ರಗೊಳಿಸಿರಿ. (ವೈಶ್ಯಗುಪ್ತನು "ರಾಮರಾಜ ಮಹಾರಾಜಕಿ ಜೈ" - ಎಂದು ಹೇಳುತ್ತಿರುವಂತೆ 'ಜೈ' ಎನ್ನುವುದಕ್ಕೆ ಉಳಿದ ಮಂತ್ರಿಗಳೂ ಧ್ವನಿಗೂಡಿಸುವರು. ನಂತರ ವೈಶ್ಯಗುಪ್ತ ರಾಜನಿಗೆ ಶಿರಸಾಷ್ಟಾಂಗ ನಮಸ್ಕಾರ ಮಾಡಿ ಹೋಗುವನು. ಅಷ್ಟರಲ್ಲಿ ಲೈಲಾ ಮಜನೂ ಬಂದು ರಾಜನಿಗೆ ಕುರ್ಣಿಸಾತ ಮಾಡಿ ಅಪರಾಧಿಗಳಂತೆ ನಿಂತುಕೊಳ್ಳುತ್ತಾರೆ.)

**ರಾಜ :-** ಇವರು ಯಾರು? ಯಾವ ಲೋಕದವರು? ಮಾನವರೇ, ನಿಮಗೇನು ಕೊರತೆ? ಏನುಬೇಕು?

**ಮಜನು :-** (ಕೈ ಮುಗಿದು) ಮಹಾಪ್ರಭೂ, ನಾನು ಮಜನೂ. ಇವಳು ನನ್ನ ಪ್ರೇಯಸಿ ಲೈಲಾ. ಉಪವಾಸ ಸಾಯುತ್ತಿರುವ ನಮ್ಮನ್ನು ಕಾಪಾಡಬೇಕು.

**ರಾಜ :-** (ಅವನ ಮಾತಿನ ಕಡೆಗೆ ಗಮನವೀಯದೇ ಲೈಲಾಳನ್ನು ನೋಡುತ್ತ) ಸ್ವಗತ, ಇವಳು ಅದೆಷ್ಟು ಸುಂದರಿಯಾಗುವಳು! ಇಷ್ಟು ಸುಂದರವಾದ ಹೆಣ್ಣು ಪ್ರಾಣಿಯನ್ನು ನಾನು ಇದುವರೆಗೂ ನೋಡಲಿಲ್ಲ - ಪ್ರಕಾಶ ಮಜನೂ ಮಜನೂ, ನೀನೀಗ ಏನು ದಂಧೆ ಮಾಡುತ್ತಿ!

**ಮಜನು :-** (ತನ್ನ ಎಡ ಎದೆ ಎಲ್ಲ ಹರಿದು ಸೋರುತ್ತದೋ ಎಂಬಂತೆ ಎರಡೂ ಕೈಯಿಂದ ಹಿಡಿದು) - ಮೊಹಬ್ಬತ್ ಕರನಾ ಮೇರಾ ದಂಧಾ ಹೈ...!!

**ರಾಜ :-** (ಖೊಕ್ ಖೊಕ್ ಖೊಕ್ ಎಂದು ನಗುತ್ತ) ಮೋಹೋ ಬತ್ತು? ಆಹಾ! ಇದು ಮುಂಗಾರಿ ಬೆಳೆಯೋ! ಹಿಂಗಾರಿ ಬೆಳೆಯೋ? ಇದು ಯಾವ ಪ್ರದೇಶದಲ್ಲಿ ಬರುವ ಬೆಳೆ?

**ಮಜನು :-** (ತನ್ನ ದಿಲ್ ಇನ್ನೂ ಬಿಗಿಯಾಗಿ ಹಿಡಿದುಕೊಂಡು) ಹೃದಯದಲ್ಲಿ!! ದಿಲ್‌ದಲ್ಲಿ!!.....

**ರಾಜ :-** ಇದರಿಂದ ವರ್ಷಕ್ಕೆ ಎಷ್ಟು ಟನ್ನು ಧಾನ್ಯ ಬೆಳೆಯುತ್ತಿ?

**ಮಜನು :-** ನೂರು... ಸಾವಿರ...ಲಕ್ಷ...ಕೋಟಿ ಟನ್ನುಗಳು!!

**ರಾಜ :-** (ಚಪ್ಪಾಳೆ ತಟ್ಟಿ ನೆಗೆದಾಡಿ) ಎಲಾ, ಯಾರಲ್ಲಿ?

**ಸೇವಕ :-** ಏನಪ್ಪಣೆ ಪ್ರಭೊ?

**ರಾಜ :-** ಮಜನೂನನ್ನು ಕೊಂದು ಹಾಕಿ ಇವನ ಹೃದಯದೊಳಗಿನ ಧಾನ್ಯವನ್ನೆಲ್ಲಾ ಬರಪೀಡಿತ ಪ್ರಜೆಗಳಿಗೆ ಹಂಚಿಬಿಡಿ. ಹೂಂ ಬೇಗ!

**ಮಜನು :-** (ನಿದ್ದೆಯಿಂದ ಎಚ್ಚತ್ತು.) ಇದೇನು ಪ್ರಭೂ?

**ರಾಜ :-** ಎಲಾ ನೋಡುತ್ತೀರೇನು? ಬೇಗ. ನನ್ನ ಪ್ರಜೆಗಳು ಅನ್ನಾನ್ನಗತಿಕರಾಗಿ ಸಾಯುವುದನ್ನು ನೋಡಲಾರೆ. ಬೇಗನೇ ಒಯ್ಯಬಾರದೇ? (ಸೇವಕರು ಒದರುವ ಮಜನೂನನ್ನು ಎಳೆದೊಯ್ಯುವರು.)

**ಲೈಲಾ :-** ಪ್ರಭೋ ನನಗಾರು ದಿಕ್ಕು?

**ರಾಜ :-** (ಮೀಸೆ ತಿರುವುತ್ತ) ಎಲಾ ಹೆಣ್ಣೆ - ಚೌರ್ಯಾಂಸಿ ಲಕ್ಷ ಜೀವ ಕೋಟಿಗೆಲ್ಲ ಅನ್ನ ಹಾಕುವ ನನಗೆ, ಓರ್ವ ಹೆಣ್ಣು ಹೆಂಗಸಿಗೆ ಆಶ್ರಯಕೊಡಲು ಕಷ್ಟವಾಗುತ್ತದೆಯೇ? ಮಹಾಮಂತ್ರೀ, ಇವಳನ್ನು ಈ ಕೂಡಲೇ ನೇರವಾಗಿ ನಮ್ಮ ಅರಮನೆಗೆ ಕಳಿಸುವ ವ್ಯವಸ್ಥೆ ಮಾಡು. (ಲೈಲಾ ಪ್ರಭೂ ಪ್ರಭೂ ಎಂದು ಬೊಗಳುತ್ತಿರುವಾಗಲೇ ಸೇವಕರು ಎಳೆದೊಯ್ಯುವರು.) ಮಂತ್ರಿಗಳೇ ಸಮಯ ಬಹಳವಾದುದರಿಂದ ಈ ಹೊತ್ತಿನ ದರಬಾರವನ್ನು ಇಷ್ಟಕ್ಕೇ ಮುಗಿಸಿ ಬಿಡಿ. (ರಾಜನು ಏಳುತ್ತಲೂ ಎಲ್ಲರೂ ಜೈಜೈಕಾರ ಮಾಡುವರು. ಇನ್ನು ಹೋಗಬೇಕೆನ್ನುವಷ್ಟರಲ್ಲಿ "ಅಯ್ಯೋಽ ಕಾಪಾಡಿ! ಕಾಪಾಡಿ! ಪ್ರೇಕ್ಷಕರೇ ನೀವಾದರೂ ಕಾಪಾಡಿ!" - ಎನ್ನುತ್ತ ವಾಲ್ಮೀಕಿ ಮಹರ್ಷಿಗಳು ಓಡಿ ಬರುತ್ತಾರೆ. ಅವರನ್ನು ಕಂಡಕೂಡಲೇ ಪ್ರಧಾನಮಂತ್ರಿ ತೆರೆ ಎಳೆಯ ತೊಡಗುತ್ತಾನೆ.)

**ವಾಲ್ಮೀಕಿ :-** ಪ್ರೇಕ್ಷಕರೇ ನೀವಾದರೂ ಕಾಪಾಡಿ! ಇದು ನಾನು ಬರೆದ ನಾಟಕವಲ್ಲ. ಅದನ್ನು ಅಣಕಿಸಿ ಇವರು ಮಾಡಿದರು! ಶ್ರೀರಾಮ ನಾಣೆಯಾಗಿಯೂ ನಾನಿದನ್ನು ಬರೆದಿಲ್ಲ. ಬರೆದುದನ್ನು ತಪ್ಪು ತಪ್ಪಾಗಿ ಆಡಿ ನನ್ನ ಹೆಸರಿಗೂ ಆದರ್ಶಕ್ಕೂ ಕಲಂಕ ತಂದಿದ್ದಾರೆ! ಎಲ್ಲಿ? ಅಲ್ಲಿ ಆ ನಟರು? ನಾನೀಗಲೇ ಶಾಪ ಕೊಟ್ಟು ಬಿಡುತ್ತೇನೆ.

**ರಾಜ :-** (ಮಹರ್ಷಿಗಳನ್ನು ನೋಡಿ ಖಿಖಿಕ್ ಎಂದು ನಗುತ್ತ) ಮಹಾಮಂತ್ರಿ, ಈ ಪ್ರಾಣಿಯನ್ನು ಈ ಕೂಡಲೇ ನಮ್ಮ ಹುಚ್ಚರಾಸ್ಪತ್ರೆಗೆ ಸೇರಿಸು. (ಮಹಾಮಂತ್ರಿ ಸರ್ರನೆ ತೆರೆ ಎಳೆಯುತ್ತಾನೆ.)

## ವಿಷ್ಕಂಭಕ

**The purification of politics**

**is an iridescent dream.**

**– INGALLS – Epigram.**

<u>ಪಾತ್ರಗಳು</u>

**ರಾಮೂ – ಇವನೇ ಮುಂದೆ ರಾಜ**
**ಬಸವಾನಿ – ಆಗಬೇಕಾಗಿದ್ದ ರಾಜ**
**ಕಿಟ್ಟೂ – ಸೂತ್ರಧಾರ – ಆಮೇಲೆ ಪ್ರಧಾನಮಂತ್ರಿ**
**ಮಾರಿಷ**
**ಮಜನೂ**
**ಲೈಲಾ**
**ವೈಶ್ಯಗುಪ್ತ**
**ವಾಲ್ಮೀಕಿ ಮಹರ್ಷಿಗಳು**
**ಸೇವಕರು, ಮಂತ್ರಿಗಳು, ಪ್ರಜೆಗಳು**

——

[ಕಾಲೇಜು ವಿದ್ಯಾರ್ಥಿಗಳ ವಾರ್ಷಿಕೋತ್ಸವ ಸಮಯಕ್ಕೆ ಏರ್ಪಡುವಂಥ ರಂಗಭೂಮಿ. ಮುಂದೊಂದು ಕರಿಯ ಪರದೆ. ಅದನ್ನು ಹಿಂದಿನಿಂದ ಅತ್ತಿತ್ತ ಸರಿಸಿ, ಒದ್ದು, ದೂಡುವ ಗಡಿಬಿಡಿ. ರಂಗದೊಳಗೆ ತುಂಬಾ ಗದ್ದಲ ಸಾಗಿದೆಯೆಂಬಂತೆ “ನೀ ಸುಮ್ಮನಿರು” “ಬಾಯಿ ಮುಚ್ಚು” “ನನ್ನೊಡನೆ ಮಾತನಾಡಲು ನೀನೆಷ್ಟರವನು?” ಇತ್ಯಾದಿ ಮಾತು ಸ್ಪಷ್ಟವಾಗಿ ಅಥವಾ ಅಸ್ಪಷ್ಟವಾಗಿ ಕೇಳಬೇಕು. “ಅಯ್ಯೋ ಇನ್ನಾದರೂ ಸುಮ್ಮನಿರಬಾರದೇ?” - ಎಂಬ ಗಡುಸು ಧ್ವನಿ ಬರುತ್ತಲೂ ಮೌನ. ತುಸು ಹೊತ್ತು ಮೌನದ ಶಾಸ್ತ್ರವಾದ ಮೇಲೆ ಢಣಾ ಢಣಾ ಗಂಟೆ ಬಾರಿಸುತ್ತದೆ. ತೆರೆ ಸಾವುಕಾಶವಾಗಿ ಸರಿಯುತ್ತದೆ.

ಹಿನ್ನೆಲೆಯಲ್ಲಿ ಅರಮನೆಯ ಕಲ್ಪನೆ ಬರುವಂಥ ಪರದೆ. ನಡುವೆ ಒಂದು ಮೇಜು. ಅದರ ಬದಿ ದೊಡ್ಡದೊಂದು ದೊಡ್ಡವರು ಕೂಡ್ರಬೇಕಾದ ಕುರ್ಚಿ. ಆ ಮೇಲೆ ಎಡಬದಿಗೆ - ಬಲ ಬದಿಗೆ ಸಣ್ಣ ಜನರಿಗಾಗಿ ನಾಲ್ಕೆಂಟು ಕುರ್ಚಿಗಳು. ಅರಮನೆಯ ಕಲ್ಪನೆ ಬರುವಮಥ ಪರದೆಯ ಮೇಲೆ ನಾಲ್ಕೈದು ಪ್ರಸಿದ್ಧ ಸಿನೇಮಾ ನಟ ನಟಿಯರ ಚಿತ್ರಗಳಿದ್ದರೂ ಸರಿಯೇ. ಅಷ್ಟರಲ್ಲಿ ಒಬ್ಬ ನಟ ಅರ್ಧ ಬಣ್ಣ ಬಳಿದು - ಅರ್ಧ ಇನ್ನೂ ಬಳಿಯದೇ ಇದ್ದರೂ ರಂಗದ ಎಡಬದಿಯಿಂದ ಬಂದು ‘ತಾನು ಪ್ರೀತಿಸುವ ಆ ಹುಡುಗೆಯೂ ನೋಡಲಿಕ್ಕೆ ಬಂದಿರಬಹುದೆ?’ - ಎಂದು ಪ್ರೇಕ್ಷಕರನ್ನು ಅರಸುವ ಕಣ್ಣುಗಳಿಂದ ನೋಡಿ ಬಲಬದಿಯಿಂದ ಒಳಹೋಗುವನು. ಅಷ್ಟರಲ್ಲಿ ಮತ್ತೊಂದು ಗಂಟೆಯಾಗುತ್ತದೆ. ಸೂತ್ರಧಾರನು ಕೈಮುಗಿದುಕೊಂಡು ಬಂದು ಮೈಕಿನ ಹತ್ತಿರ ನಿಂತು ತನಗೆ ಬಂದ ಬೇರಾಗದಲ್ಲಿ ಹಾಡತೊಡಗುತ್ತಾನೆ.]

ಸೂತ್ರಧಾರ. ನಾಂದಿ - ರಾಗ - ಗಾರ್ದಭ. ತಾಳ - ಬೇತಾಳ.

ತಗಣಿಗಳಿಗೆ ಚಪಲತೆಯನಿತ್ತನ
ನಾರದನ ಪಿತಂ.
ನಾಯಿಗಳಿಗೆ ವಿನಾಕಾರಣ ಬೊಗಳುವ
ಸಾಮರ್ಥ್ಯವನ್ನಿತ್ತ ಶಾರದೆಯ ಗಂಡಂ
ಕನ್ನಡಿಯಲ್ಲಿ ತನ್ನ ರೂಪು ಊರ್ವಶಿಯ
ಹಾಗೇ ಕಾಣುವಂತೆ ಪ್ರತಿಹೆಣ್ಣಿಗೂ
ದಿವ್ಯದೃಷ್ಟಿಯನ್ನಿತ್ತ ನಾಲ್ಮೊಗಂ
ರಕ್ಷಿಸುಗೆ ನಮ್ಮ ಪ್ರೇಕ್ಷಕ ವೃಂದಂ ॥

ಪ್ರೇಕ್ಷಕ ಮಹಾಶಯರಲ್ಲಿ ವಿಜ್ಞಾಪನೆ. ಈ ದಿನ ಕೂಡಿದ ಪ್ರೇಕ್ಷಕ ವೃಂದವನ್ನು ಕಂಡು ನನ್ನ ಹೊಟ್ಟೆಯಲ್ಲಿ ಆನಂದವು ಹಿಡಿಸಲೊಲ್ಲದಾಗಿದೆ. ಆದರೆ ನಿಮ್ಮನ್ನು ನಾನು ಹೇಗೆ ತೃಪ್ತಿಗೊಳಿಸಬಲ್ಲೆ? ಓಹೋ ತಿಳಿಯಿತು. ಮಾರಿಷ, ಮಾರಿಷ.

**ನಟ :**- (ಪ್ರವೇಶಿ) ಆರ್ಯ ನಾನು ಇಲ್ಲಿಯೇ ಇದ್ದೇನೆ.

**ಸೂತ್ರಧಾರ :**- ಮಾರಿಷ, ಈ ಹೊತ್ತಿನ ನಮ್ಮ ಪ್ರೇಕ್ಷಕವೃಂದವು ಸಂತೋಷವೆಂಬ ಸಾಗರದಲ್ಲಿ ಮುಳುಗಿ ಸಾಯುವಂಥ ಯಾವ ಚಟುವಟಿಕೆಯನ್ನು ಮಾಡೋಣ?

**ನಟ :**- ಆರ್ಯ, ಅದಕ್ಕೇನಂತೆ? ಜನ ಮನೋರಂಜನವಾಗುವಂಥ ಒಂದು ಶ್ರೇಷ್ಠ ನಾಟಕವನ್ನು ಪ್ರದರ್ಶಿಸಬೇಕು.

ಸುತ್ರಧಾರ - ಹೌದು. ಹೌದು. ಆದರೆ ಅಂಥ ಶ್ರೇಷ್ಠ ನಾಟಕಗಳನ್ನು ಬರೆಯುವ ಕವಿಗಳೆಲ್ಲಿ ಇದ್ದಾರೆ?

**ನಟ :**- ಅದೇಕೆ ಆರ್ಯಾ ಹಾಗೆನ್ನುತ್ತೀರಿ? ಹನುಮನುದಿಸಿದ ಈ ನಾಡಿನಲ್ಲಿ ಕವಿಗಳಿಗೆ ಕೊರತೆಯೇ? ಶ್ರೀ ವಾಲ್ಮೀಕಿ ಎಂಬೊಬ್ಬ ಕವಿ ಬರೆದ 'ರಾಮರಾಜ್ಯ'ವೆಂಬ ನಾಟಕವನ್ನು ಆಡಬಹುದು.

**ಸೂತ್ರಧಾರ :**- ಆದರೆ ನಮ್ಮ ನಟರು ಸಿದ್ಧವಾಗಿದ್ದಾರೆಯೋ? - ಸರಿ. ಆರ್ಯಮಹಾಶಯರಲ್ಲಿ ವಿಜ್ಞಾಪನೆ. (ತೆರೆಯಲ್ಲಿ ಧುಂಬಡಿ) ನಾನು ವಿಜ್ಞಾಪಿಸುವುದರಲ್ಲೇ ತೆರೆಯಲ್ಲಿ ಗದ್ದಲವಾಗುವಂತೆ ತೋರುತ್ತದಲ್ಲ. ಓಹೋ ತಿಳಿಯಿತು, ತಿಳಿಯಿತು. ಅಯೋಧ್ಯೆಯ ಜನರು ತಾವು ಚುನಾಯಿಸಿದ ಹೊಸ ರಾಜನನ್ನು ಜೈ ಜೈಕಾರದೊಂದಿಗೆ ಆನೆಯ ಅಂಬಾರಿಯಲ್ಲಿ - ಅರಮನೆಗೆ ಕರೆದು ತರುತ್ತಿದ್ದಾಳೆ. ಆನೆಯನ್ನೇರಿದ ಆ ಅರಸನನಾದರೋ ಕರಿಮೋಡವನ್ನೇರಿದ ಮಧ್ಯಾಹ್ನದ ಸೂರ್ಯನಂತೆಯೂ, ಹಸಿಕಟ್ಟಿಗೆಯ ಮೂಲಕ ಹೊಗೆ ಹಿಡಿದ ಒಲೆಯಂತೆಯೂ, ಜನರ ಚಪ್ಪಾಳೆಗಳೆಂಬ ತೆರೆಯಲ್ಲಿ ನಗುವೆಂಬ ಸಾಗರದಲ್ಲಿ ಮಿರುಗುವ ಕಮಲದಂತೆಯೂ ಶೋಭಾಯ ಮಾನನಾಗಿರುವನು. ಮಾರಿಷ, ಅದೇನು ನೋಡಿ ಬಾ.

(ತೆರೆಯಲ್ಲಿ - "ನಾಲ್ಗಿ ಬಿಗಿಹಿಡಿದ ಮಾತಾಡಲೇ, ಎಲುವಿಲ್ಲದ ನಾಲ್ಗೆಂತ ಬೇಕಾ ಬೇಕಾದ್ಹಾಂಗ ಉದ್ದ ಬಿಟ್ರ ಸೀಳಿ ಒಗದೇನ."

"ಏಯ್, ರಾಜಾನ ರೋಲ ನನಗ ಕೊಟ್ಟರ ಈ ನಾಟಕಾದೊಳಗ ಬರ್ತೀನಿ. ಇಲ್ಲಂದ್ರ ಈಗ ಹೊರಬಿದ್ದ ಹೋಗತೇನ ನೋಡು"

"ಅಯ್ಯೋ ಹೀಂಗೆಲ್ಲಾ ಮಾಡಬ್ಯಾಡ್ರೋ ನಿಮ್ಮ ಕಾಲ್ಬೀಳ್ತೀನಿ!")

**ಮರಿಷ :**- (ಪ್ರವೇಶಿಸಿ) ಆರ್ಯ! ಆರ್ಯ! ಅನಾಹುತವಾಯ್ತು.

**ಸೂತ್ರಧಾರ :**- ಯಾರು ಸತ್ತರು?

**ಮಾರಿಷ :**- ಯಾರು ಇಲ್ಲ. ರಾಮೂ ತನಗೆ ರಾಜನ ಪಾತ್ರ ಕೊಟ್ರೆ ಸೈ, ಇಲ್ಲದಿದ್ದರ ನಾಟ್ಕದೊಳಗ ಬಾ ಬರಾಂಗಿಲ್ಲಂತ ಹಟಾ ಹಿಡಿದ ಬಿಟ್ಟಿದಾನ.

**ಸೂತ್ರಧಾರ :**- ಮೂರು - ಖಾ! ಇಂಥಾ ಮಾತನ್ನೂ ಪ್ರೇಕ್ಷಕರೆದುರಿಗೇ ಹೇಳಬೇಕೆ? ಎಲ್ಲಿ ಆ ರಾಮು? (ಎಡಬಾಗಿಲಿನಿಂದ ಒಳಕ್ಕೆ ಹೋಗಬೇಕೆನ್ನುವಾಗಲೇ ರಾಮೂ. ಸಾಲಕೊಟ್ಟ ಸಾಹುಕಾರನಂತೆ ಅವನ ಅಂಗಿಯನ್ನು ಹಿಡಿದು ರಂಗದ ಮಧ್ಯಕ್ಕೆ ಬರುತ್ತಾನೆ.)

**ರಾಮು :**- ನೋಡು ಕಿಟ್ಟು, ಈ ನಾಟ್ಕಾದೊಳಗ ರಾಜನ ರೋಲ ನನಗ ಕೊಟ್ರ ಸೈ, ಇಲ್ಲದಿದ್ದರೆ ಈ ನಾಟ್ಕಾದೊಳಗ ನಾಯೇನ ಬರಾಂಗಿಲ್ಲ ನೋಡು.

**ಸೂತ್ರಧಾರ :**- ಅಯ್ಯೋ ಏನೋ ಇದು ಪ್ರೇಕ್ಷಕರೆದುರಿಗೆ? ಬಸವಾನಿ ಅದನ್ನ ಕಂಠಪಾಠ ಮಾಡ್ಯಾನಲ್ಲೊ!

**ರಾಮೂ :**- ಕಂಠಪಾಠ ಮಾಡಿದ್ರೇನು ಬಿಟ್ರೇನು? ನನಗೂ ಅದು ಕಂಠಪಾಠ ಆಗ್ಯದ. ಒಬ್ಬ ರಾಜಾನ ಅಭಿನಯ ನನಗ ಬರೋಲ್ಲಂದ್ರ ಮಂದಿ ನಕ್ಕಾರು. ಈಗ ಕೊಡತೀನೋ? ಇಲ್ಲಂದ್ರ ನಾ ಮನಿಗಿ ಹೊಕ್ಕಿನಿ ನೋಡು. (ಹೋಗುವವರಂತೆ ಎಡಬಾಗಿಲ ಕಡೆಗೆ ಹೋಗುವಾಗ ಬಸವಾನಿ ಅರಸನ ಉಡುಪಿನಲ್ಲಿ ಹೊರಬರುವನು ಮತ್ತೆ ಇಬ್ಬರೂ ಸೂತ್ರಧಾರನ ಕಡೆಗೆ ಬಂದು)

**ಬಸವಾನಿ :-** ನಾ ರಾಜಾನ ರೋಲ ಬಿಡಾಂಗಿಲ್ಲಂದ್ರ ಬಿಡಾಂಗಿಲ್ಲ. ಇಷ್ಟ ದಿನ ಅಭ್ಯಾಸೆಲ್ಲ ಬಿಟ್ಟು ಬಾಯಿಪಾಠ ಮಾಡಿದ್ದೇನ ಆಟಂತ ತಿಳಿದಿದ್ದೀರೇನ?

**ರಾಮು :-** ನೀ ರಗಡಃ ಬಾಯಿಪಾಠ ಮಾಡತಿ. ಯಾರು ಕೇಳ್ಬೇಕು. ಏ ಕಿಟ್ಯಾ - ನನಗ ಕಿರೀಟ, ಈ ಅಂಗಿ ಇಸಿದು ಕೊಡತೀಯೋ ಇಲ್ಲೊ?

**ಬಸವಾನಿ :-** (ಕಿರೀಟನ್ನು ತೆಗೆದು ಮುಚ್ಚಿಕೊಳ್ಳುತ್ತ) ಏಯ್‌ನೀ ಯಾವನ್ಲೇ ನನ್ನ ಕಿರೀಟ ಬೇಡಾಕ? ರಾಜಾನ ರೋಲ ಬಿಟ್ಟೇನ ಆದ್ರೂ ಈ ಕಿರೀಟ ಬಿಡಾಕಿಲ್ಲ. ನಾ ಅಂದರ ಏನಂತ ತಿಳಿದೀಯಲೇ?

**ಸೂತ್ರಧಾರ :-** (ಹಣೆ ಟಪ್ ಟಪ್ ಎಂದು ಗಿಟ್ಟಿಸಿಕೊಂಡು) ನಿಮ್ಮಿಬ್ಬರದೂ ಕಾಲ ಬೀಳ್ತೇನ್ರೋ ನನ್ನ ಮಾನ ಕಳೀಬ್ಯಾಡ್ರಿ! ಒಳಗಃರೆ ನಡೀರಿ.

**ರಾಮು :-** ಒಳಗಿಲ್ಲ, ಹೊರಗಿಲ್ಲ. ನಿನಗೆ ದಿನಾಲೂ ಚಹಾ ಕುಡಿಸ್ತಾನಂತ ಅವನ ಕಡೆ ಆಗಿ ಮಾತಾಡ್ತೀ ಅಲ್ಲಾ? ನಾ ಅದನೆಲ್ಲಾ ಕೇಳಾಂಗಿಲ್ಲ.

(ಸೂತ್ರಧಾರನು ತಲೆ ಚಿಟ್ಟುಹಿಡಿದು ಕರಿಯಪರದೆ ಸರಿಸಬರಲು ರಾಮೂ ಆತನನ್ನು ಹಿಂದಕ್ಕೆಳೆದು ನೂಕಿ) ನೋಡಿ ಪ್ರೇಕ್ಷಕರೇ ನೀವಾದರೂ ನೋಡಿ, ಇಂಥಾ ಆಧುನಿಕ ಕಾಲದೊಳಗ ದ್ವಾಪರದ ಕೋಡಗನ್ಹಂಗ ಅಂಗಿ ಸಿಗಿಸಿಕೊಂಡ ನಿಂತಾನ. ಇದು ಇಪ್ಪತ್ತನೇ ಶತಮಾನ ಅದಃ ಅಂಬೋದು ಗೊತ್ತದನೋ ಇಲ್ಲೊ?

**ಬಸವಾನಿ :-** ಏ - ಕವಿ ಹ್ಯಾಂಗ ಬರದ್ದಾನೋ ಹಾಂಗ ನಾ ಆಗೀನಿ. ನಡಕ ನೀ ಯಾರೋ ಕೇಳ್ಲಿಕ್ಕೆ?

**ಸೂತ್ರಧಾರ :-** ಅಯ್ಯೋ ಸುಮ್ಮನಿರ್ರ್ಯೋ?……

**ರಾಮು :-** (ಆತನನ್ನು ಹೊಡೆಯಲು ಕೈ ಎತ್ತುತ್ತಲೂ ಸೂತ್ರಧಾರ ಒಳಗೆ ಓಡಿ ಹೋಗುವನು? ಪ್ರೇಕ್ಷಕ ಬಂಧುಗಳೇ, ಇದು ಇಪ್ಪತ್ತನೇ ಶತಮಾನ ಅಂಬೋದು ನಿಮಗೂ ಗೊತ್ತಿರಬೇಕು. ಅದರಲ್ಲೂ ನಮ್ಮ ಸರಕಾರ ರಾಜರನ್ನೆಲ್ಲಾ ಕಿತ್ತಿ ಹಾಕಿದ ಇಂಥಾ ಸಂಧರ್ಭದಲ್ಲಿ ಈ ಬಗೆಯ ಣಾಟಖವು ಯೋಘ್ಯವಾದುಧೇ? ನೋಡಿ ಹಳೆಯ ಕಾಲದ ದುರ್ಯೋಧನ ಬಂದ ನಿಂತ್ಹಾಂಗ ನಿಂತಾನ. ಇದು ಚುನಾವಣೆಯ ಯುಗ. ಪ್ರಜೆಗಳೇ ತಮ್ಮ ಅರಸನನ್ನಾರಿಸಬೇಕಲ್ಲದೆ ಇನ್ನ್ಯಾರು ನೇಮಿಸಿದ್ರೂ ನಡ್ಯಾಂಗಿಲ್ಲ. ತಿಳೀತೂ? ನನ್ನ ಬಾಂಧವರೇ, ನೀವೇ ಹೇಳಿ, ನಿಮಗ ಯಾರು ರಾಜರಾಗಬೇಕು? ಎಲ್.ಎಲ್.ಬಿ. ಪಾಸಾಗಿ ಅನೇಕ ಸಂಘ ಸಂಸ್ಥೆಗಳ ಕಾರ್ಯದರ್ಶಿಯಾದಂಥಾ ನಾನು ರಾಜನಾಗಬೇಕೋ? ಅಥವಾ ಇನ್ನೂ ಬಿ.ಎ. ಪಾಸಾಗದ ಈ ಧಡ್ಡ ಬಾಲಕ ರಾಜನಾಗಬೇಕೋ? ರಾಜನೆಂದರ ಅನೇಕ ಸಮಸ್ಯೆಗಳನ್ನು ಎದುರಿಸಿ ಪರಾಗಬೇಕಾಗುತ್ತದೆ. ರಾಜ್ಯದ ಸಮಸ್ಯೆ ಸಂಕಟಗಳೆಂದರೆ ಅದೇನು ನೆನೆದ ದಾಡಿಯೇ - ಬೋಳಿಸಿದೊಡನೆ ಸರಸರ ಕಿತ್ತು ಬರಲಿಕ್ಕೆ?

**ಬಸವಾನಿ :-** (ಮೇಜಿನ ಬಳಿ ಹೋಗಿ) ನೋಡಿ, ಬಾಂಧವರೇ, ಈತನ ಮಾತಿಗೆ ಮರುಳಾಗಬೇಡಿ. ಇದು ಒಬ್ಬ ಪ್ರಾಮಾಣಿಕ ಕವಿ ಬರೆದ ನಾಟಕವಾದುದರಿಂದ ನಾವು ಹೀಗೆಲ್ಲಾ ಉಡುಪು ಧರಿಸಬೇಕಾಗಿದೆ. ಈತ ಮಾತನಾಡುವುದರಲ್ಲಿ ಅರ್ಥವಿಲ್ಲ, ಒಂದು ಹುರುಳಿಲ್ಲ. ಕೇವಲ ಎಲ್.ಎಲ್.ಬಿ. ಓಡಿದರೆ ಜಗತ್ತಿನ ಜ್ಞಾನ ಬಂದಂತಾಗಲಿಲ್ಲ. ಇಷ್ಟಾಗಿಯೂ ಸ್ವಜ್ಞಾನ ತೋರುವ ಪ್ರಶ್ನೆಯೇ ಇಲ್ಲ. ಇದು ಒಬ್ಬ ಕವಿ ಬರೆದುದು ಎಂಬುದನ್ನು ಮರೆಯಬಾರದು. ದಯಮಾಡಿ ಶಾಂತರಾಗಬೇಕು.

(ಪ್ರೇಕ್ಷಕರಲ್ಲಿ ನಗು, ಚಪ್ಪಾಳೆ, ಗದ್ದಲ, ದುಂಬಡಿ)

**ರಾಮು :**- (ಮೈಕಿನೆದುರಿಗೆ ಬಂದು) ಬಂಧುಗಳೇ, ರಾಜನ ಪಾತ್ರವನ್ನು ಸಮರ್ಥವಾಗಿ ಅಭಿನಯಿಸುವುದಕ್ಕೂ ಅನುಭವಬೇಕು - ಅನುಭವ. ಕ್ಲಾಸಿನಲ್ಲಿ ಒಂದು ಹುಡುಗಿಯ ಪರಿಚಯದ ಅನುಭವವೂ ಇಲ್ಲದ ಈತ ರಾಜನ ಪಾತ್ರವನ್ನು ವಹಿಸಬಹುದೇ? - ತಿಳಿದವರಾದ ತಾವೇ ವಿಚಾರ ಮಾಡಿ. ಒಂದು ಸಂಸ್ಥೆ ಅಂದರೇನು? ಸಂಘ ಅಂದರೇನು? - ಅಂಬೋದು ಗೊತ್ತಿಲ್ಲದ ಈ ಬಾಲಕ ಅನೇಕ ಸಂಘ ಸಂಸ್ಥೆಗಳನ್ನು ಕಟ್ಟಿ ಮುರಿದ ನನ್ನೊಡನೆ ಸ್ಪರ್ಧಿಸುವುದು ನಾಚಿಕೆಗೇಡಲ್ಲವೇ? ಏನಂತೀರಿ? ಈಗ ನೀವಾದರೂ ಸೂತ್ರದಾರನಿಗೆ ಹೇಳುತ್ತೀರೋ ಅಥವಾ ನಾನೇ ಹೋಗಲೋ?…..

**ಸೂತ್ರಧಾರ :**- (ಒಳಗಿನಿಂದ ಓಡಿಬಂದು) ನೀನಃ ರಾಜನಾದೀಯಂತೆ ಬಾರೋ……

**ಬಸವಾನಿ :**- ಯಾರಿಗಿ ಬೇಕ ಇಂಥಾ ನಾಟ್ಕ? ಮಾಡ್ಕೊಳ್ರಿ ಬೇಕಾದ್ರ! (ಎಂದು ಸಿಟ್ಟಿನಿಂದ ಒಳಗೆ ಹೋಗುತ್ತಿರುವಾಗ ರಾಮು ಆತನ ಕಿರೀಟು ಕಸಿದುಕೊಂಡು ಬೇರೆ ಬಾಗಿಲಿನಿಂದ ಒಳಗೆ ಒಡುವನು. ಬಸವಾನಿಯೂ ಆತನ ಬೆನ್ನು ಹತ್ತುವನು. ಸೂತ್ರಧಾರ ಅವಸರದಿಂದ ಕರಿಯ ಪರದೆ ಎಳೆಯುವನು.)

(ವಿಷ್ಕಂಭಕ ಮುಗಿದುದು)

## ಬೆಂಬತ್ತಿದ ಕಣ್ಣು

## ದೃಶ್ಯ ಒಂದು

<u>ಪಾತ್ರಗಳು</u>

**ಸದಾಶಿವ**
**ಶೀನೂ**
**ಶಂಕರ**
**ಉಷಾ**
**ಲಕ್ಷ್ಮೀ**
**ಮತ್ತು**
**ಟಾಂಗಾವಾಲಾ**

—-

[ಕೈ ಬಳೆಗಳ ಉಲುಹು. ಪೆಟ್ಟಿಗೆ ತೆರೆದ - ಮುಚ್ಚಿದ ಸಪ್ಪಳ. ಕುರ್ಚಿ ಆಚೀಚೆ ಸರಿಸಿದ - ಪುಸ್ತಕ ಚೆಲ್ಲಿದ ಸದ್ದು. ತುಂಬ ಗಡಿಬಿಡಿ.]

**ಉಷಾ :**- ಲಕ್ಷ್ಮೀ…ಏ ಲಕ್ಷ್ಮೀ, ಎಲ್ಲಿ ಹೋದಳೋ ಹಾಳಾದೋಳು… ಏ ಲಕ್ಷ್ಮೀ…

ಲಕ್ಷ್ಮೀ :- (ಒಳಗಿನಿಂದ) ಓ ಬಂದೆ…(ಬಳಿ ಬಂದು) ಏನ್ರೆಮ್ಮಾ…?… ಇದೇನ್ರೀ ಸಾಮಾನೆಲ್ಲ ಚೆಲ್ಲಾಪಿಲ್ಲಿ? ಈಗ ತಾನೇ ಸರಿಯಗಿ ಜೋಡ್ಸಿ ಇಟ್ಟು ಹೋಗಿದ್ದೆ.

**ಧ್ವನಿ :-** ಕೂಡದು! ಈ ಮನೆಯ ಸಾಮಾನು ಶಿಸ್ತಿನಲ್ಲಿ ಎಂದೂ ಇರಕೂಡದು!

**ಉಷಾ :-** ನನ್ನನ್ನೇ ಆಕ್ಷೇಪಿಸುತ್ತೀ ಏನೇ ಇರಲಿ. ಈ ಬೀಗದ ಕೈ ಯಾರೇ ಇಲ್ಲಿ ಇಟ್ಟದ್ದು?

**ಧ್ವನಿ :-** ಅರಸುತಿಹ ಲತೆ ಕಾಲ ತೊಡಕಲು ಹರಿದು ಬಿಸಡುವರುಂಟೆ?

**ಲಕ್ಷ್ಮಿ :-** ಸಾಹೇಬರೇ ಮರತು ಇಟ್ಟಿರಬೇಕು.

**ಉಷಾ :-** ಸರಿ. ನೀನು ನಿನ್ನ ಕೆಲಸಕ್ಕೆ ಹೊರಟ್ಹೋಗು.

(ಒಮ್ಮೆಲೆ ಶಾಂತ ವಾತಾವರಣ. ತನಗೆ ತಾನೇ ನುಡಿವವರಂತೆ ಉಷಾ)

**ಉಷಾ :-** ಬೀಗದ ಕೈ! ಅವರು ಬೇಕೆಂದೇ ಇದನ್ನಿಲ್ಲಿ ಇಟ್ಟಿರಲಾರರಷ್ಟೇ?

(ಮತ್ತೆ ತುಸು ಹೊತ್ತು ನೀರವ.) ಲಕ್ಷ್ಮೀ……ಈ ಸೀರೆ ರವಕೆಗಳನ್ನೆಲ್ಲ ಸರಿಯಾಗಿ ಮಡಚಿ ಬ್ಯಾಗಿಗೆ ಸೇರಿಸು. ವೇಳೆ ಇಲ್ಲ. ಬೇಗ ಮುಗೀಬೇಕು.

**ಲಕ್ಷ್ಮಿ :-** ಆಗಲ್ರಮ್ಮ. (ಸೀರೆ ಮಡಚಿ ಬ್ಯಾಗಿಗೆ ಸೇರಿಸುವ ಸಪ್ಪಳ.)

**ಉಷಾ :-** ಲಕ್ಷ್ಮೀ, ಅವರೇನಾದರೂ ಹೋಗುವಾಗ ಹೇಳಿದ್ದಾರೇನು?

**ಲಕ್ಷ್ಮಿ :-** ಏನೂ ಇಲ್ರಿ. ಅಡ್ಡಾಡಿಕೊಂಡು ಬರ್ತೀನಿಂತ ಶಂಕರನ ಕೈ ಹಿಡಿದುಕೊಂಡು ಹೋದರು.

**ಉಷಾ :-** ಸರಿ, ಸರಿ. ಈ ಸೀರೆ ನನಗೆ ಹ್ಯಾಗೆ ಒಪ್ಪುತ್ತೆ ನೋಡು?…

**ಲಕ್ಷ್ಮಿ :-** ಏನ್ಹೇಳ್ಬೇಕ್ರೆಮ್ಮಾ? ಲಕ್ಷ್ಮಿ! - ಸಾಕ್ಷಾತ್ ಲಕ್ಷ್ಮಿ ಇಳಿದು ಬಂದ್ಹಾಂಗ ಕಾಣ್ತೀರಿ.

**ಉಷಾ :-** ಶೀನೂ ಕೂಡ ಹಾಗೇ ಹೇಳ್ತಿದ್ದ ಕಣೇ - ಸ್ವರ್ಗದಿಂದ ಊರ್ವಶಿ ಇಳಿದು ಬಂದ ಹಾಗೆ ಕಾಣ್ತೀರಿ - ಅಂತ - ಅಲ್ವೇನೆ?

**ಲಕ್ಷ್ಮಿ :-** - ಅದ್ಸರಿ, ಇದೇನ್ರೆಮ್ಮಾ ಈ ಹೊತ್ತಿನಲ್ಲಿ ಸೀರೀನೆಲ್ಲಾ ಗಂಟು ಕಟ್ತಾ ಇದೀರಿ?

**ಉಷಾ :-** (ಪೆಚ್ಚಾಗಿ) ಓ…ಹ್… ನಾನು ಇನ್ನೆರಡು ದಿನಗಳಲ್ಲಿ ತೌರಿಗೆ ಹೋಗೋಳಿಲ್ಲವೆ? ಈಗಿನಿಂದಲೇ ಸಿದ್ಧತೆ ಮಾಡಿಟ್ಟುಕೋಬೇಕೂಂತ. ಹೊರಟ ದಿನವೇ ಅತಿ ಅವಸರ ಮಾಡಿದರೆ ತುಂಬ ಕಷ್ಟವಾಗುತ್ತಲ್ಲವೆ?

**ಲಕ್ಷ್ಮಿ :-** - ಹೌದ್ರಿ……ಆಂ. ಒಂದು ಸುದ್ದಿ ಕೇಳಿದಿರಾ ತಾಯಿ?

**ಉಷಾ :-** - ಏನು?

**ಲಕ್ಷ್ಮಿ :-** ನಮ್ಮ ಸಾಹೇಬರಿರೋ ಸ್ಕೂಲಿನ ಹತ್ತಿರ ರತ್ನಮ್ಮಾಂತ ಒಂದು ಹುಡುಗಿ ಇತ್ತು ಗೊತ್ತಾ?

**ಉಷಾ :-** ಆ ಶಿವರಾಮರಾಯರ ಹಿರಿಯ ಮಗಳು?

ಲಕ್ಷ್ಮಿ - ಹೂಂ. ಅವಳೇ. ತನ್ನ ಗಂಡನ್ನ ಬಿಟ್ಟು ಗೌಡರ ಮಗನ್ನ ಕೂಡಿಕೊಂಡು ಓಡಿ ಹೋದಳಂತೆ!

**ಉಷಾ :**- (ಉದ್ವೇಗದಿಂದ) ಲಕ್ಷ್ಮೀ (ಬಿರುಸಾಗಿ ತೇಗುತ್ತ) ಯಾರು ಹೇಳಿದರು ನಿನಗೀ ಸುದ್ದೀನ್ನ?

**ಲಕ್ಷ್ಮಿ :**- ಅದ್ಯಾಕ್ರಮ್ಮಾ? ಊರ ತುಂಬ ಹಬ್ಬೇತೆಲ್ಲ - ಡಣಾಡಂಗರದ್ಹಂಗ! ನೀವ್ಯಾಕಿಷ್ಟು ಮನಸ್ಸಿಗೆ ಹಚ್ಚಿಕೊಳ್ಳಬೇಕು ಬಿಡೀಂದ್ರೆ. ಯಾರದೋ ಸುದ್ದಿ - ಯಾರದೋ ಮಾತು. ನಮಗೇನು? ಸಧ್ಯ ನಮಗೆ ಸಂಬಂಧಿಸಿದ್ದೇನೂ ಅಲ್ವಲ್ಲ. ಪಾಪ... ಗಂಡ ಭಾಳ ಸಭ್ಯ ಪ್ರಾಣಿ! ಅವನಿಗೂ ಕೈ ಕೊಟ್ಟಗಟಳು ಚಾಂಡಾಲಿನಿ.

**ಉಷಾ :**- (ಎತ್ತರದ ಧ್ವನಿ) ಚಾಂಡಾಲಿನಿ? ಯಾರಿಗೆ ನೀನಂದದ್ದು ಹಾಗೆ? ಲಕ್ಷ್ಮೀ... ಯಾರು ಚಾಂಡಾಲಿನಿ? ಯಾರಿಗೆ ನೀನಂದದ್ದು?

**ಲಕ್ಷ್ಮಿ :**- ಇದೇನ್ರಿ ಈ ಹೊತ್ತು ಹೀಗೆಲ್ಲಾ ಆಡ್ತಾ ಇದ್ದೀರಿ? ಅವಳಿಗೆ - ಆ ಹುಡಿಗೆಗೆ ನಾನಂದದ್ದು? ಅಲ್ವೇನ್ರೀ ಮತ್ತೆ? ಆಕಳಂಥಾ ಗಂಡ. ಅಂಥವನಿಗೂ ಕೈ ಕೊಡೋದಂದ್ರೆ - ಎಂಥ ಚಾಂಡಾಲಿನಿ ಇದ್ದಿರಬೇಕು. ನೀವಾ ಏನೇ ಹೇಳ್ರಿ ಅಮ್ರಾವ್ರು - ಈಗಿನ ಕಾಲದ ಹುಡಿಗೀಋಏ ಹೀಗೆ... ಇದೇನ್ರೀ, ನಿಮ್ಮ ಮುಕದ ಮ್ಯಾಲಿ ಬೆವರು?

**ಉಷಾ :**- (ಚೇತರಿಸಿಕೊಂಡು) ಓಹ್……ಏ…ನಿಲ್ಲ… ತುಂಬ' ಶಕೆ ಆಗ್ತಾ ಇದೆ ಅಲ್ಲವೆ? ಈ ಬೇಸಿಗೆ ಬೇರೆ ಎಂದು ಹಾಳಾಗಿ ಹೊಗುತ್ತೋ?

**ಲಕ್ಷ್ಮಿ :**- (ಕುಲುಕುಲು ನಕ್ಕು) ಬಿಡ್ರಿ... ನಮ್ಮಂಥಾ ದಡ್ಡರು ಮಾತನಾಡೋ ಹಾಂಗ ಮಾತನಾಡ್ತೀರಿ... ಮಳೆಗಾಲ ಇದ್ದದ್ದನ್ನ ಬ್ಯಾಸ್ಗಿ ಅಂದ ಬಿಟ್ರಿ.

**ಧ್ವನಿ :**- ಹೊರಗೆ ಮಳೆಗಾಲವಿದ್ದರೂ ಅವಳು ಮಾತ್ರ ಇನ್ನೂ ಸುಡುವ ಬೇಸಗೆಯಲ್ಲೇ ಇದ್ದಾಳೆ.

**ಉಷಾ :**- ಓಹ್...ಮರೆತುಹೋಗಿತ್ತು. ಸೀರೆ ಇಟ್ಟಾಯ್ತೇನು? ಸರಿ.ಸರಿ. ನೀನಿನ್ನು ಒಳಗೆ ಹೊರಟ್ಹೋಗು.

**ಲಕ್ಷ್ಮಿ :**- ...ಹೂಂನ್ರಿ (ಹೋಗುವಳು)

(ತುಸು ಸಮಯ ನೀಋುವ. ಆ ಮೇಲೆ ಬೀಗದ ಕೈ ಸದ್ದು, ಪೆಟ್ಟಿಗೆ ತೆರೆದು ಆಭರಣ, ದುಡ್ಡು ತೆಗೆದುಕೊಂಡ ಸಪ್ಪಳ.)

**ಲಕ್ಷ್ಮಿ :**- (ಒಳಗಿನಿಂದ) ಅಮ್ರಾವ್ರು... ಬಿಳೀ ರವಕೆ ಒಳಗೇ ಇದೆ. ಅದನ್ನು ತರಲೇನು? (ಗಡಬಡಿಸಿ ಒಮ್ಮೆಲೆ ಪೆಟ್ಟಿಗೆ ಮುಚ್ಚಿದ ಸಪ್ಪಳ. ಕೆಲಹೊತ್ತು ನೀರವ.)

**ಉಷಾ :**- ಅಡಿಗಡಿಗೂ ನನ್ನನ್ನು ಈ ಮನೆ ತಡೆಯುತ್ತಿದೆ. ಇಂಥ ಕಟುಕರಿಂದ ದೂರ - ಅತಿ - ದೂರ - ನನ್ನ ಸುಋಕ್ಕ ಯಾರಿಂದಲೂ ಬಾಧೆ ಬಾರದಷ್ಟು ದೂರ - ಓಡಿಹೋಗಬೇಕೆಂದರೆ ನನ್ನ ಮಟ್ಟಿಗೆ ನನ್ನನ್ನು ಈ ಜಗತ್ತು ಬಿಡುತ್ತಿಲ್ಲ! ಓಹ್... ನಾನು ಇರಲಾರೆ... ಋಂಡಿತ ಇರಲಾರೆ……ನನ್ನಂಥವರು ಈ ಮನೆಯಲ್ಲಿ ಋಂಥಿತ ಇರಬಾರದು !

**ಧ್ವನಿ :**- ಋಂಡಿತ ಇರಬಾರದು. ಸುರೆ ಇದ್ದೂ ಹಾಲಿನ ಭ್ರಾಂತಿ ಹುಟ್ಟಿಸುವ ಜನ , ಈ ಮನೆಯಲ್ಲಿ ಋಂಡಿತ ಇರಬಾರದು.

**ಉಷಾ :**- (ಕೇಳಿದವರಂತೆ) ಯಾರು? ಯಾರದು ಹಾಗೆ ಮಾತನಾಡಿದವರು? ಲಕ್ಷ್ಮೀ...ಏ ಲಕ್ಷ್ಮೀ.....

**ಲಕ್ಷ್ಮಿ :**- (ಓಡಿಬಂದ ಸದ್ದು) ಏನ್ರೆಮ್ಮ?

**ಉಷಾ :-** ಅವರು ಬಂದಿದ್ದಾರೆಯೆ?

**ಧ್ವನಿ :-** ಅವರು ಎಂದಾದರೂ ನಿನ್ನ ದಾರಿಗೆ ಅಡ್ಡ ಬಂದುದುಂಟೇ?

**ಉಷಾ :-** (ಉದ್ರಿಕ್ತಳಾಗಿ) ಲಕ್ಷ್ಮೀ! ಲಕ್ಷ್ಮೀ! ಕೇಳಿದೆಯಾ? ಯಾರೋ ಹೀಗೆ ಹಿಂದೆ ನಿಂತು ನನ್ನನ್ನು ಅಣಕಿಸಿ ಮಾತನಾಡುತ್ತಿದ್ದಾರೆ! ಕೇಳಲಿಲ್ಲವೆ ನಿನಗೆ?

**ಲಕ್ಷ್ಮಿ :-** ಇದೇನ್ರೆಮ್ಮಾ ಹೀಗೆ ಹುಚ್ಚುಚ್ಚಾರ ಆಡ್ತಾ ಇದೀರಿ?

**ಧ್ವನಿ :-** ಅಹುದು… ನಿಜವಾಗಿಯೂ ಹುಚ್ಚು!

**ಉಷಾ :-** ಕೇಳಿದೆಯಾ? ನೀನು ಹುಚ್ಚಳೆಂದರೆ ಅದೂ ಹುಚ್ಚಳೆನ್ನುತ್ತಿದೆ. ನೀವಿಬ್ಬರೂ ಮಾತನಾಡಿಕೊಂಡಂತೆ ಆಡುತ್ತಿದದೀರಿ! ಹಿಂದೆ ನೀನು ಯಾರನ್ನೋ ಬಚ್ಚಿಟ್ಟು ಬಂದಿರಬೇಕು! ಲಕ್ಷ್ಮೀ… ಯಾರವನು? ಯಾರನ್ನು ನೀನು ಬಚ್ಚಿಟ್ಟು ಬಂದದ್ದು?

**ಧ್ವನಿ :-** ಯಾರನ್ನು ನೀನು ಬಹುದಿನಗಳಿಂದ ಮರೆತಿರುವೆಯೋ ಅವನು!

**ಉಷಾ :-** ಕೇಳಿದೆಯಾ? ಏನಂತಾನೆ ಈ ಪಾಪಿ? (ಬಿಕ್ಕುತ್ತ) ಹೋಗು… ಹೊರಟ್ಹೋಗು… ನಿನ್ನ ಮನೆಗೆ ಹೊರಟ್ಹೋಗು… ಹೊರಟ್ಹೋಗು……(ಬಿಕ್ಕು… ಅಸ್ಪಷ್ಟವಾಗುತ್ತಿರುವಾಗ)

**ಲಕ್ಷ್ಮೀ :-** ಅಮ್ಮಾವ್ರು ನಾಳಿನ ದಿನ ಸ್ವಲ್ಪ ತಡಮಾಡಿ ಬರ್ತೀನ್ರಿ - (ನಿಷ್ಕ್ರಮಣ , ಕೆಲಹೊತ್ತು ನೀರವ.)

**ಶಂಕರ :-** (ಪ್ರವೇಶಿಸಿ) ಕಳ್ಳನ ಜೀವ ಹುಳ್ಳುಳ್ಳಗಂತ…

**ಉಷಾ :-** (ಚೀರಿ) ಯಾರವನು?

**ಶಂಕರ :-** ನಾನು ಶಂಕರ ಅಕ್ಕಾವರ, ನೋಡಿ ಮತ್ತೆ… ಆ ಶಾರಿ ಸ್ಕೂಲಿನಲ್ಲಿ ಈ ಹೊತ್ತು ನನ್ನ ಪುಸ್ತಕ ಕದ್ದುಕೊಂಡು ಇಲ್ಲಾಂತ ಹೇಳ್ತಾ ಇದ್ಳು. ನಾನು ಗುರುಗಳ ಹತ್ರ ಹೋಗಿ ಹೇಳಿದ ಕೂಡಲೇ ಅಳಲಿಕ್ಕೆ…

**ಉಷಾ :-** (ನಡುವೇ ತಡೆದು) ಸತ್ತು ಹೋಗಲಿ ನಿನ್ನ ಶಾರಿ……ಶಂಕರ… ನೀನೇನಾದರೂ ಇದೀಗ ಹಿಂದೆ ನಿಂತು ಮಾತನಾಡಿದೆಯಾ?

**ಶಂಕರ :-** ನಾನು? ಇಲ್ಲಾಂದ್ರೆ. ಈಗ ತಾನೇ ಸಾಹೇಬರನ್ನು ಕ್ಲಬ್ಬಿನಲ್ಲಿ ಬಿಟ್ಟು ಬಂದೆ. ತಿರುಗಾಡಿಕೊಂಡು ಇನ್ನೊಂದು ತಾಸಿನ ಮೇಲೆ ಬಾಂತ ಹೇಳಿದರು. ಬಂದೆ……ಯಾಕ್ರೀ ಅಕ್ಕಾವರ ಹೀಗಿದ್ದೀರಿ?

**ಉಷಾ :-** …ಅ…ಹ್…ಯಾಕಿಲ್ಲ. ಚೆನ್ನಾಗೇ ಇದೀನಲ್ಲ. ಚೆನ್ನಾಗೇ ಇದೀನಲ್ಲ…ಅದೇನೋ ಕೈಯಲ್ಲಿ?

**ಶಂಕರ :-** ಈ ಫೋಟೋ ಕೆಳಗೆ ಬಿದ್ದಿತ್ತು. ಕುರ್ಚಿಯ ಮೇಲೆ ಇಡ್ತಾ ಇದೀನಿ.

**ಉಷಾ :-** ಯಾರದದು?… (ಚಟ್ಟನೇ ಚೀರಿ) ಹೊರಟ್ಹೋಗು ಶಂಕರಾ ಹೊರಟ್ಹೋಗು!… ಓ ನಾನು ಹೋಗಲಾರೆ… ಹೋಗಲಾರೆ… ನಾನು ಎಲ್ಲಿಯೂ ಹೋಗಲಾರೆ.!……ಎಲ್ಲಿಯೂ ಹೋಗಲಾರೆ (ಬಿಕ್ಕುತ್ತ) ಇನ್ನೂ ನಿಂತಿರುವಿಯಲ್ಲ ಹಾಗೇ, ಅವರ ಹತ್ತಿರ ಹೊರಟ್ಹೋಗು (ಶಂಕರ ಹೋಗುತ್ತಾನೆ.)

**ಶೀನೂ ಧ್ವನಿ :-** ಏನು ಮಾಡಲಿ ಉಷಾ? ನಿನ್ನನ್ನು ಬಿಟ್ಟು ಒಂದು ಕ್ಷಣ ಕೂಡ ಬಾಳಲಾರೆ. ಕ್ಷಣಕ್ಷಣವೂ ನಿನ್ನ ಈ ಮೋಹಭರಿತ ಮುಖವನ್ನು ನೋಡುತ್ತಿರಬೇಕಲು.. ಸ್ಪರ್ಶಿಸುತ್ತಿರಬೇಕು! ಬಾರಿಬಾರಿಗೂ ಈ ಕುರುಳುಗಳನ್ನು ನೇವರಿಸುತ್ತಿರಬೇಕು! ದಿನದ ಇಪ್ಪತ್ತುನಾಲ್ಕು ತಾಸುಗಳೆಲ್ಲಾ ನಿನ್ನ ಸೆರಗಿನ ಮರೆಯಲ್ಲಿರಬೇಕು - ನಿನ್ನ ಧ್ವನಿ ಕೇಳುತ್ತಿರಬೇಕು - ನಿನ್ನ ಓರೆ ನೋಟಕ್ಕೆ ಪಕ್ಕಾಗಬೇಕು... ಓಹ್ ನಿನ್ನ ತೋಳಿನಲ್ಲಿ ತೃಪ್ತಿ ಎಂಬುದು ಭ್ರಾಂತಿ ಉಷಾ, ತೃಪ್ತಿ ಎಂಬುದು ಭ್ರಾಂತಿ!.....

...ಉ...ಷಾ! ನಿನ್ನನ್ನು ಬಿಟ್ಟು ನಾನು ಖಂಡಿತಬಾಳಲಾರೆ! ಎಲ್ಲಿಯಾದರೂ ದೂರ ಹೋಗೋಣ. ಈ ಜನ - ಈ ಸಮಾಜ ಎಲ್ಲವನ್ನೂ ಬಿಟ್ಟು ದೂರ - ಅತೀದೂರ ಹೋಗೋಣ. ಇಂದು ರಾತ್ರಿ ಟಿಕೆಟ್ಟುಲಕೊಂಡು ಇಟ್ಟಿರುತ್ತೇನೆ. ಅವಶ್ಯವಾಗಿ ಬರಬೇಕಲು. ಬರುತ್ತೀಯಾ? ನಮ್ಮಿಬ್ಬರದು ನಿಜವಾದ ಪ್ರೇಮವೇ ಆಗಿದ್ದರೆ ಖಂಡಿತ ಬರುತ್ತಿ. ಖಂಡಿತ ಬರಬೇಕು. ಹಾಂ......ಹೋಗುವಾಗೊಂದು ಟಾಂಗಾ ಹೇಳಿ ಹೋಗು... ಸಿಕ್ಕಷ್ಟು ದುಡ್ಡು, ಆಭರಣ ತರಲು ಮಾತ್ರ ಮರೆಯಬೇಡ. ನಾನೂ ತರುತ್ತೇನೆ. ಬರುತ್ತೀಯಾ ಉಷಾ?

**ಉಷಾ :-** (ಬಿಕ್ಕುತ್ತ) ನನಗೆ ಭಯವಾಗುತ್ತಿದೆ. ನಾವು ಮಾಡುತ್ತಿರುವದು ಅನ್ಯಾಯವೆನಿಸುತ್ತಿದೆ. ನಾನು ಬರಲಾರೆ... ಬರಲಾರೆ -

(ಮನೆಯ ಮುಂದೆ ಟಾಂಗಾ ನಿಂತ ಸಪ್ಪಳ)

**ಉಷಾ :-** (ಅಳುತ್ತ) ನಾನು ಬರಲಾರೆ... ಬರಲಾರೆ...

**ಟಾಂಗಾವಾಲಾ :-** (ಪ್ರವೇಶಿಸಿ) ಮೇಮ್‌ಸಾಬ್ ಟಾಂಗಾ ತಯಾರ ಹೈ.

**ಶೀನೂ ಧ್ವನಿ :-** ನಿನ್ನ ತೋಳಿನಲ್ಲಿ ತೃಪ್ತಿ ಎಂಬುದು ಭ್ರಾಂತಿ ಉಷಾ - ತೃಪ್ತಿ ಎಂಬುದು ಭ್ರಾಂತಿ!

**ಉಷಾ :-** ಹೊರಗೆ ಯಾರೂ ಇಲ್ಲವೇ?

**ಟಾಂಗಾವಾಲಾ :-** ನಹೀಂ
**ಉಷಾ :-** ಈ ಬ್ಯಾಗು ತೆಗೆದುಕೊ...
(ಬಿಕ್ಕು...ತೇಗು...ಬರಬರುತ್ತ ಅಸ್ಪಷ್ಟವಾಗುತ್ತಲೂ ಟಾಮಗಾ ಹೊರಟ ಸಪ್ಪಳ...)

## ದೃಶ್ಯ ಎರಡು

[ನೀರವ ವಾತಾವರಣ. ಅಷ್ಟು ಎತ್ತರವಲ್ಲದ - ಕೆಳಮಟ್ಟದ್ದಲ್ಲದ ಸ್ವರದಲ್ಲಿ ಉಪಾ]

**ಉಷಾ :-** ಶೀನೂ...ಶೀನೂ... ಇದೇನು ಹೀಗೆ ನಿಂತಿದೀಯೆ? ಟ್ರೇನ್ ವೇಳೆ ಸಮೀಪಿಸಿತು. ಎಲ್ಲಿ ನಿನ್ನ ಬ್ಯಾಗು? ಓಹೋ... ಇನ್ನು ಆಗಬೇಕೇನೋ ಎಲ್ಲಾ ಸಿದ್ಧತೆ. ಬೇಗನೇ ಏಳಬಾರದೇ? ಇಷ್ಟರಲ್ಲೇ ನಾನು ಬಂದದ್ದು ಆ ಕುರುಡನಿಗೆ ಗೊತ್ತಾಗಿ ಹೋದರೆ.....?

**ಧ್ವನಿ :-** ಎಲಾ, 'ಕುರುಡು' ಎಂಬ ಶಬ್ದ ಇವಳ ಕೆಂದುಟಿಗಳಿಂದ ಬಂದಾಗ ಎಷ್ಟು ಮಧುರವಾಗಿ ಕೇಳಿಸುತ್ತದೆ!

**ಉಷಾ :-** ಇದೇನು ಕೈಯಲ್ಲಿ ಪಿಸ್ತೂಲು? ... ಓಹೋ ನಮ್ಮ ರಕ್ಷಣೆಗೋ? ಒಳ್ಳೆಯದೆ ಆಯ್ತು. ಇದೇನು ಹೀಗೆ ನಿಂತಿದೀಯೇ ಬೆಪ್ಪು ಬಡಿದವರ ಹಾಗೆ? ಅವಸರ ಮಾಡಬಾರದೆ?

**ಶೀನು :**- (ಗಂಭೀರ ಸ್ವರದಲ್ಲಿ) ಉಷಾ

**ಉಷಾ :**- ಉಂ?

**ಶೀನು :**- ಬರುವಾಗ ನಿನ್ನ ಮನಸ್ಸಿಗೇನಾದರೂ ಕೆಡುಕೆನಿಸಿತೆ?

**ಉಷಾ :**- ಓ...ಅದೆಲ್ಲಾ ಟ್ರೇನಿನಲ್ಲಿ ಹೇಳುತ್ತೇ.ಎ ಬೇಗನೆ ಏಳಬಾರದೆ?

**ಶೀನು :**- ಇಲ್ಲ. ನಾನಿಲ್ಲಿಯೇ ಕೇಳಬೇಕಲು. ಟ್ರೇನಿಗಿನ್ನೂ ಸಮಯವಿದೆ. ಏನೂ ಅನ್ನಿಸಲಿಲ್ಲವೆ?

**ಉಷಾ :**- ಅನ್ನಿಸದೇನು? ತುಂಬ ಪಶ್ಚಾತ್ತಾಪವಾಯಿತು. ಒಂದು ಸಲ ನಮ್ಮ ಪ್ರಯಾಣವನ್ನು ರದ್ದು ಮಾಡಬೇಕೆಂದೂ ಇಚ್ಛಿಸಿದೆ. ಅಷ್ಟರಲ್ಲಿ ಏನಾಯ್ತು ಗೊತ್ತೆ?

**ಶೀನು :**- (ನಿರುತ್ಸಾಹದಿಂದ) ಏನಾಯ್ತು?

**ಉಷಾ :**- ನಿನ್ನೆ ರಾತ್ರಿ ನೀನು ಹೇಳಿದ ಮಾತುಗಳನ್ನೆಲ್ಲಾ ನೀನು ಮತ್ತೆ ನನ್ನೆದುರಿಗೆ ಆಡಿದ ಹಾಗಾಯ್ತು. ಧೈರ್ಯ ಬಂತು. ಸುದೈವಕ್ಕೆ ಟಾಂಗಾವಾಲಾ ಬಂದಾಗ ಯಾರೂ ಇರಲಿಲ್ಲ. ಓಡಿ ಬಂದೆ. ಮತ್ತೆ ಏನೇನು ತಂದಿದೇನೆ ಗೊತ್ತೆ?

**ಶೀನು :**- (ನಿರುತ್ಸಾಹ) ಏನೇನು?

**ಉಷಾ :**- ನೀನು ಹೇಳಿದ್ದನ್ನೆಲಾ! ಆಭರಣ! ದುಡ್ಡು! ನಮ್ಮ ಸುದೈವ ಶೀನೂ.. ಎಂದೂ ಬೀಗದ ಕೈ ಇಡದ ಕುರುಡ, ಇಂದು ಮೇಜಿನ ಮೇಲೆ ಅದನ್ನು ಇಟ್ಟು ಹೋಗಿತ್ತು. ತಿಜೋರಿ ನನ್ನ ಕೈಗೆ! ಓಹ್... ಇನ್ನು ನಮ್ಮಿಬ್ಬರನ್ನಲು ಅಗಲಿಸೋದು ಯಾರಿಂದಲೂ ಸಾಧ್ಯವಿಲ್ಲ ಶೀನೂ, ನಮ್ಮಿಬ್ಬರನ್ನು ಅಗಲಿಸೋದು ಯಾರಿಂದಲೂ ಸಾಧ್ಯವಿಲ್ಲ.

**ಶೀನೂ :**- ಸಾವಿಗೂ...?

**ಉಷಾ :**- ಓಹೋ.. ಸಾವು ಎಂದೊಡನೆ ನನಗೆ ಭಯವಾಗುತ್ತೇಂತ ಗೋತ್ತಿದ್ದೂ ನನ್ನನ್ನು ನೀನು ಕೆಣಕುತ್ತಿದ್ದಿಯೇ.

**ಶೀನು :**- (ಗಂಭೀರ ಸ್ವರ) ಉಷಾ.

**ಉಷಾ :**- ಉಂ?

**ಶೀನು :**- ನಾವು ಮೊದಲ ರಾತ್ರಿ ಸಂಧಿಸಿದ ನಂತರ ಏನೆನ್ನಿಸಿತ್ತು ನಿನಗೆ?

**ಉಷಾ :**- ಈಗ ಅದನ್ನೆಲ್ಲ ಹೇಳಲು ಸಮಯವಿದೆಯೆ? ನಾನು ಬಂದದ್ದು ಆತನಿಗೆ ಗೊತ್ತಾಗಿ ಹೋದರೆ... ಬೇಗ ಏಳೂಂದ್ರೆ.

**ಶೀನು :**- ಆತ ಇಲ್ಲಿಗೆ ಎಂದೂ ಬರಲಾರ - ಅದರ ಬಗೆಗೆ ನಿಶ್ಚಿಂತಳಿರು. ಟ್ರೇನಿಗಿನ್ನೂ ಸಾಕಷ್ಟು ಸಮಯವಿದೆ. ಹೇಳು, ಏನು ಅನ್ನಿಸಿತ್ತು ನಿನಗೆ?

**ಉಷಾ :-** ನನಗೆ? ನಿನಗೆನ್ನಿಸಿದ ಹಾಗೆ. ರಾತ್ರಿ ಹನ್ನೆರಡು ಗಂಟೆಗೆ ನೀನೆದ್ದು ಹೋಗುತ್ತಲೂ ನನಗೆ ತುಂಬ ಪಶ್ಚಾತ್ತಾಪವಾಯಿತು. ಸುತ್ತಲೆಲ್ಲಾ ಕತ್ತಲೆ. ಬೆಳಗಿನ ವರೆಗೂ ಅತ್ತು ಅತ್ತು ಎದೆ ಹಗರು ಮಾಡಿಕೊಂಡೆ. ಎಂದೂ ನಿನ್ನ ಮುಖ ನೋಡಬಾರದೆಂದೂ ಪ್ರತಿಜ್ಞೆ ಮಾಡಿದೆ. ಬೆಳಿಗ್ಗೆ ಅವರ ಮುಖ ನೋಡುತ್ತಲೂ ಮತ್ತೆ ಅಳು ಬಂತು. ಮತ್ತೊಮ್ಮೆ ಪ್ರತಿಜ್ಞೆ ಮಾಡಿದೆ.  ಏನೋ ಸಮಾಧಾನವಾಯ್ತು (ಸುಯದ್ದು) ರಾತ್ರಿ ನೀನು ಮತ್ತೆ ಬಂದಾಗ ನನ್ನ ನಿರ್ಬಲತೆಯ ಅರಿವಾಯ್ತು.

**ಶೀನು :-** ನನಗೂ ಹಾಗೇ ಆಯ್ತು. ಸಂಜೆಯ ವರೆಗೆ ಪಶ್ಚಾತ್ತಾಪಗೊಂಡು ಕುದಿದೆ. ಮತ್ತೆ ರಾತ್ರಿಯಾಗುತ್ತಲೂ ನನ್ನ ನಿರ್ಬಲತೆಯ ಅರಿವಾಯ್ತು. ದೇವರು ನಮ್ಮಿಬ್ಬರಲ್ಲಿ ಆಸೆಯೊಂದನ್ನು ಹಾಕಿ ದೊಡ್ಡ ಅನ್ಯಾಯ ಮಾಡಿದ ಉಷಾ - ದೊಡ್ಡ ಅನ್ಯಾಯ ಮಾಡಿದ?

**ಉಷಾ :-** ಹಳೇ ಕತೆಯಿಂದೇನು ಪ್ರಯೋಜನ? ಟಿಕೇಟುಕೊಂಡೆಯಾ? ಯಾವ ಸ್ಟೇಷನ್ನಿನಲ್ಲಿ ಇಳಿಯೋದು?

**ಶೀನು :-** ನರಕದಲ್ಲಿ!

**ಉಷಾ :-** ನೀನು ಮತ್ತೆ ಮತ್ತೆ ನನ್ನನ್ನು ನೋಯಿಸುತ್ತಿದ್ದೀಯೆ. ನರಕಕ್ಕಂತೂ ನಮ್ಮಿಬ್ಬರ ಸ್ನೇಹವಾದಾಗಲೇ ಇಳಿದುದಾಗಿದೆ. ಇನ್ನು ಹೋಗುವದೆಲ್ಲಿ?

**ಶೀನು :-** ನಿನಗೆ ಈ ನರಕದಿಂದ ಹೊರಬರಲು ಆಸೆಯಾಗುವದಿಲ್ಲವೇ ಉಷಾ?

**ಉಷಾ :-** ನಿನ್ನ ಜೊತೆಗಿದ್ದ ನರಕ ನನಗೆ ಸ್ವರ್ಗವಾಗುತ್ತದೆ ಶಿನೂ! ಇದು ನರಕವಲ್ಲ! ಖಂಡಿತ ನರಕವಲ್ಲ! ನರಕವೆಂದವರಾರು? ಇದು ನರಕವೇ ಎನ್ನುವುದಾದರೆ ಇಂಥ ನರಕ ನನಗೆ ಸಾವಿರ - ಸಾವಿರ ಸಲ ಬರಲಿ! ಓ... ಈ ನರಕದಲ್ಲಿ ಎಂಥ ಸೊಗಸ್ಸಿದೆ! ಈ ಪ್ರೇಮ ಜೀವಿಗಳೆರಡೂ ಈ ನರಕದ ದೇವತೆಗಳು!!

**ಧ್ವನಿ :-** ನರಕದಲ್ಲಿ ದೇವತೆಗಳೆಂದೂ ಇರಲಾರರು! (ಪ್ರತಿಧ್ವನಿಯಂತೆ)

**ಉಷಾ :-** (ಕೇಳಿದವರಂತೆ) ಯಾರದು? ಯಾರು ಹಾಗೆ ಅಂದವರು? ಶೀನೂ ನನ್ನನ್ನು ಉಪೇಕ್ಷಿಸುತ್ತಿದ್ದೀಯೆ.
ನಾಚಿಕೆಯಾಗುವುದಿಲ್ಲವೇ ನಿನಗೆ - ಹಾಗೆನ್ನಲ್ಲಿಕ್ಕೆ?

**ಶೀನು :-** ನಿನ್ನ ಹುಚ್ಚುತನವೇ ನಿನ್ನಿಂದ ಹಾಗೆ ಅನ್ನಿಸುತ್ತಿದೆ.. ಕೇಳು ಉಷಾ, ನನ್ನ ಪಾಲಿನ ಕೊನೆಯ ಹವೆಯನ್ನು ನಾನೀಗ ಉಸಿರಾಡಿಸುತ್ತಿದ್ದೇನೆ. ನನ್ನ ನಾಲಗೆಯ ಕೊನೆಯ ಚಪಲವನ್ನು ನಾನೀಗ ತೀರಿಸುತ್ತಿದ್ದೇನೆ.

**ಉಷಾ :-** ನಿನ್ನ ಮಾತು ನನಗೆ ಅರ್ಥವಾಗುತ್ತಿಲ್ಲಾಂದ್ರೆ.

**ಶೀನು :-** ಅರ್ಥವಾಗುವ ಹಾಗೆ ಹೇಳುತ್ತೇನೆ ಕೇಳು. ನನ್ನ ನಿನ್ನ ನಡುವಿನ ಸಂಬಂಧ ಪ್ರೇಮವಲ್ಲ. ನಿನ್ನತ್ತ ನನ್ನನ್ನೆಳೆದುದು ನಿನ್ನ ಪ್ರೇಮವಲ್ಲ - ಈ ನಿನ್ನ ರೂಪರಾಶಿ!

ಧ್ವನಿ - ನರಕದಲ್ಲಿ ಪ್ರೇಮವೆಂದಿಗೂ ಇರದು!

**ಶೀನು :-** ನೀನೀಗ ಓಡಿಬಂದುದೂ ಪ್ರೇಮಕ್ಕಾಗಿ ಅಲ್ಲ....ಸಾವಿತ್ರಿ ಸತ್ಯವಾನರೋ ಸೀತಾರಾಮರೋ ನುಡಿದ ಸಂಸ್ಕೃತ ಶಬ್ದ "ಪ್ರೇಮ."ನಮ್ಮ ನಡತೆಯ ಹೇಸಿಕೆಯನ್ನು ಮುಚ್ಚಲು ಅದನ್ನು ಅಪಭ್ರಂಶಿಸಿ ಪೈಶಾಚಿಕ ಭಾಷೆಯಲ್ಲಿ ಕರೆದವರು ನಾವು!

**ಉಷಾ :-** (ಕಪಾಳಕ್ಕೆ ಬಿಗಿದು) ಪಾಪಿ! ಚಾಂಡಾಲ!

**ಧ್ವನಿ :-** ಎಲಾ! ಇವಳು ಈ ಶಬ್ದಗಳನ್ನು ಎರಡನೆಯವರಿಗೂ ಬಳಸಬಲ್ಲಳು!

**ಶೀನು :-** ಪಾಪಿ! ಚಾಂಡಾಲ! ಹೌದು. ಪಾಪಿಯೂ ಹೌದು, ಚಾಂಡಾಲನೂ ಹೌದು - ನಾನು ಮೊದಲಿನಿಂದಲೂ ಸುಶೀಲನಿದ್ದು ಆಗ ಶಬ್ದಗಳು ನನ್ನ ಕಿವಿಯ ಮೇಲೆ ಬಿದ್ದಿದ್ದರೆ., ಅಲ್ಲಮ ಪ್ರಭು ಮಾಯೆಯನ್ನು ಕಂಡು ನಕ್ಕ ಹಾಗೆ ನಾನೂ ಗಹಗಹಿಸಿ ನಗುತ್ತಿದ್ದೆ. ದುರ್ದೈವ. ನಾನೀಗ ಆ ಶಬ್ದಗಳಿಗೆ ಯೋಗ್ಯನಾಗಿದ್ದೇನೆ. ತನ್ನ ಪ್ರಾಣಕ್ಕಿಂತ ಪ್ರಿಯವಾಗಿ ಪ್ರೀತಿಸಿದ ಗೆಳೆಯನ ಧರ್ಮಪತ್ನಿ ಎಂಬುದನ್ನೂ ಮರೆತು ನಿನ್ನ ಜೊತೆ ಸೇರಿದೆ. ನೀನೂ ಹಸಿದಿದ್ದೆ. ನೀನಾಗ ನಿರಾಕರಿಸಿದ್ದರೆ ಸರಿಯಾದ ದಾರಿ ತುಳಿಯಬಹುದಿತ್ತು. ಆಗಲಿಲ್ಲ. ಸದಾಶಿವನ ಬಗೆಗೆ ಕೀಳುದೃಷ್ಟಿ ಇಬ್ಬರಲ್ಲೂ ಬೆಳೆಯುತ್ತ ಬಂತು. ಅವನಿಗೆ ನಾವು ಕೊಟ್ಟುದು ತಿರಸ್ಕಾರವನ್ನು, ಆತ ಮಾತ್ರ ಸ್ನೇಹವನ್ನೇ ಕೊಟ್ಟ. ಸದಾಕಾಲ ಈ ಪೀಡೆ ತೊಲಗದೆಂದ ಕಣ್ಣು ಬೇನೆಯಾದ ಸಂಧಿ ಸಾಧಿಸಿ ಔಷಧದ ಬದಲು ಅಂಜನವಿಕ್ಕಲು ಹೇಳಿದೆ. ನೀನದನ್ನು ಕಾರ್ಯರೂಪಕ್ಕಿಳಿಸಿದೆ. ಅಂಜನವಿಕ್ಕಿಸಿಕೊಂಡಾತ ಆತನಾದರೂ ಕಣ್ಣು ಕಳೆದುಕೊಂಡವರು ನಾವು ಉಷಾ! ಅವನ ಎರಡು ಕಣ್ಣಿಗೆ ಪ್ರತಿಯಾಗಿ ನಮ್ಮ ನಾಲ್ಕು ಕಣ್ಣು ಕುರುಡಾದವು! (ಉಷಾ ಅಳುವ ಧ್ವನಿ.) ಆಸ್ಪತ್ರೆಗೆ ಹೋದ. ಕಣ್ಣು ಸರಿಯಾದರೂ ನಮ್ಮನ್ನು ಪರೀಕ್ಷಿಸಬೇಕೆಂದು ಮತ್ತೆ ಕುರುಡರಂತೆಯೇ ನಟಿಸುತ್ತ ಮನೆ ಸೇರಿದ!

**ಉಷಾ :-** ಆಂ? ಏನಂದಿ?

**ಶೀನು :-** ಕಣ್ಣು ಸರಿಯಾದರೂ ನಮ್ಮನ್ನು ಪರೀಕ್ಷಿಸಬೇಕೆಂದು ಮತ್ತೆ ಕುರುಡರಂತೆಯೇ ನಟಿಸುತ್ತ ಮನೆ ಸೇರಿದ. ಆ ದಿನ ನೆನಪಿದೆಯೆ? ಆತ ಹಾಸ್ಪಿಟಲ್‌ದಿಂದ ಬಮದ ದಿನ - ನೆನಪಿದೆಯೆ?.. ಆ ದಿನ?

**ಉಷಾ :-** ಉಂ?

**ಶೀನು :-** ನೆನಪಿದೆಯೆ?

(ಒಂದು ಬಗೆಯ ಸಂಗೀತ. ಪುಸ್ತಕದ ಪುಟ ತಿರುವಿದ ಸಪ್ಪಳ. ನಂತರ ಸ್ತಬ್ಧ. ಪಿಸುಧ್ವನಿ ಅಸ್ಪಷ್ಟವಾಗಿ ಬರಬರುತ್ತ ಸ್ಪಷ್ಟವಾಗುತ್ತದೆ.)

**ಉಷಾ :-** ಶೀನೂ.

**ಶೀನು :-** ಉಂ?

**ಉಷಾ :-** ಕುರುಡ ಬರುತ್ತಿದೆಯಲ್ಲ.

**ಶೀನು :-** ಕಣ್ಣು ಕೊನೆಗೂ ಸರಿಯಾಗಲಿಲ್ಲವಂತಲ್ಲ?

**ಉಷಾ :-** ನಮ್ಮ ಸುದೈವ ಶೀನೂ, ಅದಿನ್ನು ಕೊನೆಯ ವರೆಗೂ ಕೈಯಾಡಿಸಿಯೇ ಸಾಯಬೇಕು! ಎಲ್ಲಿ ಹೊರಟೆ? - ಈಗಲೇ ಮನೆಗೆ ಹೋಗಬೇಕೇನೊ. ಬಿಡೋಲ್ಲಾಂದ್ರೆ - ಬಿಡೋಲ್ಲ. ಹ್ಯಾಗೆ ಬರ್ತಾ ಇದೆ ತುಸು ಮೋಜು ನೋಡಬಾರದೆ?

(ಕುಲು ಕುಲು ಕುಲು ನಗುವಳು.  ಸ್ವಲ್ಪ ಸಮಯದ ನಂತರ  ಬೂಟು ಮತ್ತು ಕೋಲಿನ ಸಪ್ಪಳ ಮೊದಮೊದಲು ದೂರಿನಿಂದ ಅಸ್ಪಷ್ಟವಾಗಿ ಬರಬರುತ್ತ ಸ್ಪಷ್ಟವಾಗಿ ಕೇಳಿ ಬರುತ್ತದೆ.)

**ಸದಾಶಿವ :-** ಉಷಾ...

**ಉಷಾ :-** ಬಂದೆ. (ಪಿಸುಧ್ವನಿ) - ಹಾಳು ಸಹವಾಸ - (ಸ್ಪಷ್ಟವಾಗಿ) ಅಲ್ಲೆ - ಅಲ್ಲೆ ಕುರ್ಚಿ ಇದೆ ಕೂತ್ಕೊಳ್ಳಿ... ಶಂಕರ ಅಲ್ಲೇ ಕುರ್ಚಿಯಲ್ಲಿ ಕೂಡ್ರಿಸು. ಹೂಂ... ಸರಿ ನೀನು ಹೊರಟ್ಹೋಗು. (ಶಂಕರ ಹೋಗುತ್ತಾನೆ.)

**ಸದಾಶಿವ :-** ಶೀನೂ ಬಂದಿದ್ನೆ?

**ಉಷಾ :-** ಇಲ್ಲ. ಇನ್ನೂ ಬಂದಿಲ್ಲ. ಸಂಜೆಗೆ ಬರುತ್ತಾರೇನೋ... ಕಾಫಿ ತರಲೇ?

**ಸದಾಶಿವ :-** ಕಾಫೀ ತರುತ್ತೀ? ತಗೊಂಬಾ...

**ಶೀನು :-** (ಪಿಸು ಧ್ವನಿ) ಉಷಾ...!! ಸದಾಶಿವನ ಮುಖ ಈ ಹೊತ್ತು ಎಷ್ಟು ಸುಂದರವಾಗಿ ತೋರುತ್ತಿದೆ ನೋಡು! ಏನೋ ಭವ್ಯವಾದ ಗುಡಿಯಲ್ಲಿ ಹೊಕ್ಕ ಹಾಗೆ -

**ಉಷಾ :-** ಇದೇನು ಮತ್ತೆ ಹಗಲು ವೈರಾಗ್ಯ?

**ಶೀನೂ :-** (ಪಿಸು ಧ್ವನಿ) ಉಷಾ... ಸದಾಶಿವನ ಆ ಮಂದಹಸ ನೋಡು! ಆ ಮುಗ್ಧ ಮುಖ ನೋಡು! ನಮ್ಮ ಸಂಬಂಧವಿನ್ನು ಸಾಕು ಉಷಾ! ತೀರ ಸುಖಿಗಳೆಂದುಕೊಂಡ ನಮಗೆ ಅಂಥದೊಂದು ಮುಗುಳು ನಗೆ ನಗಲು ಬರುತ್ತದೆಯೆ? ಆ ಮಂದಹಾಸಕ್ಕೆ ಯೊಆವ ಬೆಲೆ ತೆತ್ತರೆ ನಮ್ಮದಾದೀತು! ನಾನವನ ಕಾಲು ಹಿಡಿದು ಕ್ಷಮೆ ಕೇಳಿಕೊಳ್ಳುತ್ತೇನೆ... ನಾನಿನ್ನು ಹಾಗೇ ಇರಲಾರೆ...ಉಷಾ...

**ಉಷಾ :-** (ಗಡುಸು ಧ್ವನಿ) ಏನ್ಹಾಗೆ ಹುಚ್ಚುಚ್ಚು ಆಡಿದರೆ?

**ಸದಾಶಿವ :-** ಯಾರದು ಉಷಾ?

**ಉಷಾ :-** (ಸಾವರಿಸಿಕೊಂಡು) ಯಾರಿಲ್ಲ... ಒಳಗೆ ಶಂಕರ ಏನೇನೋ ಅಂದುಕೊಂಡು ನಗ್ತಿದಾನೆ... ಅವನಿಗಂದೆ ಅಷ್ಟೆ. (ಪಿಸು ಧ್ವನಿಯಲ್ಲಿ) ಶೀನೂ ತುಸು ಹೊರಗೆ ನಡೆ...(ಹೋಗುವರು.)

**ಶಂಕರ :-** ಸರ್ ಸರ್... (ಪ್ರವೇಶಿಸಿ) ಸರ್......

**ಸದಾಶಿವ :-** ಏನದು ಶಂಕರ?

**ಶಂಕರ :-** ಬೆಕ್ಕೇನಾದ್ರೂ ಇಲ್ಲಿ ಬಂದಿತ್ತೆ ಸಾರ್?

**ಸದಾಶಿವ :-** ಎಂಥ ಬೆಕ್ಕೊ?

**ಶಂಕರ :-** (ಗಹಗಹಿಸಿ ನಗುತ್ತ) ಕಣ್ಮುಚ್ಚಿಕೊಂಡು ಹಾಲ್ಕುಡೀತಾ ಇತ್ತು ಸಾರ್... ಹಿಂದಿನಿಂದ ಏಟು ಹಾಕಬೇಕೆನ್ನೋದರಲ್ಲೇ ಸಪ್ಪಳವಾಗಿ ಗಡಬಡಿಸಿತು. ಮುಂದೆ ಏನಾಯ್ತು ಗೊತ್ತೇ ಸಾರ್? ಪಾತ್ರೆ ಅದರ ಮೊಗಕ್ಕೆ ಹಾಗೇ ಸಿಕ್ಬಿಟ್ತು! ಏಟು ಹಾಕಬೇಕೆಂದರೆ ಇತ್ತ ಕಡೆಗೇ ಓಡಿ ಬಂತು!... ತುಂಬ ತಮಾಷೆ ಸಾರ್! ಪಾತ್ರೆ ಅದರ ಮುಖ್ಕೆ ಹಾಗೇ ಇದೆ! (ಮತ್ತೆ ನಗು...) ಅಲ್ನೋಡಿ! ಅಲ್ನೋಡಿ ಸಾರ್!...

(ನಗು ಅಸ್ಪಷ್ಟವಾಗುತ್ತದೆ. ಒಂದು ಬಗೆಯ ಸಂಗೀತ. ಪುಸ್ತಕ  ಮುಚ್ಚಿದ ಸಪ್ಪಳ)...

**ಶೀನು :**- ನೆನಪಿದೆಯೆ? (ನೀರವ) ನಿಜವಾಗಿಯೂ ಕುರುಡರಂತೆಯೇ ನಟಿಸುತ್ತ ಮನೆ ಸೇರಿದ! ಆತ ನಮ್ಮಿಬ್ಬರನ್ನು ನೆಮ್ಮದಿಯಿಂದ ಇರಿಸಬೇಕೆಂದು ತಾನೇ ಮನೆ ಬಿಟ್ಟು ಎಲ್ಲಿಯಾದರೂ ಹೋಗಬೇಕೆಂದಾಗ ನಾವೇ ಓಡಿಹೋಗುವದು ಅವನಿಗೆ ಗೊತ್ತಾಯ್ತು. ಬ್ಯಾಂಕಿನಿಂದ ತಾನೇ ದುಡ್ಡು ತರಿಸಿ ಪೆಟ್ಟಿಗೆಯಲ್ಲಿಟ್ಟು ಬೀಗದ ಕೈ ಬೇಕೆಂದೇ ಮೇಜಿನ ಮೇಲಿಟ್ಟ. ನೀನು ದುಡ್ಡು ತೆಗೆದುಕೊಂಡು ಬಂದೆ!

**ಉಷಾ :**- ನಿನಗಿದೆಲ್ಲಾ ಹೇಗೆ ಗೊತ್ತಾಯ್ತು?

**ಶೀನು :**- ಗೊತ್ತಾಯ್ತು. ಆದರೂ ಸುಳ್ಳಲ್ಲ. ಹೇಳು... ಈಗಲೂ ನಿನಗೆ ಓಡಿಹೋಗಲು ಮನಸ್ಸಾಗುತ್ತಿದೆಯೆ?

**ಉಷಾ :**- (ಅಳುತ್ತ) ನಾನು ಪಾಪಿ ಶೀನೂ... ನಾನು ಪಾಪಿ! ಇನ್ನು ಯಾವ ಮುಖ ಹೊತ್ತು ಅವರೆದುರು ಹೋಗಲಿ? ನಾನಲ್ಲಿ ಹೋಗಬಾರದು……… ಎಲ್ಲಿಯಾದರೂ ಹೋಗೋಣ. ನನ್ನ ಕೈ ಬಿಡಬೇಡ ಶೀನೂ.

**ಶೀನು :**- ಸಾಯಲಿಕ್ಕೆ ಮನಸ್ಸಿದೆಯೆ?

**ಉಷಾ :**- (ಆರ್ತಳಾಗಿ) ಸಾಯುವುದಕ್ಕೆ ನನಗೆ ಭಯವಾಗುತ್ತದೆ! ನಾನು ಸಾಯಲಾರೆ... ಎಲ್ಲಿಯಾದರೂ ಓಡಿ ಹೋಗೋಣ!

**ಶೀನು :**- ಇನ್ನೂ ಪಾಪ ಮಾಡುವ ಮನಸ್ಸು ನನಗಿಲ್ಲ ಉಷಾ. ನಿನ್ನ ಗಂಡನ ಬಳಿಗೆ ಹೋಗಿ ಅವನ ಸೇವೆ ಮಾಡಿ ಪಾಪ ಕಳೆದುಕೊ. ನಾನು ಮಾತ್ರ ಅವನ ಮುಖ ನೋಡಲಾರೆ. ನನ್ನ ಪಾಪಗಳಿಗೊಂದು ಕ್ಷಮೆ ಸಿಗಬಾರದು. .ಅವಕ್ಕ ಪರಿಹಾರ ದೊರೆ ಯಬಾರದು. ನಾನು ಬಹಳ ಬಳಲಬೇಕು... ನರಕದಲ್ಲಿಯೂ ನನಗೆ ಸ್ಥಾನ ಸಿಗಬಾರದು. ಅಂತೆಯೇ ಇದೀಗ ಸಾವನ್ನಪ್ಪುತ್ತಿದ್ದೇನೆ.

**ಉಷಾ :**- ನನ್ನ ಕೈ ಬಿಡಬೇಡ  (ಅಳುತ್ತ) ಅವರು ಮತ್ತೆ ನನ್ನನ್ನು ಸ್ವೀಕರಿಸಲಾರರು...ಸ್ವೀಕರಿಸಲಾರರು.

**ಶೀನೂ :**- ಗಂಗೆ ಹರಿಯುವದು ಪಾಪಿಗಳಿಗಾಗಿ ಉಷಾ, ಹೋಗು. ಆತ ಖಂಡಿತ ಸ್ವೀಕರಿಸುತ್ತಾನೆ. ಹಾಗೇ ನಾನೂ ಕ್ಷಮೆ ಕೇಳಿದ್ದೇನೆಂದು ಹೇಳು.

**ಉಷಾ :**- (ಅಳುತ್ತ) ನಿಲ್ಲು ಶೀನೂ... ನನ್ನನ್ನೂ ಕೊಲ್ಲು……. ಸಾಯಲು ನಾನೂ ಸಿದ್ಧಳಿದ್ದೇನೆ…ಶೀನೂ…! ಶೀನೂ…….!!!

(ಗುಂಡು ಹಾರಿದ ಸಪ್ಪಳ)

## ದೃಶ್ಯ ಮೂರು

[ಬಿಸಿಯುಸಿರ - ಜೊತೆಗೆ ಉಸಿರಾಟದ ಅಸ್ಪಷ್ಟ ಸಪ್ಪಳ... ತುಸು ಹೊತ್ತು ಹೀಗೇ ಸಾಗಿದ ಬಳಿಕ ರಗ್ಗು ಸರಿಸಿದ - ಕುರ್ಚಿಗೆ ತಡವರಿದ ಸಪ್ಪಳ.]

**ಸದಾಶಿವ :**- ಯಾರವರು?

**ಶಂಕರ :**- ನಾನು ಶಂಕರ ಸಾರ್.

**ಸದಾಶಿವ :**- ನಿದ್ದೆ ಬರಲಿಲ್ವೇನೋ ಇನ್ನೂ?

**ಶಂಕರ :**- ಅಕ್ಕಾವರು ಇನ್ನೂ ಬರಲಿಲ್ಲ ಸಾರ್, ಹನ್ನೆರಡು ಹೊಡೀತು.

**ಸದಾಶಿವ :**- ಅವಳಿನ್ನು ಎಂದಿಗೂ ಬರಲಿಕ್ಕಿಲ್ಲ ಶಂಕರ - ಎಂದಿಗೂ ಬರಲಿಕ್ಕಿಲ್ಲ. ಎಂದೂ ತಿರುಗಿ ಬಾರದಷ್ಟು ದೂರ ಹೋಗಿದ್ದಾಳೆ.

**ಶಂಕರ :**- (ಅಳಲುತ್ತ) ನೀವು ಏನೇ ಹೇಳಿ ಸಾರ್. ಅಕ್ಕಾ ಖಂಡಿತ ಬರುತ್ತಾರೆ.

**ಸದಾಶಿವ :**- ಎಲಾ ಅಳ್ತಾ ಇದೀಯಲ್ಲೊ? ನಿನ್ನಕ್ಕನ ಮೇಲೆ ನಿನಗೆ ತುಂಬ ಪ್ರೀತಿಯೇನೊ?

**ಶಂಕರ :**- ನಿಮಗೆ ಸಂಬಂಧಿಸಿದ ಎಲ್ಲದರ ಮೇಲೂ ನನಗೆ ತುಂಬ ಪ್ರೀತಿ ಸಾರ್. ನೀವು ಉಪಯೋಗಿಸುವ ಈ ದಾಡಿ ಸಟ್ಟಿನ ಮೇಲೂ ನನಗೆ ತುಂಬ ಅಭಿಮಾನ! ನೀವು ನಮಂಥ ಅನಾಥರ ದೇವರು ಸಾರ್...

**ಸದಾಶಿವ :**- ಶಂಕರ, ಒಂದು ಪ್ರಶ್ನೆ ಕೇಳಲೇ?

**ಶಂಕರ :**- ಕೇಳಿ ಸಾರ್...

**ಸದಾಶಿವ :**- ಜನರೆಲ್ಲಾ ನನಗೆ ಕುರುಡಾಂತ ಹೇಳ್ತಾರೆ , ನಿನಗೂ ಹಾಗೇ ಅನ್ನಿಸುತ್ತೇನೋ?

**ಶಂಕರ :**- ಏನು ಮಾತು ಸಾರ್? ಹಾಸ್ಪಿಟಲ್‌ಗೆ ಹೋಗಿ ಬಂದಾಗಿನಿಂದ ಒಬ್ಬರೇ ಅಡ್ಡಾಡ್ತೀರಿ, ಬರೀತೀರಿ, - ಓದ್ತೀರಿ -

**ಸದಾಶಿವ :**- ನಿನ್ನಕ್ಕ - ಶೀನೂ -

**ಶಂಕರ :**- (ತಡೆದು) ಹೌದು ಸಾರ್. ಶ್ರೀನಿವಾಸರಾಯರು - ಅಕ್ಕಾವರು - ಇಬ್ಬರೇ ಸಾರ್ ನಿಮಗೆ ಕುರುಡಾಂತನ್ನೋದು. ಆ ಸೊಕ್ಕಿನ ಶ್ರೀನಿವಾಸರಾಯರು...

**ಸದಾಶಿವ :**- ಛೀ ಛೀ... ಈ ಜಗತ್ತಿನಲ್ಲಿ ನಾವು ಯಾರನ್ನೂ ದ್ವೇಷಿಸಬಾರದು.

**ಶಂಕರ :**- ನಮಗೆ ಅನ್ಯಾಯ ಮಾಡಿದವರನ್ನೂ......?

**ಸದಾಶಿವ :**- ಅವರನ್ನೂ ದ್ವೇಷಿಸಬಾರದು. ನಾವು ಹುಟ್ಟಿರೋದು ತಿರಸ್ಕರಿಸಲಿಕ್ಕಲ್ಲ ಶಂಕರ್, ಪ್ರೇಮಿಸೋದಕ್ಕೆ!

**ಶಂಕರ :**- ಸರ್ ಸರ್...

**ಸದಾಶಿವ :**- ಹೂಂ-

**ಶಂಕರ :**- ಈ ಫೋಟೋ ಯಾರದು ಸಾರ್ ...?

**ಸದಾಶಿವ :-** ಯಾವದು? ಆ ಕುರ್ಚಿಯ ಮೇಲಿನದೋ?

**ಶಂಕರ :-** ಹೌದು ಸಾರ್.

**ಸದಾಶಿವ :-** ಅಹಲ್ಯೆಯದು. ಅದ್ಯಾಕೋ ಬೇಕಿತ್ತು ನಿನಗೆ?

**ಶಂಕರ :-** ಅಕ್ಕಾವರು ಈ ಫೋಟೋನ್ನ ನೋಡಿದ ಕೂಡಲೇ ಚೀರಿ "ನಾನು ಹೋಗಲಾರೆ ಹೋಗಲಾರೇಂತ… ಅಳತೊಡಗಿದರು. ಯಾರು ಸಾರ್ ಈ ಅಹಲ್ಯಾ ಅಂದರೆ - ?

(ಬಾಗಿಲು ಬಡಿಯುವ ಸಪ್ಪಳ.)

**ಸದಾಶಿವ :-** ಯಾರವರು?

(ತುಸು ಹೊತ್ತು ನೀರವ. ಮತ್ತೆ ಬಾಗಿಲು ಬಡೆದ ಸಪ್ಪಳ.)

**ಶಂಕರ :-** ನಾನು ತೆಗೀತೀನಿ ಸರ್…

**ಸದಾಶಿವ :-** ನಿನಗೆ ಕೊಂಡಿ… ನಿಲುಕುವದಿಲ್ಲವಲ್ಲೋ?

**ಶಂಕರ :-** ಅಂದ ಹಾಗೇ ಈ ಅಹಲ್ಯಾ ಅಂದರ ಯಾರೂಂತ ಹೇಳಲೇ ಇಲ್ವಲ್ಲ ಸರ್……

(ಬಾಗಿಲು ಕೊಂಡಿ ಬಿಡಿಸಿ - ಬಾಗಿಲು ತೆರೆದ ಸಪ್ಪಳ…ತುಸು ಹೊತ್ತು ನೀರವ.)

**ಶಂಕರ :-** (ಉತ್ಸಾಹದಿಂದ) ನೋಡಿ ಸಾರ್! ನಾನು ಹೇಳಿರಲಿಲ್ವೆ ಅಕ್ಕಾ ಖಂಡಿತ ಬರ್ತಾರೇ - ಅಂತ. ಅಕ್ಕಾ ಬಂದರು!…ಅಕ್ಕಾ ಬಂಧರು. ಲೈಟ್ ಹಚ್ತೇನಿ ಸಾರ್……!

(ಲೈಟ್ ಸ್ವಿಚ್ಚು ಒತ್ತಿದ ಸಪ್ಪಳ.)

***

# ಖರೋಖರ

(1)

<u>ಪಾತ್ರಗಳು</u>

**ಹೆಡ್‌ಕಾನ್ಸ್ ಟೇಬಲ್ ನಂ. ೧೮**
**ಕಾನ್ಸ್‌ಟೇಬಲ್ ನಂ. ೨೦**
**ರವಿ**
**ಶೋಭಾ**
**ಹೆಂಗಸು**
**ಶಿವರಾಮಯ್ಯ**
**ಇಬ್ಬರು ಹುಡುಗರು**

--

(ಧಾರವಾಡದ ಅಶೋಕ ಪಾರ್ಕ್. ರಾತ್ರಿ ಹತ್ತು ಘಂಟೆ ಸಮಯ. ರಂಗದ ಹಿಂಭಾಗದಲ್ಲಿ ದಟ್ಟವಾದ ಮಳೆ, ಅದರ ಕತ್ತಲೆ ಇದೆ. ಅಲ್ಲೊಂದು ಬೆಂಚು. ರಂಗದ ಮುಂಭಾಗದಲ್ಲಿ ಬೆಳಕಿದೆ, ಬೆಳಕಿರುವಲ್ಲಿ ಎಡ ಭಾಗಕ್ಕೊಂದು ಬೆಂಚು. ತೆರೆ ಸರಿದಾಗ ಪೋಲೀಸ್ ಹೆಡ್‌ಕಾನ್ಸ್ ಟೇಬಲ್ ಹದಿನೆಂಟು, ಗಣೇಶ ಬೀಡಿ ಸೇದುತ್ತ ಬರುತ್ತಾನೆ. ವಯಸ್ಸು ೫೦ ರ ಮೇಲೆ. ಸ್ವಲ್ಪ ಸಮಯವದ ಮೇಲೆ ದೂರದಿಂದ ಪೋಲೀಸ್ ಸೀಟಿ ಕೇಳಿಸುತ್ತದೆ. ಅದಕ್ಕುತ್ತರವಾಗಿ ಇವನೂ ಸೀಟಿ ಊದುತ್ತಾನೆ. ಮತ್ತೆ ಬೀಡಿ ಸೇದುತ್ತ ಪ್ರೇಕ್ಷಕರನ್ನು ಕುರಿತು ಮಾತಾಡತೊಡಗುತ್ತಾನೆ)

**ಹದಿನೆಂಟು :-** ನಾನು ಪೋಲೀಸ್ ಹೆಡ್‌ಕಾನ್ಸಾಟೇಬಲ್ ಚಿಕ್ಕೀರ ಅಂತ. ನಾನಂತೂ ಸಿವಿಲ್ ಡ್ರೆಸ್ ಹೊಲಿಸಿಲ್ಲ. ಅಟೆಂಡನ್ಸ್ ರಿಜಿಸ್ಟರದಾಗ ಚಿಕ್ಕೀರ ಅಂತ ಬರದೈತಿ ಖರೆ, ಹಾಂಗಂತ ನನ್ನ ಯಾರೂ ಕರ್ಯಾಣಿಲ್ಲ. ಕರದರ ನಾ ಓ ಅನ್ನಾಣಿಲ್ಲ. ಮ್ಯಾಲಿನವರೆಲ್ಲಾ ನನ್ನ 'ಹದಿನೆಂಟು' ಅಂತಾರ. ಯಾಕಂದರ ನನ್ನ ನಂಬರ ಹದಿನೆಂಟ ಐತಿ. ಹದಿನೆಂಟು ಅಂದರ ಹದಿನೆಂಟ ಸುಳ್ಳ ಹೇಳಾವಂತ್ಲೂ ಐತಿ. ಬಹುಶಃ ಹದಿನೆಂಟ ಸುಳ್ಳಿಗೂ ನನ್ನ ನಂಬರಿಗೂ ಅರ್ಥಾತ್ ಸಂಬಂಧ ಇರಲಿಕ್ಕಿಲ್ಲ. ನಿಮ್ಮ ಕಣ್ಣಿಗೆ ನಾ ಎಲ್ಲಾ ಪೋಲೀಸ್ ಹೆಡ್‌ಕಾನ್ಸ್‌ಟೇಬಲ್ ಹಾಂಗ ಕಾಣತಿರಬಹುದು. ಆದರ ಜಾತ್ಯಾ ಪೋಲೀಸರಿಗೂ ನನಗೂ ಭಾಳ ಫರಕ ಐತಿ. ಹೇಳಿದರ ಕೈ ಬಡದ ನಕ್ಕೀರೆಪಾ - ನಾ ಪೋಲೀಸಾದ್ದು ಲಂಚಾ ತಿನ್ನಾಕಲ್ಲ.

ನಾ ಸಣ್ಣಂದಿರತ - ಹತ್ತ, ಹನ್ಯಾಡ ವಯಸ್ಸಿರಬೇಕು, ನಮ್ಮೂರಾಗೊಮ್ಮಿ ಕಳವಾಯ್ತು. ಒಬ್ಬ ಪೋಲೀಸ ಬಂದಿದ್ದ. ಏನ ಡ್ರೆಸ್ಸದು! ದೇವರ ಕಿರೀಟದಂಥಾ ಟೋಪಿಗಿ. ಇಕ್ಕs ಈಗ ಇಸ್ತ್ರಿ ಮಾಡಿಧಾಂಗ ಚಣ್ಣ, ಅಂಗಿ;' ಅದನೇನ ಮಾಡ್ತೀರಿ ನಡೀಗಿ ಅಂಗೈಯಗಲ ಲಬೆಲ್ಟು. ಎಡಗೈಯಾಗೊಂದು ಗುಂಡ ಬಡಿಗಿ. ಬಲಗೈಯಾಗೊಂದು ಗಣೇಶ ಬೀಡಿ - ಅಲಲಲಲ! ಸ್ವಥಾ ನಮ್ಮ ತಿರುಪತಿ ತಿಮ್ಮಪ್ಪನs ಅಡ್ಡಾಡಿಕೋತ ಬಿಡಿ ಸೇದಿಧಾಂಗ! ದೇವರ ಸಮಾ ನಿಮ್ಮ ಮುಂದ ಹೇಳ್ತೀನ್ರಿ - ಅವ ಬಂದ ಮೂರ ಬೀಡಿ ಸೇದೋದರೊಳಗ ಮುಚ್ಚಿಟ್ಟ ಖರೆ ಕೊಸರಿಕೊಂಡ ಹೊರಗ ಬಂತು! ಕಳವಾದ ಮಾಲ ಬಂದ ಚಾವಡ್ಯಾಗ ಬಿತ್ತು! ಏನ ಮಹಿಮಾ! ಏನ ಪವಾಡ! ಅಂದs ಅಂದಕೊಂಡಬಿಟ್ಟೆ : ಅದರ ನಾ ಪೋಲೀಸs ಆಗಬೇಕಂತ. ಆ ಮ್ಯಾಲ ಪೋಲೀಸು ಆದೆ, ಅಂದಂತೂ ಏನ ಸಡಗರ ಮಾಡಿದೆ! ರಾತ್ರಿ ಡ್ರೆಸ್ ಕಳೀಲೇ ಇಲ್ಲ. ಹಾಂಗ ಮಲಗಿದೆ. ಕನಸಿನಾಗ ತಿರುಪತಿ ತಿಮ್ಮಪ್ಪ ಬಂದ. ನೋಡತೀತಿ : ದೇವರs

ಪೋಲೀಸರ್ರಾಂಗ ಡ್ರೆಸ್ ಹಾಕಿದ್ದ. "ಎಪ್ಪಾs" ಅಂದೆ. "ಮಗನ" ಅಂದ. ಬಲಗೈಯಾಗ ಗಣೇಶಬೀಡಿ ಇತ್ತು; ಹಾಂಗs ಆಶೀರ್ವಾದ ಮಾಡಿದ, ಕೇಳಿದ : "ಮಗನs ಈ ಜಗತ್ತಿನ, ಮಂದಿಗೆಲ್ಲಾ ಒಂದಿ ಐತಿ; ಒಂದ ಇಲ್ಲಾ; ಏನ ಹೇಳು".

"ಗೊತ್ತಿಲ್ಲೆಪಾ".

"ಇಷ್ಟೂ ತಿಳಿಯಾಣಿಲ್ಲೇನೊ - ದುಃಖ ಐತಿ; ಸುಖಾ ಇಲ್ಲಾ"

ಅಲಲಲ! ಏನ ಶಾಣ್ಯಾ ನಮ್ಮ ದೇವರು! ಮತ್ತ ಅಂದ.

"ನೋಡೋ ಈ ಮಂದಿಗಿ ಸುಖಾ ಇಲ್ಲ ಅಂದ್ನೆಲ್ಲಾ - ಯಾಕಿಲ್ಲಾ ಗೊತ್ತೈತೇನು?"

"ಎಪ್ಪಾ ಗೊತ್ತಿಲ್ಲರೀ".

"ಯಾಕಂದರ ಮಂದಿ ಜಗಳಾಡತಾರೊ! ಯಾಕ ಜಗಳಾಡತಾರ?"

"ಸುಳ್ಳ ಸುಳ್ಳ  ಜಗಳಾಡತಾರರೀ ."

"ಸುಳ್ಳ ಸುಳ್ಳ ಅಲ್ಲೋ ಮಗನs ಖರೆ ಖರೆ ಜಗಳಾಡತಾರ!

"ಹಂಗಾದರ ಖರೆ ಎಲ್ಲಿರತೈತಿ ಎಪಾ?"

"ನಿನ್ನಲ್ಲಿ ಐತಿ ಅಂತ ನೀ ಅಂತಿ, ಮಂದಿ, ಅದಕ್ಕ ಸುಳ್ಳಂತಾರ. ಮಂದೀ ಖರೆ ನಿನಗ ಸುಳ್ಳ ಕಾಣಸ್ತೈತಿ."

"ಹಂಗಾದರ ಖರೇನs ಇಲ್ಲಂತೀಯಪಾ?""ಐತ್ಯೋ ಇಲ್ಲೊ! ಅದರ ಉಸಾಬರಿ ನನಗ ನಿನಗ ಯಾಕೊ? ಒಬ್ಬೊಬ್ಬಗ ಒಂದೊಂದ ಖರೆ ಇರತೈತಿ! ನಿಂದ ಬಿಟ್ಟ ಇನ್ನೊಬ್ಬರ ಖರೆ ನುಂಗಬ್ಯಾಡ. ಮಂದೀ ಖರೆ ನುಂಗೋದಂದರ ಕುಡಗೋಲ ನುಮಗಿಧಾಂಗೇನಪಾ. ಕುಡಗೋಲ ನುಂಗಿದರ ಏನಾಗತೈತಿ?"

"ಬುಡ ಹರೀತೈತಿ!"

"ಬುಡ ಹರದರ ಮೋತಿ ನೋಡಾಕ ಆಗತೈತೇನೊ ಮಗನ?"

"ಆಗತೈತಿ, ಆದರ ಕಣ್ಣೀರ ಬರತಾವೆಪ್ಪ."

"ಅದಕ್ಕ ಹೇಳ್ತೀನಪಾ, ಅವರವರು ಅವರವರೆ ಖರೇನs [ನುಂಗ ಬೇಕು. ಅಂದರ ಅದು ಒಳಗ ಹೋಗಿ ಕೂಸಾಗಿ ಹೊರಗ ಬರತೈತಿ. ಇಲ್ಲದಿದ್ದರ ಐತೆಲ್ಲ - "

"ಅದರ ಎಪ್ಪ, ಮಂದೀ ಖರೆ ನುಂಗಿದವರು ಮಕ್ಕಳಾ ಹಡೆದಿಲ್ಲಂದಿರಿ?"

“ಎಷ್ಟ ಧಡ್ಡದೀಯೋ ಮಗನೇ ಮನಿಶಾನ ಮನಸ ನಮಗ ತಿಳಿದೈತಿ? ತಿಳದಿದ್ದರ ನಾ ದೇವರ್ಯಾಕ ಆಗತಿದ್ದೆ? ನೀ ಸರಕಾರ ಯಾಕ ಆಗತಿದ್ದಿ? ನಾವಿಬ್ಬರೂ ನಿಶ್ಚಿಂತಿ ಇರಬೇಕಂದರ ನೀ ಮಂದಿಗಿ ತಿಳಿಸಿ ಹೇಳಬೇಕು, ಏನಹೇಳು.”

“ತಿಳಿತೇಪ್ಪ ತಿಳೀತು. ಅಪಾ ಕುಡಗೋಲ ನುಂಗ ಬ್ಯಾಡ್ರೋ”

‘ತಥಾಸ್ತು’

ಅಂದ ಮಾಯಾದ! ಗಪ್ಪನ ಎಚ್ಚರಾಗಿ ಕಣ್ಣ ತೆರೆದ ನೋಡತೇನು. ಪುಟ್ಟ ಪೂರಾ ಬೆಳಗಾಗೇತಿ. ಅಂದಿನಿಂದ ನೋಡ್ರೆಪಾ ದೇವರಾಣಿ ಖರೇ ಹೇಳತೇನು. ಈ ಡ್ರೆಸ್ ಹಾಕಿದಾಗ - ಸುಳ್ಳಾಡಾಣಿಲ್ಲ, ಲಂಚ ತಿನ್ನಾಣಿಲ್ಲ; ಪಾರ್ಕಿಗಿ ಬಂದ ಮಂದಿಗೆಲ್ಲಾ ಹೇಳತಿರತೇನು; ಅಪಾ ಕುಡಗೋಲ ನುಂಗಬ್ಯಾಡ್ರೋ - ಅಂತ (ಅಷ್ಟರಲ್ಲಿ ‘ಟ್ವೆಂಟಿ’ ಇನ್ನೊಬ್ಬ ಪೋಲೀಸ - ೨೦ ರ ಒಗರು ಬರುವನು) ನನ್ನ ಮಾತ ಯಾರೂ ಕೇಳೋದೇ ಇಲ್ಲ.

ನಾ ಏನ ಮಾಡಲಿ? ಯಾರಿಗಿ ಹೇಳಲಿ?

**ಟ್ವೆಂಟಿ :**– (ಸೆಲ್ಯೂಟ್ ಹೊಡೆದು)
ಎಸ್ಸರ್.

**ಹದಿನೆಂಟು :**– ಏ ಟ್ವೆಂಟೀ ಎಲ್ಲಿ ಹೋಗಿದ್ಯೋ ಸರಗ್ಯಾಡಾಕ? ಪಾರ್ಕಿನ ತುಂಬ ಒಂದ ರೌಂಡ ಹೊಡೆದ ಬಂದೇನು?

**ಟ್ವೆಂಟಿ :**– ಬಂದೆ ಸರ್.

**ಹದಿನೆಂಟು :**– ಎಷ್ಟು ಹೊತ್ತು?

**ಟ್ವೆಂಟಿ :**– ಹಾಫ್ ಅವರ್ ಸರ್.

**ಹದಿನೆಂಟು :**– ಯಾಕಲೆ ಎದುರುತ್ತರ ಕೊಡತಿ? ಬೇಕೇನ ಬೆನ್ನ ಮ್ಯಾಗೆರಡು?

**ಟ್ವೆಂಟಿ :**– (ಸುಮ್ಮನಿರುವನು)

**ಹದಿನೆಂಟು :**– ಎಲ್ಲಾರು ಪಾರ್ಕ್ ಬಿಟ್ಟ ಹೋದರೇನು?

**ಟ್ವೆಂಟಿ :**– ಹೊದ್ರು ಸರ್. ಎಲ್ಲರಿಗೂ ಹೇಳ್ದೆ ಸರ್.

**ಹದಿನೆಂಟು :**– ಏನು ಹೇಳಿದೆ?

**ಟ್ವೆಂಟಿ :**– ಕುಡಗೋಲ ನುಂಗಬ್ಯಾಡ್ರಿ ಅಂತ ಹೇಳಿದೆ.

**ಹದಿನೆಂಟು :**– (ಖುಷಿಯಾಗಿ)

ಬಂದೋಬಸ್ತಂದರ ಹಾಂಗಿರಬೇಕು. ನಿನಗ ತಿಳಿಯಾಣಿಲ್ಲಪಾ ಪೋಲೀಸಂದರ ಹಾಂಗs ಇರಬೇಕು. ಯಾಕಂದರ…….

**ಟ್ವೆಂಟಿ :**- ಗೊತ್ತು ಸರ್. ನಿಮ್ಮ ಕನಸಿನಾಗ ತಿರುಪತಿ ತಿಮ್ಮಪ್ಪ……

**ಹದಿನೆಂಟು :**- ಹೆದರಬ್ಯಾಡ, ಅದೇನೂ ನಿನ್ನ ಮುಂದ ರಿಪೀಟ ಮಾಡಾಣಿಲ್ಲ. ಹಾಂಗ ಗಿಡ, ಕಂಟಿ, ನೆರಳು ಕತ್ತಲ ಮರಿ ಇದ್ದಲ್ಲೆಲ್ಲಾ ಇನ್ನೊಮ್ಮಿ ನೋಡೋಣ ಬಾ. ಈ ಕಾಲೇಜ ಹುಡುಗರೋ… ನೀ ಈ ಕಡಿಂದ ಹೋಗು, ನಾ ಆ ಕಡಿಂದ ಬರತೀನಿ.

**ಟ್ವೆಂಟಿ :**- ಎಸ್ಸರ್.

(ಇಬ್ಬರು ಒಂದೊಂದು ದಿಕ್ಕಿಗೆ ಹೋಗುವರು. ಒಂದು ಹೆಂಗಸು ಹೆದರಿ ಹೆದರಿ ಒಂದು ಬುಟ್ಟಿ ತಂದು ರಂಗದ ಹಿಂಭಾಗದ ಮೆಳೆಯ ಮರೆಯಲ್ಲಿ ಅವಸರವಾಗಿಟ್ಟು ಹೊರಬರುವಳು. ಅತ್ತಿತ್ತ ನೋಡಿ ಓಡಬೇಕೆಂದು ಸಿದ್ಧಳಾಗುವಷ್ಟರಲ್ಲಿ ಪೋಲೀಸ್ ಸೀಟಿ ಕೇಳಿಸುವುದು. ಹೋದವರಿಬ್ಬರೂ ಬರುತ್ತಿರುವುದನ್ನು ಗಮನಿಸಿ ಧೈರ್ಯ ತಂದುಕೊಳ್ಳುವಳು. ಇಬ್ಬರೂ ಪೋಲೀಸರು ತಂತಮ್ಮ ದಿಕ್ಕಿನಿಂದ ಪ್ರತ್ಯಕ್ಷರಾಗುವರು. ಟ್ವೆಂಟಿ ಬಳಿ ಸಾರುವನು. ಹದಿನೆಂಟು ದೂರ ನಿಂತು ಗಮನಿಸುತ್ತಿರುವನು.)

**ಟ್ವೆಂಟಿ :**- ಯಾರಬೇ ನೀನು?

**ಹೆಂಗಸು :**- ಕಾಣಸಾಣಿಲ್ಲಾ? ಮನಶೇರ.

**ಟ್ವೆಂಟಿ :**- ತಿಳದ ಬಂತು. ತಾಯೀ ಇಲ್ಲಿಗ್ಯಾಕ ಬಂದಿ?

**ಹೆಂಗಸು :**- ಮುಂದೆಲ್ಲಾ ಯಾಕ ಬರತಾರ?

**ಟ್ವೆಂಟಿ :**- ಎಲೀ ಇದರ! ತಾಯೀ, ಹಸೀಖಾರ ತಿಂದ ಬಂದೀಯಂತ ನನಗಾದರು ತಿಳೀತು; ಮ್ಯಾಲ ನಮ್ಮ ಸಾಹೇಬರಿಗಾದರು ತಿಳೀತು. ಇಲ್ಲೇನ ತಿನ್ನಾಕ ಬಂದಿ?

**ಹೆಂಗಸು :**- ಗಾಳೀಹವಾ ತಿನ್ನಾಕ.

**ಟ್ವೆಂಟಿ :**- ಭಲೆ ಭಲೆ! ತಿಂದೇನ?

**ಹೆಂಗಸು :**- ಅದನೇನ ಢರಿಕಿ ಹೊಡೆದ ತೋರಸಬೇಕ?

**ಟ್ವೆಂಟಿ :**- ಬ್ಯಾಡ ಎವ್ವಾ! ನೀ ಗಾಳೀಹವಾ ತಿಂಧಾಂಗಾಯ್ತು. ತಿಂದ ಹವಾನೆತ್ತಿಗಿ ಹತ್ತಿಧಾಂಗಾಯ್ತು. ಇನ್ನ ನಡೀತೀರಿ?

**ಹೆಂಗಸು :**- ಗೇಟ ಬಾಗಲ ಎಲ್ಲಿ ಐತಿ?

**ಟ್ವೆಂಟಿ :**- ಬರೋವಾಗ ಹೆಂಗ ಗ್ವಾಡೀ ಜಿಗದ ಬಂದ್ರಿ?

**ಹೆಂಗಸು :**- ಇಲ್ಲಾ; ಪಕ್ಕ ಬಿಚ್ಚಿ ಹಾರಿಕೋತ ಬಂದೆ!

**ಟ್ವೆಂಟಿ :**- ಇದ್ದಿರಬೇಕು. ಗೇಟ ಬಾಗಲಾ ತೋರಸಲಿ?

**ಹದಿನೆಂಟು :**- ಏ ಟ್ವೆಂಟೀ, ನಾ ಸೀನಿಯರ್ ಇರೋವಾಗ ನನ್ನ ಕೇಳದs ಗೇಟಬಾಗಲಾ ತೋರಸ್ತೀಯೋನೊ ರಾಸ್ಕಲ್?

**ಟ್ವೆಂಟಿ :**- ಎಸ್ಸರ್. ಸರ್. ಈಕಿಗಿ ಗೇಟ ಬಾಗಲಾ ತೋರಸಲಿ!

**ಹದಿನೆಂಟು :**- ಅಲ್‌ರೈಟ್. ತೋರಿಸು.

**ಟ್ವೆಂಟಿ :**- ಹಿಂಗ ಹೋಗವಾ.

**ಹದಿನೆಂಟು :**- ಏ ಟ್ವೆಂಟೀ.

**ಟ್ವೆಂಟಿ :**- ಎಸ್ಸರ್ ಹಾಂಗೆಲ್ಲಾ ಕುಡಗೋಲ ನುಂಗಬಾರದವಾ!

**ಹೆಂಗಸು :**- (ತಿರುಗಿ ನಿಂತು)

ಕುಡಗೋಲ? ಯಾಕಲಾ ಭಾಡಕೌ? ಮಾನವಂತ ಹೆಣ ಮಗಳಿಗಿ ಹಿಂಗೆಲ್ಲಾ ಮಾತಾಡ್ತಿ? ಏಟುದ್ದ ಐತ್ಯೋ ನಿನ್ನ ಕುಡಗೋಲು? ನಾಕಾಣೆ ಖಾಕೀ ಚಣ್ಣ ಹಾಕೀಯಂತ ನನ್ನ ಮುಂದ ಧಿಮಾಕ ತೋರಸ್ತೀಯೇನೋ?

(ಜಗಳಾಡಲು ಸಿದ್ಧಳಾಗಿ ಸರ್ರನೆ ಸೆರಗು ಬಿಗಿಯುವಳು. ಟ್ವೆಂಟಿ ಹೆದರಿ 'ಸರ್ ಸರ್' ಎಂದು ಹದಿನೆಂಟನ ಬಳಿಗೆ ಓಡುವನು. ಹೆಂಗಸು ಸುಮ್ಮನಾಗಿ ಸೆರಗು ಸರಿಪಡಿಸಿಕೊಳ್ಳುತ್ತ ಹೋಗುವಳು.

**ಟ್ವೆಂಟಿ :**- ಸರ್, ಇದು ಕುಡಗೋಲ ನುಂಗಸೋ ಜಾತಿ!

(ಹದಿನೆಂಟು ನಗುತ್ತ ಒಂದು ಸಲ ಸೀಟಿ ಊದಿ ಟ್ವೆಂಟಿಗೆ ಸನ್ನೆ ಮಾಡುವನು. ಇಬ್ಬರೂ ಮತ್ತೆ ತಮ್ಮ ದಿಕ್ಕಿನಲ್ಲಿ ಮಾಯವಾಗುವರು, ಕೆಲಹೊತ್ತು ನೀರವ. ಶೋಭಾ ಸೂಟಕೇಸಿನೊಂದಿಗೆ ಬರುವಳು. ತುಂಬ ಗಾಬರಿ ಅವಸರದಲ್ಲಿದ್ದಾಳೆ. ಸೂಟಕೇಸನ್ನು ಮೆಳೆಯ ಮರೆಗೆ ಬುಟ್ಟಿಯ ಹತ್ತಿರ ಇಟ್ಟು ರೆಸ್ಟ್‌ಲೆಸ್ ಆಗಿ ವಾಚು ನೋಡುತ್ತ ಯಾರಾದರೂ ಕಂಡಾರೆಂದು ಮೆಳೆಯ ಮರೆಯಲ್ಲಿ ಹುದುಗುವಳು. ಸ್ವಲ್ಪ ಹೊತ್ತಾದ ಮೇಲೆ ರವಿ ಸೂಟಕೇಸಿನೊಂದಿಗೆ ಓಡಿ ಬರುವನು. ಸ್ಥಳ ಗುರುತಿಸಿ ಸೂಟಕೇಸಿಟ್ಟು ಬೆವರೊರಿಸಿಕೊಳ್ಳುವನು. ಶೋಭಾ 'ರವೀ' ಎಂದು ಕರೆಯುತ್ತಾ ಹೊರಬರುವಳು. ಇಬ್ಬರೂ ವಾಚು ನೋಡಿಕೊಳ್ಳುವರು.)

**ರವಿ :**- ಬಂದ ಭಾಳ ಹೊತ್ತಾಯ್ತೇನ?

**ಶೋಭಾ :**- ಈಗಷ್ಟ ಬಂದೆ.

**ರವಿ :**- ಯಾರಾದರೂ ನೋಡಿದರೇನ?

**ಶೋಭಾ :**- ಯಾರೂ ಇದ್ಧಾಂಗಿರಲಿಲ್ಲ. ನನ್ನ ಲಪತ್ರ ಮನ್ಯಾಗ ಬಿಟ್ಟಿಲ್ಲ ಹೌದಲ್ಲ?

**ರವಿ :**- ಏನ ಮಾಡಿದ್ನೋ! ಇನ್ನಮ್ಯಾಲ ಸಿಕ್ಕರ ಸಿಗಲಿ ಬಿಡು. ಸ್ಟೇಶನ್ನಿಗೆ ಹೊರಡೋಣೇನು?

**ಶೋಭಾ :-** ಟ್ರೇನ್ ಬರೋದಿನ್ನೂ ಒಂದು ತಾಸು. ಅಷ್ಟರಾಗ ನಮ್ಮಪ್ಪ ಸ್ಟೇಷನ್ನಿಗೇ ಬಂದರ?

**ರವಿ :-** ಬೆನ್ನ ಹತ್ತಿರಬೇಕಂದಿ?

**ಶೋಭಾ :-** ನಮ್ಮವ್ವಗಾಗs ಸಂಶೆ ಬಂದಿತ್ತು. ಆಕೀ ಕಣ್ಣ ತಪ್ಪಿಸಿ ಬರಬೇಕಾದರs ಸಾಕಬೇಕಾತು.

**ರವಿ :-** ಟಿಕೆಟ್ ತಗಸೋದs ಬ್ಯಾಡ. ಆಚೇ ಕಡಿಂದ ಟ್ರೇನ್ ಬಂದ ಹುರುಪಲೆ ಓಡಿಹೋಗಿ ಹತ್ತಿ ಬಿಡೋಣು.

**ಶೋಭಾ :-** ಅದೂ ಖರೆ. ಸ್ಟೇಶನ್ನದಾಗ ಮತ್ತ ಯಾರು ಗುರುತಿನವರಿರತಾರೊ! ನಿಮ್ಮ ಮನ್ಯಾಗೇನ ಹೇಳಿಬಂದಿ?

**ರವಿ :-** ಏನೂ ಹೇಳೇ ಇಲ್ಲ. ಮೆತ್ತಗ ರೊಕ್ಕಾ ತಗೊಂಡ ದಾಟಿ ಬಂದೆ. ನಮ್ಮವ್ವನ ಕಣ್ಣಾಗ ಸಂಶೇ ಇದ್ಧಾಂಗಿತ್ತು. ಏನ ಮಾಡತಾಳೊ!

**ಶೋಭಾ :-** ಯಾವೂರಿಗಿಳಿಯೋಣು?

**ರವಿ :-** ಊರಂತೂ ಬಿಡೋಣ. ಮುಂದಿಂದ ಮುಂದ. ಆದರೂ ನನಗ ಅನ್ನಸ್ತೈತಿ, ಪರೀಕ್ಷೆ ಆಗೋತನಕ ಕಾದರ ಹೆಂಗ

**ಶೋಭಾ :-** ಕಾದರೂ ಬಿಟ್ಟರೂ ಎಲ್ಲಾ ಒಂದs. ಇದಕೆಲ್ಲಾ, ಅವರ ಎದಿ ಹೆಂಗ ಕರಗೀತ ಹೇಳು.'

**ರವಿ :-** ಮಾಡೋ ಖಟಪಟಿ ಮಾಡೋಣು.

**ಶೋಭಾ :-** ಅಧೆಂಗಾದೀತು? ಖಟಪಟಿ ಮಾಡಿದಷಟೂ ನಮ್ಮವ್ವಗ ನನ್ನ ಮ್ಯಾಲ ಸಂಶೇ ಬರಾಕ ಸುರುವಾತು. ಎಲ್ಲಿ ಬಸರಾಗ್ಯಾಳೇನೋ! ಅದಕ್ಕs ಇಷ್ಟ ಅವಸರ ಮಾಡ್ತಾಳಂತ ಹೇಳೇಬಿಟ್ಲು ಅದೂ ಕೂಡಿದ ಮಂದ್ಯಾಗ. ಈಗ ನಾ ಬರದ ಪತ್ರ ಸಿಕ್ಕಿದ್ದರಂತೂ ಕತೀ ಮುಗೀತು. ಜಾತಿ ಒಂದಾಗಿದ್ದರ ಇಂದಿಲ್ಲ ನಾಳಿ ಬಂದಾರ ಹಾದಿಗಿಂತ ಹಲಬಿಕೊಂಡಿರಬೌದಿತ್ತು.

**ರವಿ :-** ಮದಿವ್ಯಾದ ಮ್ಯಾಲ ಹಾದಿಗಿ ಬಂದಾರೊ ಏನೋ

**ಶೋಭಾ :-** ಮದಿವ್ಯಾದ ಮ್ಯಾಲಲ್ಲ, ಮೊಮ್ಮಗನ್ನ ಕಂಡಮ್ಯಾಲ!

**ರವಿ :-** ಅಡ್ಡೀಯಲ್ಲ. ಇಂಥಾ ಹೊತ್ತಿನಾಗೂ ಚಾಷ್ಟೀ ಮಾಡತೀಯಲ್ಲ! ಎಲಾ ಹೆಣ್ಣ!

**ಶೋಭಾ :-** ನಾ ಒಂದಿಷ್ಟು ತಂದೀನಿ : ನೀ ಅಷ್ಟ ದುಡ್ಡ ತಂದೀಯೇನು?

**ರವಿ :-** ಅದರ ಕಾಳಜಿ ಬಿಡು. ಆದರೂ ನಮ್ಮವ್ವಾ ಅಪ್ಪಾ, ಮುಂದ ನಿಂತ ಮದವಿ ಮಾಡಿದ್ದರ ಅದರ ಹೌಸೀನ ಬ್ಯಾರಿ!

**ಶೋಭಾ :-** ನಶೀಬs ಖೊಟ್ಟಿದ್ದರ ಏನ ಮಾಡೋದು?

**ರವಿ :-** ಯಾರೋ ಆ ಕಡೆ ಅಡ್ಡಾಡತಿದ್ಧಾಂಗ ಕಾಣತೈತಲ್ಲ? ಪೋಲೀಸರೇನೋ? ಹೌಂದು. ಶೋಭಾ ಲಗು ಅಡಗಿಕೊ.

**ಶೋಭಾ :-** ಅಡಗಿದರೆಲ್ಲಿ ಬಿಡತಾರ? ಸೂಟಕೇಸ ಮುಚ್ಚಿಟ್ಟ ನಾವೂ ಅಡ್ಡಾಡಕ ಬಂಧಾಂಗಿದ್ದರಾಯ್ತು. ಅಕಾ ನಿನ್ನ ಸೂಟಕೇಸ ಅಲ್ಲಿಟ್ಟಬಿಡು. (ರವಿ ತನ್ನ ಸೂಟಕೇಸನ್ನು ಅವಳ ಸೂಟಕೇಸಿನ ಹತ್ತಿರ ಇಡುವನು . ಇಬ್ಬರೂ ಸಹಜವಾಗಿ ಅಡ್ಡಾಡ ಬಂದವರಂತೆ ಅಭಿನಯಿಸತೊಡಗುವರು. ಹದಿನೆಂರು, ಟ್ವೆಂಟಿ ಇಬ್ಬರೂ ಸಂದೇಹದಿಂದ ಬಂದು ಗಮನಿಸುತ್ತ ನಿಲ್ಲುವರು.)

**ರವಿ :-** ರೂಮಿನೊಳಗ ಏನ ಶಕೆ ಅಂತೀನಿ! ಮಿಸ್ ರತ್ನಾ, ಪರೀಕ್ಷೆ ತಯಾರಿ ಹೆಂಗ ನಡಿಸೀರಿ?

**ಶೋಭಾ :-** ನನಗೂ ಭಾಳ ಶೆಕೆ ಆಗಿ ಅಡ್ಡಾಡಿಕೊಂಡ ಬರೋಣಂತ ಬಂದೇರಿ. ಓದಿ ಓದಿ ತಲೀ ಚಿಟ್ಟ ಹಿಡೀತು. ಅಂಧಾಂಗ ನಿಮ್ಮ ಪೋರ್ಯನ್ ಮುಗದೈತಿ ಹೌಂದಲ್ಲರಿ?

**ರವಿ :-** ಮುಗದದ್ದೇನೊ ಖರೆ. ಆದರ ಒಂದ ಸಲಾನೂ ನಾ ಪೂರ್ತಿ ಓದಿಲ್ಲರಿ. ಈ ಸಲ ಪರೀಕ್ಷೇಕ್ಕೂರೋದs ಬ್ಯಾಡೇನೋ ಅಂತಿದೀನಿ.

**ಶೋಭಾ :-** ಅದ್ಯಾಕರೀ ಹಾಂಗಂತೀರಿ? ಹರದಷ್ಟ ಮೊಳ ಕಿರದಾಯ್ತು. ಕೂತ ಎಷ್ಟ ಸಬ್ಜೆಕ್ಟ ದಾಟಿದರ ಅಷ್ಟ ಅನುಕೂಲ. ನಾನಂತೂ ಕೂರತೀನ್ರಪಾ. ಒಂದು ಸಲಕ್ಕ ಪಾಸಾಗೋದಂತೂ ಆಗೋಣಿಲ್ಲ. ನೀವೂ ನನ್ಹಾಂಗs ಅಂದರ ನೀವು ಮನಸಿಗಿ ಹಚ್ಚಿಕೊಳ್ಳೋಣಿಲ್ಲ ಹೌಂದಲ್ಲರಿ?

**ಟ್ವೆಂಟಿ :-** (ಹದಿನೆಂಟನ ಕಿವಿಯಲ್ಲಿ)

ಸರ್, ಈ ಕೋಳಿ ತತ್ತಿಗಿ ಬಂದಾಳಂತ ಅನ್ನಿಸಾಣಿಲ್ಲರಿ?

(ಇವರು ಹೀಗೆ ಮಾತಾಡುತ್ತಿರುವುದನ್ನು ಮಾತು ನಿಲ್ಲಿಸಿ ರವಿ ಶೋಭಾ ಇಬ್ಬರೂ ಗಮನಿಸಿ ಸುಮ್ಮನಾಗುವರು, ಹದಿನೆಂಟು ಸಮಯಸ್ಫೂರ್ತಿಯ ಜೋರಿನಿಂದ)

**ಹದಿನೆಂಟು :-** ಛೇ ಛೇ ಆ ತಳಿ ಬ್ಯಾರೇನಪಾ ಅದು. ಪಾಪ ಇವರು ಕಾಲೇಜ ಹುಡುಗರು, ಯಾರ್ರಿ  ಅವರು?

**ರವಿ :-** ಪೋಲೀಸ್ ಸಾಹೇಬರೇನು? ನಾನು ರಾಜೀವ ಅಂತ. ಇಲ್ಲೆ ಕರ್ನಾಟಕ ಕಾಲೇಜಿನಾಗ ಬಿ.ಎ. ಕಲೀತೀನಿ. ಇವರು ಮಿಸ್ ರತ್ನಾ ಅಂತ.

**ಟ್ವೆಂಟಿ :-** ಹಾ ನನಗೀಗ ಬರೋಬರಿ ಹೊಳೀತ ನೋಡ್ರಿ.
(ಹದಿನೆಂಟನ ಕಿವಿಯಲ್ಲಿ)
ಸರ್ ಸರ್. ನಾ ಹೇಳಿದ್ದ ಖರೆ ನೋಡ್ರಿ.

**ಹದಿನೆಂಟು :-** ಯಾಕ?

**ಟ್ವೆಂಟಿ :-** ಮೊನ್ನಿ ಕರ್ನಾಟಕ ಕಾಲೇಜ ಪಾಯಖಾನೇಕ ಹೋಗಿದ್ದೆ. ಅಲ್ಲಿ ಗ್ವಾಡೀ ಮ್ಯಾಲ ಈ ಹೆಸರ ಬರೆದಿತ್ತರೀ.

**ಹದಿನೆಂಟು :-** ಹಾಕಿದಿ ಹೌಂದಲ್ಲ. ಹರದ ಬೂಟಿನಂಥಾ ನಿನ್ನ ಮೂಗ? (ರವಿಗೆ)

ಅದ ಖರೆ. ಈ ವ್ಯಾಳ್ಯಾದಾಗ ಪಾರ್ಕಿಗಿ ಬಂದಿರಲ್ಲಾ…….

**ರವಿ :**- ಅದು ರೂಮಿನೊಳಗ…

**ಟ್ವೆಂಟಿ :**- ಶಕೆ ಭಾಳಂತ ಅಡ್ಡಾಡಾಕ ಬಂದಿರೇನೊ……

**ರವಿ :**- ಹೌಂದ್ಹೌಂದು. ಐ ಮೀನ್….. ನೋಡ್ರೆಲ್ಲಾ ಓದಿ ಓದಿ……

**ಟ್ವೆಂಟಿ :**- ತಲೀ ಚಿಟ್ಟ ಹಿಡಿದಿರಬೇಕು……

**ರವಿ :**- ಅಫ್‌ಕೋರ್ಸ್… ಎಸ್ಸೆಸ್ಸ… ಸಾಹೇಬರು ಸಿಗರೇಟು ಸೇದ್ತಿರೇನು

**ಟ್ವೆಂಟಿ :**- ಕೊಡ್ರೆಲ್ಲ.

(ಓಡಿಹೋಗಿ ರವಿ ಕೊಟ್ಟ ಸಿಗರೇಟು. ಕಡ್ಡಿಪೆಟ್ಟಿಗೆ ಇಸಿದು ತಂದು ಹದಿನೆಂಟನ ಎದುರಿಗೆ ಹಿಡಿಯುವನು. ಅವನು ತನ್ನ ಗಣೇಶಬೀಡಿ ಹೊತ್ತಿಸುವನು. ಟ್ವೆಂಟಿ ಸಿಗರೇಟು ಹೊತ್ತಿಸುವನು. ಇಬ್ಬರೂ ಅವರಿಗೆ ಇನ್ನಷ್ಟು ಸಮೀಪ ಹೋಗುವರು.)

**ಹದಿನೆಂಟು :**- ಸಾಹೇಬರು ಯಾವೂರವರು?

**ರವಿ :**- ಸವದತ್ತಿ.

**ಹದಿನೆಂಟು :**- ಹಾಸ್ಟಲಾಗಿದೀರೇನೊ.

**ರವಿ :**- ಹೌಂದು ಇಲ್ಲೇ ಸಮೀಪ ಐತಿ.

**ಟ್ವೆಂಟಿ :**- ಈ ಹೆಣಮಗಳೂ ನೀವೂ ಕ್ಲಾಸಮೆಂಟ ಏನ್ರಿ?

ಶೋಆ :- ಹೌಂದು.

**ಟ್ವೆಂಟಿ :**- (ಶೋಭಾಗೆ)
ನೀವ್ಯಾರ ಪೈಕೀರಿ?

**ಶೋಭಾ :**- ನಾನು…….ಸಪ್ತಾಪುರ - ರೇಡಿಯೋ ಸ್ಟೇಶನ್ ದಾಟಿದ ಮ್ಯಾಲ ಸಿಗತೈತಲ್ಲ - ಅಲ್ಲೆ ಸಕ್ಕರಿ ಶಂಕರಪ್ಪನವರು ಅಂತ. ಅವರ ಮಗಳು……ಮಿಸ್ ರತ್ನಾ ಅಂತ. ಬಿ.ಎ. ಕ್ಲಾಸಿನಾಗಿದೀನಿ. ಪರೀಕ್ಷೆ ಬಂತಲ್ಲ…….

**ಟ್ವೆಂಟಿ :**- ಸಕ್ಕರಿ ಶಂಕರಪ್ಪ? ಗೊತ್ತs ಇಲ್ಲ ಬಿಡರಿ.
(ರವಿಗೆ)
ಸಾಹೇಬರs. ಸಿಗರೇಟ ಒಳೆ ಒಳೆ ಖಡಕ ಐತ್ರೆ. ಹೆಂಗೊಂದ ಪಾಕೀಟರಿ ಇದು?

**ರವಿ :-** ಐದ ರೂಪಾಯಿ.

**ಟ್ವೆಂಟಿ :-** ಅಲಲಲ! ಇಡೀ ಹಿಂದೂಸ್ತಾನದಾಗ ಇಂಥಾ ಸಿಗರೇಟ ಯಾರೂ ಸೇದಾಕ ಶಕ್ಯ ಇಲ್ಲ ಬಿಡರಿ. ಗಣೇಶ ಬೀಡಿ ಇದರ ಮುಂದ ಏನೇನೂ ಅಲ್ಲ.
(ಹದಿನೆಂಟು ಟ್ವೆಂಟಿಯನ್ನು ನೋಡುವನು)
ಅಲ್ಲಲ್ಲ ಗಣೇಶ ಬೀಡಿಹಾಂಗ ಇದಲ್ಲ ತಗೀರಿ.

**ಹದಿನೆಂಟು :-** ಏ ಟ್ವೆಂಟೀ ಬಾಯ್ಮುಚ್ಚೊ.
(ರವಿಗೆ)
ಅಲ್ರೆಪಾ ಮಿಸ್ಟರ್ ನಿಮ್ಮ ಹೆಸರೇನಂದಿರಿ?

**ರವಿ :-** ಶಿವರಾಮಂತ.

**ಹದಿನೆಂಟು :-** ಮಿಸ್ಟರ್ ಶಿವರಾಂ; ಏನೋ ಬಂದೀರಿ, ನಿಂತೀರಿ... ಪಾಪ ನೀವೇನೂ ಅಂಥಾವರಲ್ಲ; ಅದು ಬ್ಯಾರಿ. ಆದರ ಇಷ್ಟ ಹೊತ್ತಿನಾಗ ಪಾರ್ಕಿನಾಗ ಅಡ್ಡಾಡಕ ಬಿಡಾಣಿಲ್ಲಂತ ಗೊತ್ತಿಲ್ರೆ ನಿಮಗ?

**ರವಿ :-** ಆಫ್ ಕೋರ್ಸ್ ಹ...ಹ...ನಾವೇನೂ ಅಂಥ ಹಲ್ಕಟ್ಟ ದಂಧೆ ಮಾಡಾಕ ಬಂದಿಲ್ವಲ್ಲ!

**ಟ್ವೆಂಟಿ :-** ತಾವು ಹಲ್ಕಟ್ಟ ದಂಧೆ ಮಾಡಾವರು ಅಂತ ಯಾರು ಹೇಳಿಕೊಳ್ಳೋದಿಲ್ಲರಿ. ಹೋಗಲಿ ದಂಧೆ ಮಾಡಾವರಲ್ಲ ಅಂತೀರಿ. ಇಂಥಾ ಅಪರಾತ್ಯಾಗ ಬಂದೀರಿ. ಮಿಸ್ಟರ, ಮಿಸ್ಸಾ, ಕ್ಲಾಸಮೆಂಟಾ... ಹಗಲಿ ಮಂದಿ ಇದ್ದಾಗ ನೀವಃ ಬಂದಿದ್ದರ ನಾ ಹಿಂಗನ್ನಾಕ ಬರತ್ತಿತ್ತ? ನೀವು ತಿಳಿದವರು, ಕಲಿತವರು , ನನ್ಹಾಂಗ ಧಡ್ಡರಃ? ನೀವಃ ಹೇಳ್ರಲ್ಲ - ಇಲ್ಲೊಂದ ಎಳೀ ಕುದರಿ ಮೇಯತಿತ್ತಂತ ತಿಳೀರಿ, ಅದರ ಬೆನ್ನ ಮ್ಯಾಗ ಅರೀದ ಹುಡಗೊಬ್ಬ ಕೈಯಾಡಸ್ತಿದ್ದರ......

**ಶೋಭಾ :-** ಏ ಮಿಸ್ಟರ್, ನಾಲಿಗಿ ಬಿಗಿಹಿಡಿದ ಮಾತಾಡರಿ . ಅಡ್ಡಾಡಿಕೊಂಡ ಹೋಗಬೇಕಂತ ಬಂದಿವಿ, ನಿಂತಿವಿ. ಅದಕ್ಕ ಇಲ್ಲದ್ದೆಲ್ಲಾ ಹೊಂದಿಸಿದರ ಸಿಟ್ಟ ಬರತೈತಿ ನಮಗೂ.' ನಿಮಗ್ಯಾರೂ ಅಕ್ಕ ತಂಗೇರಿಲ್ಲೇನ್ರಿ?

**ಟ್ವೆಂಟಿ :-** ನನ್ನ ಅಕ್ಕತಂಗೇರ ಇಂಥಾ ಅಪವ್ಯಾಳ್ಯಾದಾಗ ಹೀಂಗ ಒಬ್ಬ ಹುಡುಗನ ಜೋಡಿ ಬಂದಿದ್ದರ - ನೋಡವಾ ಹೆಣಮಗಳ - ಇಷ್ಟೊತ್ತ ಹಿಂತಾ ಮಾತ ಕೇಳಾಕ ಆಕಿ ಜೀವಂತ ಇರತಿರಲಿಲ್ಲ.

**ಶೋಭಾ :** - ಅಂದರೇನು? ನಾ ಇಲ್ಲಿ ಇವರ ಜೋಡಿ ಹಲ್ಕಟ್ಟಗಿರಿ ಮಾಡಾಕ ಬಂದೀನಿ ಅಂತೇನು?

**ರವಿ :-** ಶೋಭಾ ಸುಮ್ಮನಿರತೀಯೋ ಇಲ್ಲೊ?

**ಶೋಭಾ :-** ಮತ್ತ ಯಾಕಿವರು ಹಿಂಗೆಲ್ಲಾ ಮಾತಾಡಬೇಕರಿ?

**ರವಿ :-** (ಟ್ವೆಂಟಿಯನ್ನು ಸಮಾಧಾನ ಮಾಡುತ್ತ) ಮಿಸ್ಟರ್ ನೋಡ್ರಿ...

**ಟ್ವೆಂಟಿ :-** ನಿಮ್ಮನ್ನೇನ ನೋಡತಾರರೀ?

**ರವಿ :**- (ಹದಿನೆಂಟನಿಗೆ)
ಸಾಹೇಬರ ಕೇಳ್ರಿಲ್ಲೆ... ನನ್ನ ಮಾತು.
(ಹದಿನೆಂಟು ಸುಮ್ಮನೆ ಬೀಡಿ ಸೇದುತ್ತ ನಿಂತಿದ್ದಾನೆ)

(2)

**ಟ್ವೆಂಟಿ :**- ಮತ್ತೇನ ಕೇಳತಾರರಿ? ಬಾಯಿಗಿ ಬಂದಿದ್ದ ಹಿಂದ ತಿರಗಸಾಕ ತಯಾರಿಲ್ಲ ಈ ಹೆಣಮಗಳು. ನಾ ಏನ್ರಿ ಅನ್ನಬಾರದ್ದ ಅಂದೆ? ಹೇಳ್ರಿ; ರಾತ್ರಿ ಹತ್ತ ಹೊಡೀತು. ಪಾರ್ಕಿನಾಗ ಒಂದ ಹುಳಾ ಇಲ್ಲ, ನಮ್ಮನ್ನ ಬಿಟ್ಟರ - ಕಾಲೇಜ ಹುಡುಗಾ ಹುಡುಗಿ ಇಲ್ಲಿ ನಿಂತೀರಿ. ಯಾಕ ನಿಂತೀರಿ ಅಂದರ ಕೇಳಬಾರದ ಮಾತs ಇದು? ನಾಳೆ ಇಲ್ಲಿ ಏನಾದರೂ ಹೆಚ್ಚು ಕಮ್ಮಿ ಆದರ ಯಾರ ಜವಾಬ್ದಾರಿ? ಹಿಂತಾ ಬೇಜವಾಬ್ದಾರೀ ಕೆಲಸ ಆಗಬಾರದಂತs ನಮ್ಮನಿಲ್ಲಿ ಇಟ್ಟಾರರೀ.

**ಶೋಭಾ :**- ಹೌಂದ್ಹೌಂದು - ಈ ಜಗತ್ತೆಲ್ಲಾ ಬರೋಬರಿ ನೋಡಿಕೊಳ್ಳಪಾ ಅಂತ ದೇವರs ನಿಮ್ಮನ್ನ ನೇಮಿಸ್ಯಾನ.

**ಟ್ವೆಂಟಿ :**- ಸ್ವಾರೀ ಮೇಡಂ ದೇವರಲ್ಲ, ಸರ್ಕಾರ ನೇಮಿಸ್ಯಾರ.

**ರವಿ :**- ಶೋಭಾ, ಮಾತಿಗೆ ಮಾತ ಪೋಣಿಸಿ ಎಲ್ಲಿಗಿ ಮುಟ್ಟಬೇಕಂತಿ? (ಹದಿನೆಂಟರ ಹತ್ತಿರ ಬಂದು)
ಸಾಹೇಬರ ನೀವಾದರೂ ತಿಳಿಸಿ ಹೇಳ್ರಿ; ಉಪ್ಪಲ್ಲ ಹುಳೀ ಅಲ್ಲ ಬರೀ ಬಾಯಿ ಮಾಡಿದರ ಎದಕ್ಕ ಬಂತು? ನೀವು ಕೇಳಿದ್ದ ತಪ್ಪಲ್ಲ. ಕೇಳಿದ್ದಕ್ಕ ಜವಾಬ ಕೊಡಾಕ ನಾ ಇದ್ದೀನಿಲ್ಲೆ. ಮನೆತನಸ್ಥ ಹೆಣಮಗಳು, ಪೋಲೀಸರ ಮಾತ ಕೇಳಿ ಖಾರ ಆಗಿರಬೇಕು. ನೀವು ತಿಳಿದವರು, ಲೋಕಾ ಬಲ್ಲವರು. ನಿಮಗೂ ಗೊತ್ತೈತಿ; ನಾವು ಹಲಕಟ್ಟ ಮಂದಿ ಅಲ್ಲಂತ.

**ಹದಿನೆಂಟು :**- ಏ ಟ್ವೆಂಟೀ

**ಟ್ವೆಂಟಿ :**- ನಾನೂ ಅದನ್ನ ಹೇಳ್ತೇನ್ರಿ ಕುಡಗೋಲ ನುಂಗಬ್ಯಾಡ್ರಂತ.

**ಹದಿನೆಂಟು :**- ಅಲ್ಲರೀ ಮಿಸ್ಟರ್, ನಾವು ಹೌದಂದರ ಅಲ್ಲಂತೀರಿ. ಅಲ್ಲಂದರ ಹೌದಂತೀರಿ. ಎಲ್ಲಾರೂ ಹೀಂಗ ಇರಾತಾರಂತಲ್ಲ. ಅದರ ದರವೊಂದ ಜಾತಿ ಒಳಗೂ ಹಾದರಕ್ಕ ಹುಟ್ಟಿದವರು ಇದ್ದs ಇರತಾರ. ಅಂಥವರ್ಣ ಹಿಡೀಬೇಕಾದರ ನಾವಿಂಥಾ ಮಾತ ಕೇಳಬೇಕಾಗತೈತಿ. ಖರೆ ಅಂತೀರೋ, ಸುಳ್ಳಂತೀರೊ?

**ರವಿ :**- ನನ್ನ ಮಾತ ನಂಬರಿ. ನಾವೇನೂ ನಿಮ್ಮ ಕಣ್ಣಾಗ ಮಣ್ಣ ತೂರಿಲ್ಲಾ.....

**ಹದಿನೆಂಟು :-** ನೀವಿಬ್ಬರು ಗಂಡಾ ಹೇಂತೀ ಏನು?

**ರವಿ :-** ಅಲ್ಲ.

**ಹದಿನೆಂಟು :-** ಹಂಗಾದರ ನೀವs ಹೇಳ್ರೆಪಾ : ಮನೆತನಸ್ಥ ಹೆಣಮಗಳಿಗೆ ಪಾರ್ಕಿನಾಗ, ರಾತ್ರಿವ್ಯಾಳ್ಯಾ, ಕಾಲೇಜ ಹುಡುಗನ ಜೋಡಿ, ಯಾರೂ ಇಲ್ಲದಲ್ಲಿ ಏನ ಕೆಲಸ? ಶಕೆ ಆಯ್ತು ಅನ್ನಬ್ಯಾಡ್ರಿ; ಇಡೀ ಊರಾಗ ನಿಮ್ಮಿಬ್ಬರಿಗೇ ಶಕೆ ಆಗಬೇಕ? ಸಪ್ತಾಪುರದಾಗ ಶಕೆ ಇತ್ತು ಅನ್ನಬ್ಯಾಡ್ರಿ; ಅಲ್ಲಿ ಇಲ್ಲೀಗಿಂತ ತಂಪೈತಿ ಅಂತ ಕೇಳೀನಿ. ನಾವಿಬ್ಬರೂ ಅಣ್ಣ ಬಸವಣ್ಣ, ಅಕ್ಕ ಮಹಾದೇವಿ ಅನ್ನಬ್ಯಾಡ್ರಿ : ಆಗಲೇ ನಿಮ್ಮಹೆಸರ ಹೇಳಿಕೊಂಡೀರಿ. ನಿಮ್ಮ ಹೆಸರು ಒಮ್ಮಿ ರಾಜೀವಂತೀರಿ ಇನ್ನೊಮ್ಮಿ ಶಿವರಾಮಂತೀರಿ. ಆ ಹೆಣಮಗಳೊಮ್ಮಿ ಮಿಸ್ ರತ್ನಾ ಇನ್ನೊಮ್ಮಿ ಬರೇ ಶೋಭಾ - ಹಿಂಗ್ಯಾಕ ಗಳಿಗ್ಗೊಮ್ಮಿ ಹೆಸರ ಬದಲಾಗತಾವ ಹೇಳ್ರಿ -

**ಟ್ವೆಂಟಿ :-** ನಾ ಹೇಳ್ತೇನ್ರಿ : ಯಾಕಂದರ ಪಗಡೀ ಆಟದಾಗ ಯಾವ ಕಾಯಿ ಬಿಡತೀರಿ ಅದರ್ಹಾಂಗ ಮಸಡಿ ಮಾಡಿರಬೇಕಂತ ನೇಮ ಐತಿ!

**ರವಿ :-** ನೋಡ್ರಿ ನಾವು ಎರಡೆರಡ ಹೆಸರ ಹೇಳಿದಿವಿ. ತಪ್ಪಾಯ್ತು. ಅದರಿಂದs ನಿಮಗ ತಿಳಿದಿರಬೇಕು : ನಾವು ಅಂಥಾ ದಂಧೇದವರಲ್ಲಂತ.

**ಟ್ವೆಂಟಿ :-** ಇದೆಲ್ಲಿ ಲೆಕ್ಕಾಚಾರಪಾ! ಇವರು ಸುಳ್ಳ ಸುಳ್ಳ ಹೆಸರ ಹೇಳತಾರಂತ, ನಾವು ಇವರಿಗೆ ಹರಿಶ್ಚಂದ್ರಾs ಅನ್ನಬೇಕಂತ!

**ರವಿ :-** ಛೇ ಛೇ ಎಲ್ಲೀದೆಲ್ಲಿಗೆ ಒಯ್ತೀರಿ?

**ಟ್ವೆಂಟಿ :-** ನಿಮ್ಮ ಮಾತ ಬಿಟ್ಟ ಒಂದು ಹೆಜ್ಜೇನಾದರು ಹಿಂದ ಮುಂದ ಹೋಗೇನೇನು?

**ರವಿ :-** ನಿಮಗ ಹೆಂಗ ತಿಳಿಸಿ ಹೇಳ್ಲಿ?

**ಟ್ವೆಂಟಿ :-** ಅದನ್ನs ಕೇಳ್ತೀನರಿ :- ತಿಳಸಬಾರದಂಥಾ ಗದ್ದಲ ಏನೈತಿ? ಬಿಚ್ಚರಿ ಗಂಟು.

**ರವಿ :-** (ತಕ್ಷಣ ಯೋಚನೆಮಾಡಿ ಕಿಸೆಯಿಂದ ದುಡ್ಡು ತೆಗೆದು)
ಸಾಹೇಬರs ಈ ಹತ್ತ ರೂಪಾಯಿ ತಗೊಂಡ ನಮ್ಮ ಉಸಾಬರಿ ಬಿಟ್ಟುಬಿಡರಿ.
(ಕೊಡ ಹೋಗುವನು )

**ಹದಿನೆಂಟು :-** ಲಂಚಾ ಕೊಡಾಕ ಬಂದಿರೇನ್ರಿ?

**ಟ್ವೆಂಟಿ :-** ನಮ್ಮ ಸಾಹೇಬರ ಕಡೆ ಬೆರಳಮಾಡಿ ತೋರಸೋ ಮಗ ಇಡೀ ಜಿಲ್ಲಾದಾಗ ಇನ್ನs ಹುಟ್ಟಿಲ್ಲ. ಅವರಗಿ ಲಂಚಾ ಕೊಡಾಕ ಬಂದಿರೇನ್ರಿ?

**ರವಿ :-** ಲಂಚ ಅಲ್ಲರಿ ಇದು.

**ಟ್ವೆಂಟಿ :-** ಅದರಪ್ಪ !

**ಹದಿನೆಂಟು :-** ಅಲ್ಲರೀ. ಹಲ್ಕಟ್ಟ ದಂಧೇವರಲ್ಲಾ ಅಂತೀರಿ. ಆ ಮಾತ ನಮ್ಮ ಕಿವಿ ಮುಟ್ಟೋದರೊಳಗಃ ಲಂಚಾ ಕೊಡಾಕ ಬಂದಿರಿ. ನೀವಃ ಸುದ್ದುಳ್ಳವರಾಗಿದ್ದರ ಲಂಚಾ ಯಾಕ ಕೊಡಬೇಕು? ನಾವೇನಾದರು ಕೇಳಿದಿವ? ಎಕ ಕಾಲಕ್ಕ ಎರಡೆರಡ ಆಟ ಆಡತೀರಲ್ಲರಿ?

**ರವಿ :-** ಆಯ್ತುರೆಪಾ ತಪ್ಪಾಯ್ತು.

**ಹದಿನೆಂಟು :-** ತಪ್ಪಾ ಒಪ್ಪಾ ಹೇಳಾಕ ನಮ್ಮದೆಷ್ಟರೀ ಕಿಮ್ಮತ್ತು?

**ಟ್ವೆಂಟಿ :-** ಹತ್ತು ರೂಪಾಯಿ.

**ರವಿ :-** ನಾವಿಲ್ಲಿ ಬಂದದ್ದಃ ತಪ್ಪು, ಯಾರಿಗ್ಗೊತ್ತ ಹಿಂಗಾದೀತಂತ.

**ಹದಿನೆಂಟು :-** ನಾವೇನ ಮಾಡಬಾರದ್ದ ಮಾಡಿದಿವಿರಿ?

**ರವಿ :-** ನಿಮಗಲ್ಲರಿ ನಮ್ಮ ನಶೀಬ ಬೈಕೋತೀವಿ. ಇಲ್ಲಿ ಬರಬೇಕಂದರೇನು? ನಿಮ್ಮ ಕೈಗಿ ಸಿಗಬೇಕಂದರೇನು?

**ಟ್ವೆಂಟಿ :-** ನಮ್ಮ ಕೈಯಾಗ ಸಿಕ್ಕು ನಿಮಗೇನ್ರಿ ಆಯ್ತು? ಏನೋ ಕರದಿವಿ; ಕುಡಗೋಲ ನುಂಗಬ್ಯಾಡ್ರೆಪಾ ಅಂತ ಬುದ್ದಿ ಹೇಳಿದಿವಿ. ತಪ್ಪ?

**ರವಿ :-** ಕುಂಟಿಗಿ ಕೊಡ್ಡಾ ಹಚ್ಚಿಧಾಂಗ ಮಾತಿಗಿ ಮಾತ ಹೇಳತೀರಿ. ಇನ್ನೇನ ಮಾಡಲಿ? ಹೋಗಲಿ, ಏನ ಮಾಡಿದರ ನಮ್ಮನ್ನ ಸುಮ್ಮನ ಬಿಡತೀರಿ?

**ಟ್ವೆಂಟಿ :-** ಬಿಡಾಕ ನಿಮ್ಮನ್ನ ಇಡಕೊಂಡೀವೇನ್ರಿ? ಯಾಕ ಬಂದಿರಿ - ಅಂತ ಕೇಳಿದರ ಜವಾಬ ಕೊಡೋದ ಬಿಡತೀರಿ, ಹತ್ತ ರೂಪಾಯಿ ತಗೀತೀರಿ. ಸಂಶೆ ಯಾಕ ಬರಬಾರದ ಹೇಳ್ರಿ?

**ಶೋಭಾ :-** (ರವಿಗೆ ಸಿಡುಕಿನಿಂದ)
ತಗದ ಇನ್ನ ಹೆತ್ತ ಎಸೀಬಾರದ?

**ಹದಿನೆಂಟು :-** ಏ ಟ್ವೆಂಟಿ, ಇದು ಇಲ್ಲಿ ಎತ್ತಿಹಾಕೋ ತಿಪ್ಪಿ ಅಲ್ಲ.
(ರವಿಗೆ)
ಮಿಸ್ಟರ್, ನಡೀರಿ ಪೋಲೀಸ್ ಸ್ಟೇಶನ್ನಿಗೆ ಹೋಗೋಣು.

**ಟ್ವೆಂಟಿ :-** ನಮ್ಮ ಸಾಹೇಬರು ದಯಾಮಾಯಾ ಇದ್ದವರು; ಸುಮ್ಮನ ಇದ್ದದ್ದ ತೋಡಿಕೊಂಡ ಕೈ ಮುಗೀರಿ - ಬಿಡತಾರ.

**ರವಿ :-** ಸಾಹೇಬರ, ನೀವು ದೊಡ್ಡವರು. ದೊಡ್ಡ ಮನಸ್ಸುಮಾಡಿ ನಮ್ಮನ್ನ ಬಿಡಿರಿ. ಟ್ರೇನ್ ಬರೋ ಟೈಮಾಯ್ತು. ನಾವಿನ್ನೂ ಸ್ಟೇಶನ್ನಿಗೆ ಹೋಗಬೇಕು.

**ಹದಿನೆಂಟು :-** ಟ್ರೇನ ?

**ರವಿ :-** (ಕಿಸೆಯಿಂದ ೧೦೦ ರೂ ನೋಟು ತೆಗೆದು)
ಈ ಭಕ್ಷೀಸ ತಗೊಳ್ರಿ. ನಮ್ಮನ್ನು ಬಿಡಿರಿ.

**ಹದಿನೆಂಟು :-** (ಕಾಳಜಿಯಿಂದ)
ಏನೋ ಖರೆ ಬಿಡಸಬೇಕು, ಬಿಡಬೇಕು ಅಂತಿದ್ದೆ. ಈಗ ನೋಡಿದರ ನನ್ನ ತಾಖತ್ತ ಮೀರಿ ಬೆಳೀತಿದು. ನಡೀರಿ ಪೋಲೀಸ ಸ್ಟೇಶನ್ನಿಗೆ ಹೋಗೋಣು. ನಿಮ್ಮ ನಿಮ್ಮ ಹಿರ್‍ರೇನ್ನ ಕರಸ್ತೀವಿ; ಅವರಃ ಬಂದ ನಿಮ್ಮನ್ನ ಬಿಡಿಸಿಕೊಂಡ ಹೋಗತಾರ. ಏ ಟ್ವೆಂಟೀ, ಅಡ್ರೆಸ್ಸ ಕೇಳಿಕೊ, ಜೀಪ ತಗೊಂಡ ಹೋಗಿ ಕರಕೊಂಬಾ.

**ಶೋಭಾ :-** ಅಂದರ ನಮ್ಮ ಮಾತಿನಾಗ ನಿಮಗ ನಂಬಿಕಿಲ್ಲ.

**ಟ್ವೆಂಟಿ :-** ನಂಬಿಕಿ ಹುಟ್ಟೋವಂಥಾದ್ದ ಹೇಳವೊಲ್ಲಿರಿ.

**ರವಿ :-** ಏನ ಹೇಳಿದರ ನಂಬತೀರಿ?

**ಹದಿನೆಂಟು :-** ಖರೆ ಹೇಳಿದರ.

**ಟ್ವೆಂಟಿ :-** ಛೇ ಛೇ, ಅಲ್ಲರೆಪಾ, ಇಲ್ಲಿ ಬರ್‍ರಿಲ್ಲೆ.
(ದುಡ್ಡಿನ ಆಸೆಯಿಂದ ರವಿಯ ರೆಟ್ಟೆ ಹಿಡಿದು ಬೇರೆ ಕಡೆ ಕರೆದುಕೊಂಡು ಹೊರಡುವನು)

**ಹದಿನೆಂಟು :-** ಏ ಟ್ವೆಂಟೀ. ಯಾಕೊ ಆ ಕಡೆ ಕರಕೊಂಡ ಹೊಂಟಿ?

**ಟ್ವೆಂಟಿ :-** ಕುಡಗೋಲ ನುಂಗಬ್ಯಾಡಂತ ಹೇಳ್ತೀನ್ರಿ.

**ಹದಿನೆಂಟು :-** ನನ್ನ ಮುಂದ ಹೇಳಾಕಾಗಾಣಿಲ್ಲೇನು?

**ಟ್ವೆಂಟಿ :-** ಎಸ್ಸರ್. ಮಿಸ್ಟರ್, ನಿಮ್ಮ ಖರೇ ಹೆಸರು ರಾಮಚಂದ್ರ ಹೌಂದ?

**ರವಿ :-** ಅಲ್ಲ; ರವಿ.

**ಟ್ವೆಂಟಿ :-** ಸುಳ್ಳ ಹೇಳಬ್ಯಾಡ್ರಿ; ಇದು ಕೋರ್ಟಲ್ಲ.

**ರವಿ :-** ಖರೇ ಹೇಳಿದರ ಸುಳ್ಳಂತೀರಿ.

**ಟ್ವೆಂಟಿ :-** ಮೊದಲಃ ಖರೆ ಹೇಳಿದ್ದರ ಇದೆಲ್ಲಾ ಯಾಕಾಗತಿತ್ತು?

**ರವಿ :-** ತೋರಸ್ತೇನಿ ತಡೀರಿ.

(ಮೆಳೆಯ ಹತ್ತಿರ ಹೋಗುವನು. ಟ್ವೆಂಟಿ ಬೆನ್ನ ಹತ್ತುವನು. ರವಿ ತನ್ನ ಸೂಟಕೇಸು ತರುವನು. ಟ್ವೆಂಟಿ ಇನ್ನೊಂದು ಸೂಟಕೇಸು ಬುಟ್ಟಿ ತರುವನು) ಬೇಕಂದರ ಸೂಟಕೇಸ ಮ್ಯಾಲ ನನ್ನ ಹೆಸರೈತಿ ನೋಡ್ರಿ. ಅದೂ ನಂಬಿಕೆ ಬರದಿದ್ದರ ತೆರೆದ ನೋಡ್ರಿ.

**ಟ್ವೆಂಟಿ :-** ಈ ಬುಟ್ಯಾಗ ಅಗಾವ ಮಾಲಿ ತಗೊಂಡ ನಡದೀರೇನು?

**ಹದಿನೆಂಟು :-** ಈ ಖರೆ ಹೇಳ್ತೀರಿ ಅನ್ನೋಣು. ಸೂಟಕೇಸ ತಗೊಂಡ ಎಲ್ಲಿಗೆ ಹೊಂಟಿದ್ದಿರಿ? ಮನ್ಯಾಗ ಹೇಳದs ಕೇಳದs ಓಡಿ ಹೊಂಟೀರಿ ಹೌಂದಲ್ಲ?

**ಶೋಭಾ :-** ಓಡಿ ಹೊಂಟಿದ್ದ ಖರೆ. ನಾನೂ ರವಿ ಇಬ್ಬರೂ ಪ್ರೀತಿ ಮಾಡತೀವಿ. ಮದಿವಿ ಮಾಡಬೇಕಂದಿವಿ, ರವೀ ಅಪ್ಪ ಒಪ್ಪಲಿಲ್ಲ. ದೂರ ಹೋಗಿ ಮದಿವಿ ಮಾಡಿಕೊಂಡ ಬರತೀವಿ.

**ಹದಿನೆಂಟು :-** ಪರೀಕ್ಷೇಕ್ಕೂರಲಿಲ್ಲ.

**ಶೋಭಾ :-** ಇಲ್ಲ.

**ಹದಿನೆಂಟು :-** ಪರೀಕ್ಷೆ ಆದಮ್ಯಾಲ ಹೋಗಬೇಕಿತ್ತು.

**ಶೋಭಾ :-** ಈಗ ಹೋದರೇನ ತಪ್ಪು?

**ಹದಿನೆಂಟು :-** ತಪ್ಪಿಲ್ಲವಾ, ಆಮ್ಯಾಲ ಹೋಗಿದ್ದರೇನ ತಪ್ಪಾಗತಿತ್ತು?

**ರವಿ :-** ನಮ್ಮಪ್ಪ ಒತ್ತಾಯ ಮಾಡಿ ಬ್ಯಾರೇ ಮದಿವಿ ಮಾಡಬೇಕಂತಾನ.

**ಹದಿನೆಂಟು :-** ಪರೀಕ್ಷೆ ಆಗೋದರೊಳಗs?

**ಶೋಭಾ :-** ಆದರ ನಮ್ಮಪ್ಪ ಈಗs ಮದಿವಿ ಮಾಡಬೇಕಂತಾನ.

**ಹದಿನೆಂಟು :-** ಅಂದರ ಈ ಪ್ಲಾನ ನಿಂದs ಅಂಥಾಂಗಾಯ್ತು.

**ಶೋಭಾ :-** ನಂದs ಇರಭೌದು ತಪ್ಪೇನು?

**ಹದಿನೆಂಟು :-** ತಪ್ಪಿಲ್ಲ; ಆದರ ಹುಡಿಗೀನs ಹುಡುಗನ್ನ ಓಡಿಸಿಕೊಂಡ ಹೊಗತಾಳಂದರ ಅದರಾಗೇನೋ ತಪ್ಪಿದ್ಧಾಂಗ ಆಗಲಿಲ್ಲಾ?

**ಶೋಭಾ :-** ಅಂದರ ನಾ ಏನೋ ಕಾರಭಾರ ಮಾಡಿಕೊಂಡೀನಂತ, ಹೌಂದಲ್ಲ?

**ಹದಿನೆಂಟು :-** ಅದನ್ನ ನೀವs ಹೇಳಬೇಕು.

**ಶೋಭಾ :-** ಬಾಯ್ಬಿಟ್ಟು ಹೇಳ್ರಿ - ನಾ ಹಾದರಗಿತ್ತೆಂತ

**ಹದಿನೆಂಟು :-** ನೋಡವಾ ಹೆಣಮಗಳ, ನನಗಾಗಲೇ ರಾಷ್ಟ್ರಪತಿ ಆಗೋವಷ್ಟ ವಯಸ್ಸಾಯ್ತು. ನಿನ್ನ ಎರಡ ಪಟ್ಟ ಕಂಡೇನಿ, ಉಂಡೇನಿ. ನಿಮ್ಮಂಥಾ ಎಳಕರ ಜೀವಾ ಪಣಕಿಟ್ಟ ನಾ ಎಂದು ಇಸ್ಪೀಟ ಆಡಿದವನಲ್ಲ. ಅಷ್ಟs ಅಲ್ಲ, ಇಲ್ಲೀತನಕ ಒಂದಕ್ಕೂ ತಕರಾರ

ತಗದವನಲ್ಲ. ನನ್ನ ಹರೇದಾಗ ಈಗಿರೋದಕ್ಕಿಂತ ಕಡಿಮೆ ಹೂ ಇದ್ದುವು. ಈಗ ನೋಡು - ಈಟ ಬಳ್ಳಿಗಿ ಸಾವಿರ ಹೂ ಸುರೀತಾವ. ಬಹುಶಃ ನಿನಗ ನನಗಿಂತ ಹೆಚ್ಚ ತಿಳಿವಳಿಕೆ ಐತ್ಯೋ ಏನೊ ಅಥವಾ ನೀ ದೊಡ್ಡ ತಪ್ಪ ಮಾಡಿರಭೌದು.

**ಶೋಭಾ :**- ನಿಮ್ಮ ಮಾತ ತಿಳೀವೊಲ್ಲು ಏನ ಹೇಳಿದಿರಿ?

**ಹದಿನೆಂಟು :**- ಇದು; ಪರೀಕ್ಷೆ ಆದಮ್ಯಾಲ ಓಡಿ ಹೋಗಿದ್ದರ ಮುಗಲ ಹರದ ಬೀಳತಿತ್ತs ಹೆಂಗ?

**ಶೋಭಾ :**- ಹೌಂದು ಹರದ ಬೀಳತಿತ್ತು.

**ಹದಿನೆಂಟು :**- ಅದ್ಹೆಂಗs

**ಶೋಭಾ :**- ಅದನೆಲ್ಲಾ ನಿಮ್ಮ ಮುಂದೆ ಹೇಳಾಕ ಬೇಕೇನ್ರಿ?

**ಟ್ವೆಂಟಿ :**- ಬಂದ ಹುದಲಾ ಬಿದ್ದೀರಂದಮ್ಯಾಲ ಹೇಳಬೇಕು.

**ಶೋಭಾ :**- ಹೇಳದಿದ್ದರ?

**ಹದಿನೆಂಟು :**- ನಡೀರಿ ಪೋಲೀಸ ಸ್ಟೇಷನ್ನಿಗೆ ಹೋಗೋಣು.

**ಶೋಭಾ :**- ಬರೋದಿಲ್ಲ. ರವಿ, ಸೂಟಕೇಸ ತಗೊ. ಅದೇನ ಮಾಡತಾರ ಮಾಡಲಿ. ನಡೀ ಹೋಗೋಣು.

**ಹದಿನೆಂಟು :**- ನಾ ನಿನ್ನ ವೈರಿ ಅಲ್ಲವಾ. ಕೇಳ್ರಿಲ್ಲೆ : ಹುಚ್ಚ ಹರೇದಾಗ ಬೇಕಾದ್ದ ಬ್ಯಾಡಾದ್ದೆಲ್ಲಾ ಅರಗಿಸಿಕೊಳ್ತೀವಂತ ಕುಡಗೋಲ ನುಂಗಾಕ ಹೋಗಬಾರದು, ಹೆಣಮಗಳs, ಸೂಟಕೇಸ ಕೆಳಗಿಡು.

**ರವಿ :**- ಶೋಭಾ, ಕೆಳಗಿಡು ನಾ ಮಾತಾಡತೀನಿ.

(ಹದಿನೆಂಟನ ಬಳಿ ಹೋಗಿ)

ಸಾಹೇಬರs, ನೀವs ನಮ್ಮ ಹಿರೇರಂತ ತಿಳೀರಿ. ನಾವೇನೂ ಸಣ್ಣವರಲ್ಲ, ನಮ್ಮ ಜವಾಬ್ದಾರಿ ನಮಗ ತಿಳದೈತಿ. ನಾವಿಬ್ಬರೂ ಪ್ರೀತಿ ಮಾಡಿದಿವಿ. ಮದಿವಿ ಮಾಡಿಕೊಬೇಕಂದಿವಿ. ನಮ್ಮ ಹಿರೇರ ಒಪ್ಪಲಿಲ್ಲ. ಅವರನ್ನ ಬಿಟ್ಟ ದೂರ ಹೋಗಬೇಕಂತ ಹೊಂಟೇವಿ. ನಾವೇನೂ ಸಾಯೋಕ್ಕ ಹೊಂಟಿಲ್ಲ. ನೀವು ನಮಗ ಆಶೀರ್ವಾದ ಮಾಡಿ ಕಳಿಸಿರಿ.

**ಟ್ವೆಂಟಿ :**- ಯಾವುದೋ ಕಾದಂಬರ್ಯಾಗ ಒಬ್ಬಾವ ಹಿಂಗs ಮಾತಾಡೋದಿಲ್ಲರೆ?

**ರವಿ :**- ಇದಕ್ಕೂ ನಿಮ್ಮ ಕರಳ ಕರಗದಿದ್ದರ ನಮ್ಮ ನಶೀಬs ಖೊಟ್ಟಿ ಇರಬೇಕು. ಏನಂತೀರ ಸಾಹೇಬರ? ನೀವು ಅಪ್ಪಣೆ ಕೊಟ್ಟರೆ ಓಡಿಹೋಗಿ ಟ್ರೇನ್ ಹಿಡೀತೀವಿ, ಇಲ್ಲದಿದ್ದರ ಹಿರೇರ ಕೈಗಿ ಸಿಗತೀವಿ; ಮುಂದಿಂದ ನಿಮಗ ಗೊತ್ತs ಐತಿ.

**ಹದಿನೆಂಟು :-** ನಾನ ನಿಮ್ಮ ಹಿರ್ಯಾ ಅಂದ್ರೆಲ್ಲ - ಅದಕ್ಕ ಹೇಳ್ತೀನಿ : ನಿಮ್ಮ ಮದಿವೀ ಮಾಡಸೋದು ನನ್ನ ಜವಾಬ್ದಾರಿ - ನನ್ನ ಮ್ಯಾಲ ನಿಮಗಷ್ಟ ಭರೋಸ ಇದ್ದರ. ಪರೀಕ್ಷೆ ಮುಗಸರಿ. ಆಮ್ಯಾಲ ನಿಮ್ಮ ಹಿರೇರ ನನ್ನ ಮಾತ ಕೇಳಿದರು - ಬರೋಬರಿ. ಇಲ್ಲದಿದ್ದರ ನಾನಃ ಸ್ವಥಾ ನಿಮ್ಮನ್ನ ಪಾರ ಮಾಡತೀನಿ. ಇದ್ದೆಂಗ?

**ಶೋಭಾ :-** ಹೆಂಗಂದರ; ನನ್ನ ಹುಚ್ಚತನ ನೀ ತಗೊ . ನಿಂದ ನನಗ ಕೊಡು ಅಂಧಾಂಗ.

**ಟ್ವೆಂಟಿ :-** ಈ ಹೆಣಮಗಳಿಗೆ ಅಷ್ಟೇನ ತರಾತುರೀನೊ?

ಶೋಆ :- ಮನಶೇರಾಗಿದ್ದರ ತಿಳೀತಿತ್ತು, ನಿಮ್ಮ ಮಗಳಿಗಿ ಹಿಂಗಾಗಿದ್ದರ ಏನ ಮಾಡತಿದ್ದಿರಿ?

**ಹದಿನೆಂಟು :-** ನನ್ನ ಮಗಳಾಗಿದ್ದರ ನನ್ನ ಮಾತ ಕೇಳತಿದ್ದಳು.

**ಶೋಭಾ :-** ನಾನೂ ಕೇಳತಿದ್ದೆ. ಆದರ ನಾ ನಿಮ್ಮ ಮಗಳಲ್ಲ.

**ಹದಿನೆಂಟು :-** ಹರೇಕ ಹಾದಿ ಕಾಣ್ಸಾಣಿಲ್ಲವಾ, ಕರುಳಂದ್ರೆಲ್ಲ ಅದಕ್ಕ ಇಷ್ಟೆಲ್ಲ ಹೇಳಿದೆ. ಬಹುಶಃ ಈ ಜಾಗಾದಾಗ ನಿಮ್ಮಪ್ಪ ಇದ್ದಿದ್ದರ ಅವನೂ ಹಿಂಗ ಹೇಳತಿದ್ದ. ಆಗಲಿ, ಮುಂದ ಯಾವಾಗಾದರೂ ತಿಳದಾವು. ಇದನ್ನ ಮೀರಿ ನೀನುಂಟು, ನಿನ್ನ ನಶೀಬುಂಟು.

**ಶೋಭಾ :-** ರವಿ, ನಡಿ ಹೋಗೋಣು.

**ರವಿ :-** ಸಾಹೇಬರ ಹೋಗಿಬರ್ತೀವರಿ.

ಟ್ವೆಂಠಿ :- ಭೇ ಭೇ...

**ಹದಿನೆಂಟು :-** ಟ್ವೆಂಟೀ, ಹೋಗಲಿ ಬಿಡು.

(ರವಿ, ಶೋಭಾ ಇಬ್ಬರೂ ಸೂಟ್‌ಕೇಸ್ ತಗೊಂಡು ಹೊರಡುವರು)

**ಟ್ವೆಂಟಿ :-** ಹಂಗೆಲ್ಲಾ ಪೋಲೀಸರಿಗೆ ಲಂಚಾ ಕೊಡಬಾರದ್ರೆಪಾ. ಇಲ್ಲಿ ಬರ್‍ರಿಲ್ಲೆ......

**ಹದಿನೆಂಟು :-** ಟ್ವೆಂಟೀ.

**ಟ್ವೆಂಟಿ :-** ಎಸ್ಸರ್.

**ಹದಿನೆಂಟು :-** ಆ ಬುಟ್ಟಿ ಕೊಡು.

**ಟ್ವೆಂಟಿ :-** ನಿಮ್ಮ ಬುಟ್ಟಿ ಒಯ್ಯಿರಿ.
(ಎಂದು ಓಡಿ ಹೋಗಿ ಬುಟ್ಟಿ ಎಳೆಯುವನು. ಅಷ್ಟರಲ್ಲಿ ಅದರಲ್ಲಿಂದ ಒಂದು ಕೂಸು ಕೆಳಗೆ ಬಿದ್ದು ಕಿಟ್ಟನೆ ಕಿರುಚುವುದು. ಎಲ್ಲರೂ ಕಕ್ಕಾಬಿಕ್ಕಿಯಾಗುವರು. ಕೂಸು ಅಳುತ್ತಲೆ ಇರುವುದು.)

**ಶೋಭಾ :**- ಈ ಬುಟ್ಟಿ ನಮ್ಮದಲ್ಲ.
(ಎಲ್ಲರೂ ಸುಮ್ಮನಿರುವರು)

ಹಂಗ್ಯಾಕ ನನ್ನ ನೋಡತೀರಿ? ಈ ಬುಟ್ಟಿ ನಂದಲ್ಲ ಅಂದೆ
(ಈಗಲೂ ಎಲ್ಲರೂ ಸುಮ್ಮನಿರುವರು)
ರವಿ ಹೋಗೋನ್ನಡಿ -
(ಹೊರಡುವಳು)

**ಹದಿನೆಂಟು :**- ಮಿಸ್ ಶೋಭಾ, ತಗೊಂಡ ಹೋಗ್ರಿ ಅದನ್ನ.

**ಶೋಭಾ :**- (ಗಾಬರಿಯಾಗಿ)
ಏನ್ರಿ ನೀವು ಹೇಳೋದು?

**ಹದಿನೆಂಟು :**- ತಗೊಂಡು ಹೋಗವಾ ಅದನ್ನ.

**ಶೋಭಾ :**- ರವಿ, ನಮ್ಮದಲ್ಲಂತ ಯಾಕ ಹೇಳವೊಲ್ಲಿ?

**ಹದಿನೆಂಟು :**- ವಾದ ಮಾಡಿದಷ್ಟೂ ಜೇಲಿಗೆ ಸಮೀಪ ಆಗತೀರಿ.

**ಟ್ವೆಂಟಿ :**- ಈಕಿ ತರಾತುರಿ ನನಗೀಗ ತಿಳೀತ ನೋಡ್ರಿ.

**ಶೋಭಾ :**- (ಒದರುತ್ತ)
ನಂದಲ್ಲಾ ಅಂದೆ.

**ಟ್ವೆಂಟಿ :**- ಇನ್ಯಾರದು ನಂದ?

**ಶೋಭಾ :**- ನನಗೇನು ಗೊತ್ತು?

**ಟ್ವೆಂಟಿ :**- ಹೆಣಮಗಳ, ದೇವರಾಣಿ ಗಂಡಸರು ಹೆಡೆಯೋದಿಲ್ಲವಾ. ಮತ್ತ ಹಳೇ ಆಟಹೂಡಿ ನಮ್ಮ ಸಾಹೇಬರ ತಲಿ ಕೆಡಸಬ್ಯಾಡ.
(ಈಗ ಮಗು ಸುಮ್ಮನಿದೆ. ಶೋಭಾ ಅಳತೊಡಗುವಳು)

**ಶೋಭಾ :**- ಇದು ನಂದಲ್ಲಾ ಅಂತ ಹೆಂಗ ಹೇಳಲಿ? ಯಾಕಾದರೂ ಇಲ್ಲಿಗಿ ಬಂದಿನೋ?
(ಶಿವರಾಯಪ್ಪ, ವಯಸ್ಸು ೫೦ರ ಮೇಲೆ ಇಬ್ಬರು ಹುಡುಗರೊಂದಿಗೆ ಓಡಿ ಬರುವನು. ರವಿಯನ್ನು ನೋಡಿ ವೀರಾವೇಶ ಹೊಂದುವನು)

**ಶಿವರಾಯಪ್ಪ :**- ಇಲ್ಲಿದ್ದೀಯೇನೋ ಮಗನ? ಏ ರಾಮ್ಯಾ, ಇವರಣ್ಣ ಸ್ಟೇಷನ್ನಿಗಿ ಹೋಗ್ಯಾನ. ರವಿ ಇಲ್ಲಿ ಸಿಕ್ಕಾನಂತ ಹೇಳಿ ಕರತಾ ಹೋಘು.
(ಒಬ್ಬ ಹುಡುಗ ಓಡುವನು)
ಭಾಳ ಉಪಕಾರಾಯ್ತಿರೀ ಸಾಹೇಬರ೬

**ಟ್ವೆಂಟೀ :**- ಇವರು ತಮ್ಮ ಮಗ ಏನ್ರಿ?

ಶಿವರಾಯಪ್ಪ :- ಮಗ ಅಲ್ಲ, ವೈರಿ ಸೂಳೇಮಗ.

**ಟ್ವೆಂಟಿ :**- ಹೇಳಿಕಳಿಸಿಧಾಂಗ ಒಳೇಯಾಳೇಕ ಬಂದ್ರಿ. ಹೆಂಗ ಗೊತ್ತಾಯ್ತರಿ?

**ಶಿವರಾಯಪ್ಪ :**- ಈಕಿ ಪತ್ರಾ ಬರದಿದ್ದಳಲ್ಲ - ಪ್ರಿಯಕರಾಃ ಅಂತ. ಈ ಕರಾ ಇಲ್ಲೇಃ ಇರಬೇಕಂತ ಬಂದರ ಸಾಕ್ಷಾತ್ಕಾರ ಆದ್ನಲ್ಲಾ ರಂಭಾ ಸಮೇತ. ನಮ್ಮ ಜಾತೀದಲ್ಲ, ಆ ಹುಡುಗಿ ಗೆಳೆತನ ಬಿಡೊ ಅಂದೆ. ಬಿಟ್ಟೆ ಅಂದ. ಥೇಟ್ ಹಾದಿಗಿ ಬಂದವರ್ಹಾಂಗ ನಾಟಕ ಮಾಡಿದ. ಮರತ ಅಂತ ನಾವು ಮೈಮರತರ ಮತ್ತ ಓಡಿಹೊಂಟಾನಲ್ಲ - ರೊಕ್ಕಾ ಬಳಕೊಂಡು. ಏನ ಹುಟ್ಟಬಾರದ ಹುಟ್ಟಿದ್ಯೋ ಮಗನಃ ನನ್ನ ಹೊಟ್ಯಾಗ!

**ಹದಿನೆಂಟು :**- ಯಜಮಾನರ, ತಿಳೀದಃ ಏನೇನೊ ಮಾತಾಡಬ್ಯಾಡ್ರಿ. ಅಷ್ಟ ಸರಳ ವ್ಯವಹಾರ ಅಲ್ಲಿದು. ಹುಡುಗೋರಿಗಿ ತಿಳಿಸಿ ಹೇಳೋಣು.

**ಶಿವರಾಯಪ್ಪ :**- ಹೆಂಗ ತಿಳಿಸಿ ಹೇಳಲಿ?

**ಹದಿನೆಂಟು :**- ನೀವ ಹಿಂಗ ಕುದರಿ ಹತ್ತಿ ನಿಂತರ ನಾ ಏನೂ ಹೇಳಾಣಿಲ್ಲ. ನೀವುಂಟು , ನಿಮ್ಮ ಕೂಸುಂಟು.

**ಶಿವರಾಯಪ್ಪ :**- ಕೂಸ?
(ಬುಟ್ಟಿಯ ಬಳಿಯ ಕೂಸನ್ನು ಸುತ್ತುವರಿದು ನೋಡಿಬರುವನು)

**ಶೋಭಾ :**- ರವಿ……

**ಶಿವರಾಯಪ್ಪ :**- ತಿಳೀತು.

**ಹದಿನೆಂಟು :**- ನಿಮಗ ತಿಳಿದಲ್ಲಾ…..

**ಶಿವರಾಯಪ್ಪ :**- ತಿಳೀದೇನ್ರಿ? ಇದ ನನ್ನ ಮೊಮ್ಮಗನೋ ಮೊಮ್ಮಗಳೊ. ಹೌಂದಲ್ಲ?
(ಕೋಪದಿಂದ ಬುಸುಗುಡುತ್ತಿದ್ದಾನೆ)

ರವಿ,

**ಶೋಭಾ :**- (ಓಡಿ ಹೋಗಿ ಹದಿನೆಂಟನ ಕಾಲು ಹಿಡಿದು)
ಈ ಕೂಸ ಖರೇನ ನಂದಲ್ಲರೋ ಎಪ್ಪಾ.

**ರವಿ :**- ಅಪ್ಪಾ ಶೋಭಾ ಹೇಳೋದ ಖರೇ ಐತಿ.

**ಶಿವರಾಯಪ್ಪ :**- ಖರೆ? ಖರೆ ಹೇಳಿದ್ದರ ನಿನಗ ಪೆದ್ದ ಅಂತಿದ್ಲು.ಅಂದಳೇನು? ಅಂದಿಲ್ಲ. ಹಾಂಗಿದ್ದರ ಆಕೆಂಥಾ ಖರೆ ಹೇಳ್ಯಾಳೊ! ನಡೀ ಮೊದಲು. ಬಾಯಿ ಬಿಟ್ಟರ ಹಲ್ಲ ಮುರೀತೇನೀಗ.

**ರವಿ :-** ಆದರ ಶೋಭಾ……

**ಶಿವರಾಯಪ್ಪ :-** ಊರ ಹಂದೆಲ್ಲಾ ಆ ಕೆರ್ಯಾಗ ಹೊಳ್ಯಾಡ್ಯಾವ, ಮತ್ತ ಅದಃ ಬೇಕಂತಿಯೇನೋ?

**ಟ್ವೆಂಟಿ :-** ನೋಡ್ರಿ ಯಜಮಾನರ. ಒಬ್ಬನ ತಲ್ಯಾಗ ಹೇನಾಗಿದ್ದರ ಸಾಬನ ಹಚ್ಚಿ ತೊಳೀಬೌದು , ಅದರ ಹೇನ ತಗಧಾಂಗ ಅವನ ತಲ್ಯಾಗಿನ ಕೆಟ್ಟ ವಿಚಾರ ತಗ್ಯಾಕ ಆಗಾಣಿಲ್ಲರಿ.

**ಶಿವರಾಯಪ್ಪ :-** ನೀವು ಬಾಯ್ಮುಚ್ಚತೀರಿ?

**ಹದಿನೆಂಟು :-** ಏ ಟ್ವೆಂಟೀ.

**ಶಿವರಾಯಪ್ಪ :-** ರವಿ, ನಡಿ ಹೋಗೋಣು.

**ಹದಿನೆಂಟು :-** ಕೇಳ್ರಿಲ್ಲೆ…..

**ಶಿವರಾಯಪ್ಪ :-** ಬಾಯ್ಮುಚ್ಚರಿ.

**ಹದಿನೆಂಟು :-** ಯಾಕ? ಜೇಲಿಗಿ ಹೋಗಬೇಕಂತೀರೇನ? ಏನೋ ಕಿಮ್ಮತ್ತು ಕೊಟ್ಟ ಮಾತಾಡಿಸಿದರ ಬಾಯ್ಮುಚ್ಚಂತೀರೇನ್ರಿ? ಸೊಸೀನ್ನ, ಮೊಮ್ಮಗನ ಕರಕೊಂಡ ಮನೀಗ ಹೋಗ್ರಿ. ಇಲ್ಲದಿದ್ದರ ಪೋಲೀಸ್ಟೇಶನ್ನಿಗಿ ನಡೀರಿ.

**ಶಿವರಾಯಪ್ಪ :-** (ರವಿಯನ್ನು ಒದೆದು)
ಬದ್ಮಾಸ್ ಸೂಳೇಮಗನ, ಏನೋ ನಿನ್ನ ವ್ಯವಹಾರ? ಬೊಗಳೊ ನಿಂದೇನೊ ಆ ಕೂಸು?

**ರವಿ :-** ನಂದಲ್ಲ ಆದರ…?

**ಶಿವರಾಯಪ್ಪ :-** (ಮತ್ತೆ ಒದ್ದು)
ಮತ್ತೇನ ಆದರ……?

**ರವಿ :-** ಶೋಭಾಂದೂ ಅಲ್ಲ.

**ಶಿವರಾಯಪ್ಪ :-** ಅದನ್ಯಾರ ಕೇಳಿದರು ನಿನ್ನ? ಕೇಳದಃ ಯಾಕ ಬಾಯಿ ಬಿಟ್ಟಿ?

**ಹದಿನೆಂಟು :-** ಶೋಭಾ, ಯಾರದದು? ನೀ ಹೇಳಬೇಕಲು.

**ಶಿವರಾಯಪ್ಪ :-** ರವೀದೇನು?

**ಶೋಭಾ :-** ನಮ್ಮಿಬ್ಬರದೂ ಅಲ್ಲ.

**ಶಿವರಾಯಪ್ಪ :-** ರವೀದಲ್ಲಂಥಾಗಾಯ್ತು. ಸಾಹೇಬರ ಇನ್ನ ಹೋಗೋಣ್ರೆ ನಾವು?

**ಹದಿನೆಂಟು :-** ಹೋಗೀರೆಂತ ತಡೀರಿ. ಹೆಣಮಗಳ ಜವಾಬ ಬರಲಿ, ಏನವಾ?

**ಶೋಭಾ :-** (ಅಳುತ್ತ)
ಹೆಂಗ ಹೇಳಲಿ? ಹೆಣಕ್ಕ ಹುಳಾ ಮುತ್ತಿಧಾಂಗ ಎಲ್ಲಾರು ನನ್ನ ನೋಡತೀರಿ. ಖರೋಖರ ಹೇಳತೀನಿ - ಇದು ನಂದಲ್ಲ. ನಾ ಹೆಂಗಸ ಖರೆ. ಹಾಂಗಂದರ ನಾ ಇದರ ತಾಯಿ ಹೆಂಗಾದೇನು?

**ಹದಿನೆಂಟು :-** ಮಿಸ್ ಶೋಭಾ, ಇದ್ದದ್ದ ಇದ್ದಾಂಗ ಹೇಳಿದರ ನಿನಗೇನೂ ಧೋಕ ಆಗಧಾಂಗ ನೋಡಿಕೊಳ್ತೀನಿ. ಇವರು ಶ್ರೀಮಂತರಾಗಿರಬಹುದು. ಆದರೂ ನಾ ಇರೋತನಕ ಹೆದರಬ್ಯಾಡ. ಈ ಕೂಸ ರವೀದಂತ ನೀ ಒಮ್ಮಿ ಹೇಳಿದರ ಸಾಕು. ನಿಮ್ಮಿಬ್ಬರ ಮದಿವಿ ಮಾಡಸೋ ಜವಾಬ್ದಾರಿ ನಂದು, ಕಾರಭಾರ ಬಡವ ಮಾಡಲಿ; ಶ್ರೀಮಂತ ಮಾಡಲಿ, ಕಾರಭಾರನs

**ರವಿ :-** ಅಲ್ಲರೀ ಸಾಹೇಬರs

ಶಿವರಾಯಪ್ಪ :- ಒದೀತೀನಿಗ.

**ಹದಿನೆಂಟು :-** ನನಗ ಹುಡುಗನ ಮಾತ ಬೇಕಿಲ್ಲ. ಶೋಭಾ, ನೀ ಹೇಳು. ನಿನಗಿಷ್ಟ ತಿಳದಿರಲಿ. ರವೀನ ಉಳಿಸಾಕಂತ ನೀ ಸುಳ್ಳ ಹೇಳಿದರ ಮುಂದಿಂದಕೆಲ್ಲಾ ನೀನs ಜವಾಬ್ದಾರಿ; ನಾವಲ್ಲ. ಆರಿಸಿಕೊ.

**ಶೋಭಾ :-** ಇದು ರವೀದೂ ಅಲ್ಲ.

**ಶಿವರಾಯಪ್ಪ :-** (ಬೆವರೂರಿಸಿಕೊಳ್ಳುತ್ತ)
ಬದುಕಿಸಿದೆ ಹಡದವ್ವಾ. ಸಾಹೇಬರ ನಾವು ಹೋಗೋಣೇನ್ರಿ?

**ಹದಿನೆಂಟು :-** ತಡೀರಿ. ಮಿಸ್ ಶೋಭಾ, ಏನ ಮಾತಾಡತೋದಿ ಗೊತ್ತೇನು?

**ಟ್ವೆಂಟಿ :-** ಬಂಗಾರದ ತತ್ತೀ ಹಾಕೋ ಕೋಳಿ ಕಳಕೊಳ್ತೀಯವಾ.

**ಹದಿನೆಂಟು :-** ಹೇಳು, ಯಾರದ್ದಿದು?

**ಶೋಭಾ :-** (ಅಳುತ್ತ)
ನಮ್ಮದಲ್ಲ.

**ಹದಿನೆಂಟು :-** ಇದು ಇಲ್ಲಿಗಿ ಹೆಂಗ ಬಂತು?

**ಟ್ವೆಂಟಿ :-** ಆಕಾಶದಿಂದ ಉದರಿತ?

**ಶೋಭಾ :-** ನನಗೇನ ಗೊತ್ತು?

**ಹದಿನೆಂಟು :-** ಮಿಸ್ಟರ್ ರವಿ...

**ರವಿ :**- ನನಗೂ ಗೊತ್ತಿಲ್ಲರಿ.

**ಹದಿನೆಂಟು :**- ಈ ಹೆಣಮಗಳು, ಇಲ್ಲಿಗೆ ನಿನಗಿಂತ ಮೊದಲು ಬಂದಳು ಹೌಂದ?

**ರವಿ :**- ಹೌಂದು.
**ಹದಿನೆಂಟು :**- ಮಿಸ್ ಶೋಭಾ ಹೌಂದೇನ್ರಿ?

**ಶೋಭಾ :**- (ಹೌದೆಂದ ಕತ್ತು ಹಾಕುವಳು)

**ಹದಿನೆಂಟು :**- ಮಿಸ್ ಶೋಭಾ, ತಗೊಂಡಹೋಗ್ರಿ ಅದನ್ನ.

**ಶಿವರಾಯಪ್ಪ** :- ನಮಸ್ಕಾರ ಬರತೀವಿ ಸಾಹೇಬರ.

**ಹದಿನೆಂಟು :**- ಏ ಟ್ವೆಂಟೀ, ಅವರ ಅಡ್ರೆಸ್ ಬರಕೊ.
(ಟ್ವೆಂಟಿ ಕೂಡಲೆ ವಿಳಾಸ ಬರೆದುಕೊಳ್ಳಲು ಸಿದ್ಧನಾಗುವನು)

ಶಿವರಾಯಪ್ಪ :- ಶಿವರಾಯಪ್ಪ ಅಂಡ್ ಸನ್ಸ್, ಅಡತಿ ಅಂಗಡಿ, ಸ್ಟೇಷನ್ ರೋಡ್ ಹುಬ್ಬಳ್ಳಿ, ನಡಿಯೊ.

**ರವಿ :**- ಅಪ್ಪಾ.

(ಶಿವರಾಯಪ್ಪ ಚಪ್ಪನೆ ಮಗನ ಕೆನ್ನೆಗೊಂದು ಬಾರಿಸಿ ಎಳೆದುಕೊಂಡು ಹೋಗುವನು. ಹುಡುಗ ಅವನ ಸೂಟಕೇಸಿನೊಂದಿಗೆ ಬೆನ್ನ ಹತ್ತುವನು)

**ಹದಿನೆಂಟು :**- ಟ್ವೆಂಠಿ. ಆ ಹೆಣಮಗಳ್ನ ಸ್ಟೇಷನ್ನಿಗಿ ಕರಕೊಂಡ ನಡಿ ಅಥವಾ ಬ್ಯಾಡ ಹೋಗಿ ಮನೀಗ ಮುಟ್ಟಿಸಿ ಬಾ. ಸಪ್ತಾಪುರದಾಗೈತಿ ಅಂದಳಲ್ಲ ಹೋಗು.

(ಶೋಭಾ ಒಡಿಬಂದು ಮತ್ತೆ ಕಾಲು ಹಿಡಿದುಕೊಂಡು ಅಳುವಳು)

ದಿನಬೆಳಗಾದರ ಇಂಥಾ ಕೇಸಿನಾಗ ಮುಳಿಗೇಳತೀವಿ. ನಮಗೆಲ್ಲಾ ತಿಳೀತೈತಿ. ತಮ್ಮ ಖರೆ ಒಪ್ಪಿಕೊಳ್ಳಾಕ ಈ ಮಂದಿಗಿ ಎಂದ ಧೈರೆ ಬರತೈತೊ!

**ಶೋಭಾ :**- ಯಾವ ಮುಖ ಹೊತ್ತ ಮನೀಗಿ ಹೋಗ್ಲಿ?

**ಹದಿನೆಂಟು :**- ಮಂದೀ ಮುಖ ಯಾಕ , ನಿಂದ ನೀನಃ ಹೊರಬೇಕು.

(ಶೋಭಾ ನಿಧಾನವಾಗಿ ಕಾಲು ಬಿಡುವಳು, ಕೂಸಿನ ಕಡೆಗೆ ಹೋಗುವಳು. ಮುಂದಿನ ಮಾತು ಮುಗಿಯುವ ಹೊತ್ತಿಗೆ ಕೂಸನ್ನು ಮೆಲ್ಲನೆತ್ತಿ ಹೊರಡುವಳು. ಟ್ವೆಂಟಿ ಸೂಟಕೇಸನ್ನೆತ್ತಿ ಬೆನ್ನಹತ್ತುವನು)

ನಮ್ಮ ಮುಖಾ ನಾವs ಹೊತ್ತಾಗ ಹೆಂಗ ಇರತೈತೊ! ಬರೀ ಮಂದೀದs ಹೊತ್ತ ಹೊತ್ತ ಲೋಕಾ ಅಣಗಿಸೋದಕ್ಕಿಂತ ನಮ್ಮದ ನಾವs ಹೊತ್ತ ನಮಗ ಅಣಕಿಸಿಕೊಳ್ಳೋದ ಚಲೋ ಅಲ್ಲ? ಕನಸಿನಾಗ ಒಮ್ಮಿ ತಿರುಪತಿ ತಿಮ್ಮಪ್ಪ ಹೇಳ್ತಿದ್ದ : ಮಗನs ಮನಿಶ್ಯಾನ ಖರೆ ನೋಡಬೇಕಾದರ ಕಣ್ಣಾಗ ಕಣ್ಣಿಟ್ಟು ನೋಡಬಾರದು. ನಿನ್ನ ಮೂಗಿನ ತುದಿ ನೋಡಕೋಬೇಕು ಅಂತ. ಹಾಂಗ ನೋಡಿದರ ಎದುರಿಗಿದ್ದಾವ ಡಬಲ್ ಕಾಣಿಸ್ತನ. ಬಹುಶಃ ಅದs ಖರೇನೋ ಏನೊ! ಅದಕ್ಕ ಮನಿಶ್ಯಾ ಏಕಕಾಲಕ್ಕ ಎರಡೆರಡ ಹಾದ್ಯಾಗ ಕಾಲಿಟ್ಟ ನಡೀತಾನ. ಕುಡಗೋಲ ನುಂಗುವನೂ ಅವನ, ನುಂಗಸುವನೂ ಅವನ! ಇದನ್ನs ಹೇಳತೀನಿ; ನನ್ನ ಮಾತ ಯಾರೂ ನಂಬಾಣಿಲ್ಲ.

ತೆರೆ

# ಅಪರಿಚಿತರು

## ದೃಶ್ಯ ಒಂದು

**...I believe that before all else I am a human being, just as you are – or at least that I should try and become one.**

**IBSEN.**

—-

ಪಾತ್ರಗಳು

**ರಮೇಶ**
**ನಾಗಯ್ಯ**
**ಅಂಬಕ್ಕ**
**ಲಲಿತ**
**ಶಾರದಾ**

[ತೆರೆ ಏಳುತ್ತಲೂ ನಮ್ಮ ಅಥವಾ ನಿಮ್ಮ ಮನೆ. ವ್ಯವಸ್ಥೆಯಲ್ಲಾ ನಮ್ಮ ನಿಮ್ಮಲ್ಲಿನ ಹಾಗೆ. ಎಡಬದಿಗೊಂಡು ಬಾಗಿಲು, ಎದುರಿಗೊಂದು ಬಾಗಿಲು. ಎಡ ಬದಿಯ ಬಾಗಿಲ ಬಳಿ ಕನ್ನಡಿ, ಸ್ನೋ, ಹಣಿಗೆ ಮತ್ತು ವಗೈರೆ ಉಳ್ಳಂಥಾ ಒಂದು ಪುಟ್ಟ ಟೇಬಲ್ಲು. ಅದರ ಬದಿಗೆ ನಿಮಗಿಷ್ಟವುಳ್ಳ ವ್ಯಕ್ತಿಯ ಅರೆದೇಹದ ಶಿಲ್ಪ. ಮಧ್ಯದಲ್ಲೆರಡು ಕುರ್ಚಿ. ಒಂದರಲ್ಲಿ ಇಂದಿನ ದಿನಪತ್ರಿಕೆ. ನೀವು ಚಂದೂಮಾಮಾದ ಚಂದಾದಾರರಿದ್ದರೆ ಅದೂ ಒಂದು. ಎಡಬಾಗಿಲ ತಲೆಯ ಮೇಲೆ ರಾಮಾಯಣಕ್ಕೆ ಸಂಬಂಧಿಸಿದ ಒಂದು ಚಿತ್ರ. ಇಷ್ಟವಿದ್ದರೆ ಗಾಂಧೀಜಿಯವರ ಭಾವಚಿತ್ರವನ್ನೂ ಶಿಲುಬೆಗೇರಿಸಬಹುದು.

ಹಸಿದ ಹೆಣ್ಣುನಾಯಿಯಂಥ ಅಸ್ಪಷ್ಟ ವಟವಟಾ ಮಾತು ಎಡಬಾಗಿಲಿನಿಂದ ಕೇಳಬರಬೇಕು. ತುಸು ಸಮಯ ಹೀಗೇ ಸತ್ತ ಬಳಿಕ ರಮೇಶ ತುಂಬ ಗಡಿಬಿಡಿಯಿಂದ ಹೊರಬರುತ್ತಾನೆ. ಉಡುಪು ತೀರ ಸಾದಾ - ಅಂದರೆ ಒಂದು ಗರ್ವ ಸೋರುವ ಮೂಗು,

ಅಹಂಕಾರದ ಎರಡು ತುಟಿ, ಸೊಕ್ಕು ಬಸಿಯುವ ಎರಡು ಕಣ್ಣು, ನಿಮ್ಮ ಕಸಬರಿಗೆಯಂಥ ಒಂದು ತಲೆ; ವಯಸ್ಸು ನಮ್ಮ ನಿಮ್ಮಷ್ಟು. ಬಂದು ಕನ್ನಡಿಯ ಎದುರು ನಿಂತು ಉಡುಪು ಸರಿಪಡಿಸತೊಡಗುತ್ತಾನೆ. ತುಂಬ ಕಾವೇರಿದ್ದಾನೆ.]

**ರಮೇಶ :-** ಹೆಣ್ಣು ಹೆಂಗಸಾಗಿ ಕೈ ಬೀಸ್ತಾ ನಾಟ್ಕಾ ನೋಡಿದಳಂತ - ನಾಟ್ಕಾ. ಮನೆಯೊಳಗೆ ಯಾರೂ ಹೇಳವರು ಕೇಳವರು ದಿಕ್ಕು - ದೆಸಿ, ಏನೂ ಇಲ್ಲಾ? ಯಾರನ್ನ ಕೇಳಿ ನೀವು ನಾಟ್ಕಾ ನೋಡ್ಲಿಕ್ಹೋಗಿದ್ರೀss ಅಂತ. ಕೊನೀಪಕ್ಷ ಗಂಡ್ಸೂ ಅಂಬೋದೊಂದ ಪ್ರಾಣಿ - ಈ ಮನೇಲಿದೆ, ಅಂಬೋ ಅರಿವಾದ್ರೂ ನಿಮಗ ಬ್ಯಾಡಾ? ನನ್ನ ಸ್ನೇಹಿತರೇನಂದಾರು? ಪರಿಚಿತರೇನಂದಾರು? (ಅಣಕಿಸುತ್ತ) ಆಕಿ ಕರದಳಂತ - ಈಕಿ ಹೋದಳಂತ. ನನಗ ಹೇಳಿಕೇಳಿ ಹೋಗಿದ್ರ ಏನಾಗ್ತಿತ್ತು? (ಎಡಬಾಗಿಲ ಕಡೆಗೆ ಕಿಸಿದ ಕಣ್ಣಿನಿಂದ ನೋಡುತ್ತ) ನಾಲಿಗಿ ಸೀದು ಹೋಯ್ತೇನು? ಏsಯ್ ನಿನ್ನನ್ನs ಕೇಳಿದ್ದು. (ಅಶೋಕವನದಲ್ಲಿ ಸೀತಾದೇವಿ ಇಟ್ಟಿರಬಹುದಾದಂತೆ ಹೆಜ್ಜೆ ಇಡುತ್ತ, ಲಲಿತ ಎಡಬಾಗಿಲಿನಿಂದ ಬರುತ್ತಾಳೆ. ಉಡುಪು, ಕೆನ್ನೆಗಳಲ್ಲಿ ತಾತ್ಸಾರ, ತುಟಿಗಳಲ್ಲಿ ಭಯಮಿಶ್ರಿತವಾದ ಅರ್ಧಸೇರು ಸಹನೆ. ಕಣ್ಣುಗಳಲ್ಲಿ ಇನ್ನೂ ಪಕ್ವವಾಗದ ಎರಡು ನಿರ್ಭೀತಿಯ ಫಲ. ಮೇವು ದೊರೆಯದ ಮುದುಕಿ ಆಕಳಿನಂತೆ ಮುಖ ಮಾಡಿ ಕೊಂಡು...)

**ಲಲಿತ :-** ಅಂಬಕ್ಕ ನಿಮಗೆಲ್ಲಾ ಹೇಳಿದೀನಿಂತ ಹೇಳಿದರು.

**ರಮೇಶ :-** ಅವಳಿಗೇನು? ಈ ಹೊತ್ತಿದ್ದು ನಾಳಿ ತನ್ನ ಗಂಡನ ಮನಿಗಿ ಹೋಗ್ತಾಕಿ. ಮಾನ, ಮರ್ಯಾದಿ - ನನ್ನದು ತಾನೇ? ನಿನ್ನ ತವರ ಮನೆಯವರು ಹೀಂಗೆಲ್ಲಾ ಉಂಡ ಓಣ್ಯೋಣಿ ಕೈಬೀಸ್ತಾ ಅಡ್ಡಾಡುದನ್ನs ಕಲಿಸಿದರೇನು?

**ಲಲಿತ :-** ಅವರನ್ಯಾಕ ಬಯ್ತೀರಿ......ನಾ ಎನ ಮಾಡಿದೀನಿ ಅಂಥಾದ್ದು?

**ರಮೇಶ :-** (ಕಚ್ಚುವ ನಾಯಿಯಂತೆ) ನಾಟ್ಕಾಕ್ಕಾದ್ರೂ ಹೋಗಿದ್ಯೋ - ಇಲ್ಲೊ? ಅವರನ್ಯಾಕ ಬಯ್ತೀರಿ ಅಂತ. ಎಲ್ಲಿ ನಾಲ್ಕ ಅಕ್ಷರ ಕಲಿತೀದಾಳೋ - ಏನೋ - ಎದರ ವಾದಸ್ತಾಳ - ಇಂಥಾ ಧಿಮಾಕ ದಿಗರ ನನ ಮುಂದ ನಡಿಯೋದಿಲ್ಲಾ - ಅಂದೆ. ನಾನೂ ಬಿ.ಎ. ಪಾಸ ಮಾಡೀನಿ... ಅಂದ್ಹಾಂಗ ಇಲ್ಲೀ ಟೇಬಲ್ಲು ಒಳಗ್ಯಾರಿಟ್ಟರು?

**ಲಲಿತ :-** ಕೋಣೇ ತೊಳೀಬೇಕಾಗಿತ್ತು, ಹೊರಗಿಟ್ಟಿದ್ದೆ. ಈಗ ಒಳಗ ತರತೀನಿ.

**ರಮೇಶ :-** (ನೀವು ನೋಡಿದ ಸಿನಿಮಾದ ಖಳನಾಯಕನಂತೆ) ಈ ಕೋಣೆ ಸ್ವಚ್ಛ ಮಾಡೋದು ಈಗೇನ ಅಂಥಾ ಗರ್ಜ ಇತ್ತು?

**ಲಲಿತ :-** ಹೊಲಸು ಭಾಳ -

**ರಮೇಶ :-** (ಮೂರಿಂಚು ಮೂಗು ಕಿಸಿದು) ನಮ್ಮ ಕಾಗದ ಪತ್ರೆಲ್ಲಾ ಇಲ್ಲಿ ಮೇಜಿನ ಮ್ಯಾಲ ಬಿದ್ದಿರತಾವ. ಅವು ಕಳದ ಹೋದರ ನಿಮ್ಮಪ್ಪ ಬರ್ತಾನೇನು ಹಾನಿ ತುಂಬಲಾಕ? ನನ್ನ ಕೇಳಿದ್ದರ ನಿನಗೇನಾಗ್ತಿತ್ತು ಧಾಡಿ? (ಹೇಸಿ ವಾಸನೆ ಮೂಸಿದವರಂತೆ) ಕಲ್ತಕ್ಕಿ! ಹ್ಯಂಗ ಕೇಳ್ಬೇಕಂತೀಯಲ್ಲ? (ಕನ್ನಡಿಯಲ್ಲಿನ ತನ್ನ ಕಾಮರೂಪು ಕಂಡು ತುಸು ತಣ್ಣಗಾಗಿ ಆದರೂ ಉಗುರುಬೆಚ್ಚಗಿನ ಕಾವಿನಲ್ಲಿ) ಇಲ್ಲಿ ಹಣಿಗಿ ಇತ್ತಲ್ಲ - ಅದನ್ನೆಲ್ಲಿ ಒಗದಿ? ಯಾರಿಗೋ ಮರಿ ಬಂದ್ಹಾಂಗ ಕಾಣಿಸ್ತದ, ಅಲ್ಲಾ?..... (ಸ್ವಲ್ಪ ಸಮಯ ಹುಡುಕಾಡಿದ ನಂತರ ಅಲ್ಲೇ ಇದ್ದ ಹಣಿಗೆಯನ್ನು ತೆಗೆದುಕೊಂಡು ತಲೆ ಬಾಚತೊಡಗುತ್ತಾನೆ. ತುಸು ಹೊತ್ತು ನೀರವ. ಲಲಿತ ಎಲ್ಲಿ ತನ್ನ ಹೆಜ್ಜೆಯ ಸಪ್ಪಳವಾಗುವುದೋ ಎಂಬಂತೆ ಬೆದರಿ ಮೃದುವಾಗಿ ಒಳಗೆ ಹೋಗುತ್ತಿರುವಂತೆಯೇ ಅದೇ ಬಾಗಿಲಿನಿಂದ ಅಂಬಕ್ಕ ತಾನೊಬ್ಬ ಶ್ರೇಷ್ಠ ಜ್ಞಾನಿಯೋ ಎಂಬಂಥ ಠೀವಿಯಲ್ಲಿ ಒಂದು ಕುರ್ಚಿಯಲ್ಲಿ ಕೊಡ್ರುತ್ತಾಳೆ . ಉಡುಪು - ಕ್ರಿ.ಶ. ೧೦೬೦ ರ ಆರುಂಧತಿ. ತಕ್ಕಡಿ ಸರಿ ಪರಡಿಗೆಯಂಥ ಕಣ್ಣು, ಎರಡೂ ಪರಡಿಗೆಯ ತುಂಬ ವಾತ್ಸಲ್ಯ - ಮಮತೆ. ಪತ್ರಿಕೆಯ ಪುಟ ತಿರುವುತ್ತ ಕೂಡ್ರುತ್ತಾಳೆ.)

**ಅಂಬಕ್ಕ :-** ಸಾಹೇಬರು ಸಿಟ್ಟಾಧ್ಹಾಂಗ ಕಾಣಿಸ್ತದss.

**ರಮೇಶ :-** (ಪ್ರಸಿದ್ಧ ನಟರಂತೆ ತಿರುಗಿ ನಿಂತು) ಹೂಂ – ನೀನು ಬಂದೆಯಾ ಇನ್ನು? ನೀನೇ ನಾಟ್ಕಾಕ್ಕೆ ಕರೆದುಕೊಂಡು ಹೋದದ್ದು ನಿಜಾ ಏನಮ್ಮ?

**ಅಂಬಕ್ಕ :-** ಹೌದು. ಅದರಲ್ಲಿ ತಪ್ಪೇನು ಬಂತು?

**ರಮೇಶ :-** ಏನೂ ತಪ್ಪಿಲ್ಲ. (ದುರುಗ ಮುರಗಿಯಂತೆ ಧ್ವನಿ ತೆಗೆದು) ಮಾಡಿಕೊಂಡ ಗಂಡನಿಗೆ ಪತ್ತೇ ಇಲ್ದೆ ಬೇಕಾದಲ್ಲಿ ತಿರುಗಡಿ ಬಂದರೂ ತಪ್ಪಿಲ್ಲs. ಬೇಕಾದ್ದನ್ನೆಲ್ಲ ಬೇಕಾದವರ ಮುಂದ ಬೇಕುಬೇಕಾದ್ಹಾಂಗ ಹರಟಿ ಹೊಡದ್ರೂ ತಪ್ಪಿಲ್ಲs. ಗಂಡ ಅಂಬೋನೊಬ್ಬ ಇದ್ದಾನಂಬೋದ್ದನ್ನೂ ಮರೆತು ಮನಿ ಒಯ್ದು ಮಠಾ ಮಾಡಿದ್ರೂ ತಪ್ಪಿಲ್ಲs. ಇದs ಹೌದಲ್ಲೋ ನೀ ಹೇಳೋದು?

**ಅಂಬಕ್ಕ :-** (ಗಾಂಧೀಜಿಯ ತಾಳ್ಮೆಯನ್ನನುಕರಿಸಿ) ನಾಟ್ಕಾಕ್ಕ ಹೋದದ್ದು, ಕೋಣೆ ಸ್ವಚ್ಛ ಮಾಡಿದ್ದು, ಇಷ್ಟಕ್ಕs ಅಲ್ಲೇನಪಾ ನೀನಿಷ್ಟು ನೆಗೆದುಬಿದ್ದು ಮಾತನಾಡೋದು? ಕೋಣೆ ಹೊಲಸಾದರ ಮಾರಾಜರ ಮಹದಾಜ್ಞಾ ಇದ್ದರನs ಸ್ವಚ್ಛ ಮಾಡಬೇಕು, ಇಲ್ಲದಿದ್ದರ ಹೊಲಸು ನೋಡ್ತಾ ಹಾಗೇ ಇರಬೇಕು – ಅಲ್ಲಾ? ಯಾಕೋ – ಹೆಂಗಸರು ನಾಟ್ಕಾ ನೋಡ್ಬಾರ್ದ? ನಿಮ್ಮಂಥಾ ಗಂಡಸರಿಗಷ್ಟs ಬರದಕೊಟ್ಟದೇನು? (ಪಾಪಿಗಳನ್ನು ಅಣಕಿಸುವ ಪುಣ್ಯವಂತರಂತೆ) ಅಯ್ಯೋ ನಮ್ಮಪ್ಪಾ ಹ್ಯಾಂಗಾದ್ರೂ ಬಿ. ಎ. ಪಾಸಾ ಮಾಡಿದೆಯೋ? ಅದೂ ಬಿ.ಎ. With Sociology ಅಂತ Sociology.

**ರಮೇಶ :-** (ನಾಲ್ಕು ಜನರಲ್ಲಿ ಕೈತೋರಿಸಿ ಅವಲಕ್ಷಣವೆನ್ನಿಸಿಕೊಂಡವರಂತೆ ಸಿಡಿದು) ಹೂಂ, ಹ್ವೌದು. ನಾವು ಬಿ.ಎ. ಪಾಸ ಮಾಡಿರಲಿ, ಇನ್ನೇನಾದರೂ ಆಗಿರಲಿ; ಈ ಮನೆ ನನ್ನದು, ಇದರಲ್ಲಿ ನಡೆಯಬೇಕಾದ್ದು ನನ್ನ ಅಧಿಕಾರ . ಅಂಥಿಂಥಾ ಕಾಗ ಈ ಕಾರಭಾರ ನನ್ನ ಮುಂದೆ ನಡ್ಯಾಕಿಲ್ಲ. (ಮುಖ್ಯ ಮಂತ್ರಿಗಳ ಹಾಗೆ ಮೇಜು ಹಿಡಿದು ಲಲಿತಳನ್ನೇ ನೋಡುತ್ತ) ನೋಡು, ಇರೋ ಎರಡೂ ಕಿವಿಗಳನ್ನು ತೆರೆದು ಕೇಳು; ಈ ಮನೆಯ ಪ್ರತಿಯೊಂದು ಕಾರ್ಯಕ್ರಮ ನನ್ನ ಅಧ್ಯಕ್ಷತೆಯಲ್ಲಿ ಸಾಗಬೇಕು. ತೆಗೆದುಕೊಂಡ ಪ್ರತಿಯೊಂದು ನಿರ್ಣಯಕ್ಕೆ ನನ್ನ ಒಪ್ಪಿಗೆ ಬೇಕು. ಆಗಬೇಕಾದ ಪ್ರತಿ ಬದಲಾವಣೆ – ನನಗೆ ತಿಳಿದಿರಬೇಕು, ತಿಳೀತೋ ಇಲ್ಲೊ? ತಿಳೀದಿದ್ರ ಇನ್ನೊಮ್ಮೆ ಹೇಳ್ತೀನಿ ಕೇಳು, ಈ ಮನೆಯ………

**ಅಂಬಕ್ಕ :-** ತಿಳೀತು, ತಿಳೀತು, ಇಂಥಾ ಧ್ವನಿಗೆ ಲೌಡಸ್ಪೀಕರ್ ಯಾಕೆ? (ಅವಳನ್ನು ನುಂಗುವಂತೆ ಅಥವಾ ಹರಿದು ತಿನ್ನುವಂತೊಮ್ಮೆ ನೋಡಿ, ತುಟಿ ಬಿಗಿದು ಬೈಗಳ ವೇಗದಲ್ಲಿ ಹೊರಗೆ ಹೋಗುತ್ತಾನೆ . ತುಸು ಹೊತ್ತು ತನ್ನ ಹಣೆಬರಹದ ಮರೆತ ವಾಕ್ಯವನ್ನು ನೆನಪಿಸಿಕೊಳ್ಳುವಂತೆ ನಿಂತಿದ್ದು, ಲಲಿತ ಸಾವುಕಾಶವಾಗಿ ಒಳಗೆ ಹೋಗುತ್ತಿರುವಂತೆ ಅಂಬಕ್ಕ ಅನಾಥ ಶಿಶುವನ್ನು ಕಂಡ ಮಕ್ಕಳಿರದ ತಾಯಿಯಂತೆ.)

ಲಲಿತಾ… ಇಲ್ಲಿ ಬಾ… ಕೂತ್ಕೊ… ಈಗ ಹೊರಗೆ ಹೋದನಲ್ಲಾ ಒಬ್ಬ ಗಂಡಸು, ಅವನು ನಿನಗೇನಾಗಬೇಕು?

**ಲಲಿತ :-** (ಅಧ್ಯಾಪಿಕೆಯ ಎದುರಿನ ಬೇಬಿಯಂತೆ) ಇದೇನಕ್ಕಾ ಹೀಗೆ ಕೇಳ್ತೀರಿ?

**ಅಂಬಕ್ಕ :-** ಹೂಂ. ಅಂತೂ ನಿನಗೂ ಕನ್ನಡ ಮಾತನಾಡ್ಲಿಕ್ಕೆ ಬರ್ತsದ ಅಂಬೋದು ಸಿದ್ಧವಾಯ್ತು. ಅಂದ್ಹಾಗೆ ಅವನು ಏನಾಗಬೇಕು ನಿನಗೆ? ಏನೂ ಅಲ್ಲಾ? (ಲಲಿತ ಸಿಕ್ಕ ಕಳ್ಳನ ಹಾಗೆ ಮುಖ ಬಗ್ಗಿಸುವಳು) ಮದುವೆಯಾಗಿ ಒಂದೂವರೆ ವರ್ಷ ಆಯ್ತು. ಹೆಂಡತ ಇ ಎರೆಗಿ – ಗಂಡ ಕೆರೆಗಿ… ಅಂದ್ಹಾಗ ನೀನು ಕಲಿತದ್ದೆಷ್ಟು?

**ಲಲಿತ :** :– (ನಿಮಗೆ ಗೊತ್ತಿಲ್ಲವೆ? – ಎಂಬಂಥ ಆಶ್ಚರ್ಯದ ಮುಖ) ಎಸ್ಸೆಲ್ಸಿ.

**ಅಂಬಕ್ಕ :-** ಇನ್ನು ಎಷ್ಟು ಕಲಿತಿದ್ದರೆ ನಿನಗೆ ಚೆನ್ನಾಗಿ ಮಾತನಾಡ್ಲಿಕ್ಕೆ ಬರಬಹುದಿತ್ತು .... ಹೌದಾ ಮತ್ತೆ ಬಾಯಿ ಬಂದಾಯ್ತು. (ಅಕ್ಕರೆಯಿಂದ ನಿಮ್ಮ ತಾಯಿ ನಿಮ್ಮೊಡನೆ ಮಾತನಾಡುವಂತೆ) ನೋಡಮ್ಮಾ ಲಲಿತ, ನನಗೂ ಒಂದು ಚಮಚ ಬುದ್ಧಿ ಇದೆ ಅಂಬೋ ಮಾತಿನಲ್ಲಿ ನಿನಗೆ ವಿಶ್ವಾಸವಿದೆಯೇ? (ಲಲಿತ, ಬೆದರಿದ ಆದರೂ ಆಶ್ಚರ್ಯಕಂಡ ಬೇಬಿಯಂತೆ ಕೂಡ್ರುವಳು) ನಾನೂ ಒಂದು ಗೇಣು ಚೋಟಿ ಓದಿದ್ದೇನೆ - ಅಂಬೋದು ನಿನಗೆ ಗೊತ್ತೆ? ಹೋಗಲಿ, ನನಗೂ ನಿನ್ನ ಓರಗೆಯ ಒಬ್ಬ ಮಗಳು ಇದ್ದಳೂ - ಅಂಬೋದಾದರೂ ಗೊತ್ತಾ?

**ಲಲಿತ :-** (ನೀವು ನನ್ನನ್ನು ಗೇಲಿ ಮಾಡುತ್ತಿದ್ದೀರಿ - ಎಂಬಂತೆ ಮುಖ) ಹೂ.

**ಅಂಬಕ್ಕ :-** ಅವಳು ಸತ್ತಳು. ಭಾಳ ಪುಣ್ಯವಂತಿ. ಇಲ್ಲದಿದ್ದರೆ ಅವಳೀಗ ನಿನ್ನ ಸ್ಥಾನದೊಳಗಿದ್ದು ನಾನು ಕೇಳಿದ ಪ್ರಶ್ನೆಗಳಿಗೆಲ್ಲಾ ನೀನ್ಹಾಗೇ - 'ಹಾಂ ಹೂಂ'ತ ಸಣ್ಣಾಗಿ ಉತ್ತರಾ ಕೊಡ್ತಾ ಕೂತಿರ್ದಳ್ಳು. ನೋಡಮ್ಮ, ಎಷ್ಟಾದರೂ ನೀನು ನನ್ನ ತಮ್ಮನ ಕೈಹಿಡಿದಾಕೆ. ನನ್ನ ಮಗಳೇ. ಮಗಳು ತಾಯಿಯ ಎದುರು ಸುಳ್ಳು ಮಾತನಾಡಬಾರ್ದು - ಅಲ್ಲಾ?

**ಲಲಿತ :-** (ಹೌದೂಂತ ಎನ್ನಿಸುತ್ತೆ ಎಂಬಂತೆ) ಹೂಂ.

**ಅಂಬಕ್ಕ :-** (ಲಲಿತನ ಮುಖವನ್ನೋದುತ್ತ) ರಮೇಶ ಮದುವೆಯಾದಾಗಿನಿಂದ ಎಷ್ಟು ಸಲ ಮನೆಯಲ್ಲಿ ಮಲಗಿದ್ದಾನೆ? ಮುಚ್ಚಿಟ್ಕೋ ಬಾರ್ದು. ಅಷ್ಟಾಗಿಯೂ ನಾನು ಹೊರಗಿನವಳೇನೂ ಅಲ್ವಲ್ಲ. ನನಗೆ ತುಂಬಾ ಕನಿಕರ ಬಂದು ಕೇಳ್ತಾ ಇದೀನಷ್ಟೆ. ಇಲ್ಲದಿದ್ರೆ ನಾನು ಹೇಳೋಲ್ಲಾಂತ ಹೇಳಿ ಬಿಡು. ಸುಳ್ಳು ಮಾತ್ರ ಹೇಳಬೇಡ. ನೀನು ಹೇಳದಿದ್ರೂ ನನಗೆಲ್ಲಾ ಈಗಾಗ್ಲೇ ಗೊತ್ತಾಗ್ಯದ, ಅಂಬೋದನ್ನ ಮರೀಬ್ಯಾಡ. ಎಷ್ಟು ಸಲ ಆತ ಮನೆಯಲ್ಲಿ ಮಲಗಿದ್ದ?

**ಲಲಿತ :-** (ತುಡುಗು ಸಿಕ್ಕ - ಚಿಕ್ಕ ಬೇಬಿಯಂತೆ) ಒಂದುः ದಿನ.

**ಅಂಬಕ್ಕ :-** ಮತ್ತೆ - ನಾನು ಎರಡು ತಿಂಗಳ ಹಿಂದೆ ಬಂದಾಗ ಸರಿಯಾಗಿದಾರೇಂತ ಹೇಳಿದ್ದೆಯಲ್ಲ?

**ಲಲಿತ :-** ಹಾಗ್ಹೇಳೂಂತ ಅವರು ಬೆದರಿಸಿದ್ರು.

**ಅಂಬಕ್ಕ :-** ಹಾಗಂತ ನೀನೂ ಹೇಳದ್ದೆ. ಅಲ್ಲವೆ? ರಾತ್ರಿಯೆಲ್ಲಾ ಎಲ್ಲೆಲ್ಲೋ ಹೋಗಿ ಬೆಳಿಗ್ಗೆ ಬಂದು ಮತ್ತೆ ರೂಮಿನಲ್ಲಿ ಮಲಗಿ ಬೆಳಿಗ್ಗೆ - ಇಲ್ಲೆ ಇದ್ದವರಂತೆ ನನಗೆ ಮುಖಾ ತೋರಿಸ್ತಿದ್ದ - ಅಲ್ಲವೆ?

**ಲಲಿತ :-** (ನಿಮಗಿದೆಲ್ಲಾ ಹ್ಯಾಗೆ ಗೊತ್ತಾಯ್ತು - ಎಂಬಂತೆ ಮುಖ) ಹೂಂ.

**ಅಂಬಕ್ಕ :-** ಈಗ ನಾನು ಬಂದ ಎರಡು ದಿನಗಳಿಂದಲೂ ಇದೇ ನಾಟ್ಕಾ ಸಾಗಿದೆ - ಅಲ್ಲವೆ?

**ಲಲಿತ :-** (ಅಯ್ಯೋ - ಇದೂ ಗೊತ್ತಾಯ್ತೆ? - ಎಂಬಂತೆ ಮುಖ) ಹೂಂ.

**ಅಂಬಕ್ಕ :-** ಇದಕ್ಕೇ ಅನ್ತಾರೆಯೇ ಮದುವೆ - ಅಂತ? ನಿಮ್ಮಿಬ್ಬರ ದಿನಚರಿ ನೋಡಿದಾಗ, ಇದು ಅದರ ಗಂಡ, ಅದು ಇದರ ಹೆಂಡತೀ ಅಂತ ಅನ್ನಿಸುತ್ತೆಯೆ? 'ಮದುವೆ' ಅಂದರೆ ಒಂದೇ ಮನೆಯಲ್ಲಿ ಕೂಡಿ ಇರೋದು - ಅಂತ ಇಷ್ಟೇ ಏನಮ್ಮ ಅದರ ಅರ್ಥ? ಅಡಿಗೆ ಮಾಡೋದಕ್ಕೆ ಹೆಂಡತಿ - ಉಣ್ಣೋದಕ್ಕೆ ಗಂಡ - ಇಷ್ಟೇನಾ ನಿಮ್ಮ ಸಂಬಂಧದ ಉದ್ದ - ಅಗಲಾ? ನೋಡು ಲಲಿತ, ನನ್ನ ಮಗಳು ಸತ್ತಾಗ ಎಷ್ಟು ಸಂಕಟ ಆಗಿತ್ತೋ - ಅಷ್ಟೇ ಸಂಕಟ ನಿನ್ನನ್ನು ನೋಡಿದಾಗ ಆಗ್ತಾ ಇದೆ. ನಿನ್ನ ಶರೀರ ಇಪ್ಪತ್ತನೇ ಶತಮಾನದ್ದಾದ್ರೂ

ಬುದ್ಧಿ ದ್ವಾಪರದ್ದೆ. ಇಷ್ಟು ಕಲಿತೂ ಇಂಥವನೊಬ್ಬನನ್ನು ಹಿಡಿತದಲ್ಲಿಟ್ಟುಕೊಳ್ಳೋಕೆ ಸಾಧ್ಯವಾಗಿಲ್ಲವೆ? ಕೊನೆಯ ಪಕ್ಷ ಮೊದಲಿನಿಂದ ಅವನೊಡನೆ ಧೈರ್ಯವಾಗಿ ಮಾತನಾಡೋದಕ್ಕೂ ಅಷ್ಟೊಂದು ಹೆದರಿಕೆಯೇ? ಮಾತಿಲ್ಲ - ಕತೆಯಿಲ್ಲ. ಲೋಕದಲ್ಲಿ ಇಂಥವಕ್ಕೆ ಗಂಡ, ಹೆಂಡತಿ ಅಂತ ಕರೀತಾರೆಯೇ? ಹೋಗಲಿ, ನಿನ್ನ ಗಂಡನ ಬಗೆಗೆ ನಿನಗೇನೇನು ಗೊತ್ತು? ಅಂದರೆ ಅವನ ಚಟ, ಪ್ರಿಯವಸ್ತು ಅಭಿರುಚಿ - ಇತ್ಯಾದಿ - ವಗೈರೆ……

**ಲಲಿತ :-** ಅವರು ಬ್ಯಾರೆ ಕಡೆಗೆ….. (ಅಷ್ಟರಲ್ಲಿ ನಾಗಯ್ಯ ಹೊರಬಾಗಿಲಿನಿಂದ ಅತ್ಯವಸರದಿಂದ ಒಳ ಬಂದು ಇಬ್ಬರನ್ನೂ ಕಂಡು ಗತಿಕುಂಠಿಸಿ)

**ನಾಗಯ್ಯ :-** ಊಟ ಆಯ್ತ್ರೀ ಅಕ್ಕಾವರ?

**ಅಂಬಕ್ಕ :-** ಇನ್ನೂ ಇಲ್ಲ.

**ನಾಗಯ್ಯ :-** ಸಾಹೇಬರು ಟೇಬಲ್ಲಿನ ಮ್ಯಾಲ ಫೈಲ ಮರತ ಹೋಗ್ಯಾರಂತ. ತಗೊಂಬರ್ಲಿಕ್ಕೆ ಹೇಳಿದ್ರು. ಒಳಗ ಅದ ಏನ್ರಿ?

**ಅಂಬಕ್ಕ :-** ಹೂಂ, ಲಲಿತ; ಸ್ವಲ್ಪ ಒಳಗೆ ಹೋಗಿ ತಗೊಂಬಾಮ್ಮ. (ಲಲಿತ ಎದ್ದು ಹೋಗುವಳು,) ಮತ್ತೇನು - ಎಲ್ಲಾ ಸರಿಯಾಗ್ಯsದ ಅಲ್ಲಾ?

**ನಾಗಯ್ಯ :-** (ಸಂಕೋಚ, ವಿನಯದಿಂದ) ಹೂಂನ್ರಿ.

**ಅಂಬಕ್ಕ :-** ನೋಡು - ನಾಗಯ್ಯ, ನಿನಗೀಹೊತ್ತು ಒಂದು ಪ್ರಶ್ನೆ ಕೇಳ್ತೀನಿ - ಸುಳ್ಳುಸುಳ್ಳೇ ಏನಾದರೂ ಉತ್ತರಾ ಹೇಳ್ಬಾರ್ದು - ಏನಂತಿ?

**ನಾಗಯ್ಯ :-** ಇದೇನ್ರೀ ಅಕ್ಕಾವರ ಹೊಸಬರ್ಹಂಗ ಮಾತನಾಡ್ತೀರಿ . ಅದೇನ ಕೇಳ್ರೆಲ್ಲ.

**ಅಂಬಕ್ಕ :-** ಏನೂ ಸಂಕೋಚ ಪಟ್ಕೋಬೇಡ. ರಮೇಶ ಹೊರಗೆಲ್ಲಿ ಸಂಬಂಧ ಮಾಡಿದಾನೆ ಗೊತ್ತಾ? ಹೆದರಬೇಡ - ನಾನು ಯಾರ ಮುಂದೂ ಹೇಳೋಲ್ಲ. ನೀನು ಈ ಮನೆಯನ್ನು ಚೆನ್ನಾಗಿ ಬಲ್ಲವನಂತ ಕೇಳ್ತಾ ಇದೀನಿ. ನಿನಗೇನ ಗೊತ್ತೋ ಅದನ್ನೆಲ್ಲಾ ಹೇಳು.

**ನಾಗಯ್ಯ :-** ಡಾಕ್ಟರರ ಕುಟುಂಬ ಶಾರದಮ್ಮನ ಜೊತೆ ಸಂಬಂಧದs, ಅಂತ ಒಬ್ಬಿಬ್ರು ಆಡ್ತಾ ಇದ್ರು.

**ಅಂಬಕ್ಕ :-** ಈಗ ಇವನು ಚುನಾವಣೆಗೆ ನಿಂತಿದ್ದು ಅವರ ಪ್ರೇರಣಾ ಅಂತ ಕಾಣಸತsದ - ಅಲ್ಲಾ?

**ನಾಗಯ್ಯ :-** ಇದ್ದಿರಬೇಕ್ರಿ.

**ಅಂಬಕ್ಕ :-** ಅವಳು ನೋಡ್ಲಿಕ್ಕೆ ಹ್ಯಾಗಿದಾಳೆ?

**ನಾಗಯ್ಯ :-** ಇದ್ದಾಳೆ, ಹೆಣ್ಣೂಂತ ಕರೆಯಿಸಿಕೊಳ್ಳೋ ಮಟ್ಟಿಗೆ. ನೀವೂ ನೋಡಿರಬೇಕಲ್ಲ.

**ಅಂಬಕ್ಕ :-** ಸರಿಯಾಗಿ ನೆನಪಾಗ್ತಾ ಇಲ್ಲ. ಅಂತೂ ಅವಳು ಯಾರ ಮಧ್ಯಸ್ತಿಕೆಯಿಂದಲೂ ಇವನನ್ನು ಬಿಡೋಲ್ಲಾಂತ ಕಾಣಿಸ್ತದs.

**ನಾಗಯ್ಯ :-** ಆ ಮಾತು ಸಾಧ್ಯವಾಗೋಹಂಗ ನನಗೇನೂ ಭರೋಸ ಇಲ್ರಿ. ಒಂದು ವೇಳೆ ಅವರು ಬಿಡಬಹುದಾದರೂ ನಮ್ಮ ಸಾಹೇಬರು ಬಿಡೋ ಸ್ಥಿತಿಯೊಳಗಿಲ್ಲ. ಏನಾದ್ರೂ ಮಾಡಿ ಇವರ ಮನಸ್ಸನ್ನೇ ಪರಿವರ್ತನಗೊಳಿಸಿದರೆ ಸಾಧ್ಯವಾದೀತು. (ತುಸು ಹೊತ್ತು ನಿರವ.)

**ಅಂಬಕ್ಕ :-** ಅಂದ್ಹಾಂಗ ನಿನ್ನ ಹೆಂಡತಿ ಯಾರಾದರೂ ತನ್ನ ಬಂಧು ಬಳಗದವರ ಜೊತೆ ನಾಟ್ಕಾ ನೋಡ್ಲಿಕ್ಹೋದರ ನಿನಗೂ ಸಿಟ್ಟು ಬರ್ತsದೇನೋ?

**ನಾಗಯ್ಯ :-** ನೀವು ಕೇಳೋದು ನನಗೂ ಅರ್ಥ ಆಗ್ತದ. ಆದರ ನೀವೂ - ಚಿಕ್ಕ ಅಮ್ಮಾವ್ರು ನಾಟ್ಕಾ ನೋಡ್ಲಿಕ್ಕೆ ಬಂದ ದಿವಸs ಸಾಹೇಬರು - ಶಾರದಮ್ಮನವರು ನಾಟ್ಕಾ ನೋಡ್ಲಿಕ್ಕೆ ಬಂದಿದ್ರು.

**ಅಂಬಕ್ಕ :-** ಹೌದಾ? ನಮ್ಮಣ್ಣವರು ನೋಡಿರಬೇಕು.

**ನಾಗಯ್ಯ :-** ನೋಡಿದರಷ್ಟs ಯಾಕ್ರಿ? ಲಲಿತಮ್ಮನವರನ್ನು ಕಂಡ ಕೂಡಲೇ ಶಾರದಮ್ಮನವರು ಸಿಕ್ಕಾಪಟ್ಟೆ ಸಾಹೇಬರೆದುರಿಗೆ ಗೇಲಿಮಾಡಿ ಹುಚ್ಚುಚ್ಚಾರ ನಕ್ಕರು.

**ಅಂಬಕ್ಕ :-** (ತನ್ನ ಪಕ್ಷಕ್ಕೆ ಅನಿರೀಕ್ಷಿತವಾಗಿ ಬೆಂಬಲ ದೊರೆತ ವಕೀಲನಂತೆ) ಹೂಂ - ಆದ್ದರಿಂದಲೇ ನಮ್ಮ ಕೋಡಗ ಈವೊತ್ತು ಇಷ್ಟು ಹಲ್ ಕಿಸೀತಿತ್ತೂ ಅಂತ ಕಾಣಸ್ತsದ. ಚುನಾವಣೆಯಲ್ಲೇನಾದ್ರೂ ಅವನು ಆರಿಸಿ ಬರೋ ಸಂಭವ ಇದೆಯೇನು?

**ನಾಗಯ್ಯ :-** ನಿಶ್ಚಿತವಾಗಿ ಹೇಳಬರದು, ನೋಡಬೇಕು. ನಾಳೆಯಂತೂ ತಿಳಿದೇ ತಿಳಿಯುತ್ತಲ್ಲ. (ಅಷ್ಟರಲ್ಲಿ ಲಲಿತ ಫೈಲು ತಂದು ಕೊಟ್ಟು ಕೂಡ್ರುತ್ತಾಳೆ. ಗಡಿಯಾರ ಢಣ್ ಎಂದು ಈಗ ಅದಷ್ಟು ವೇಳೆಯನ್ನು ಸೂಚಿಸುತ್ತದೆ.) ನಾನಿನ್ನು ಮನೆಗೆ ಹೋಗಬೇಕು. ಕಾಯ್ತಿರ್ತಾರೆ.

**ಅಂಬಕ್ಕ :-** ಯಾರು ಹೆಂಡತೀನಾ?

**ನಾಗಯ್ಯ :-** (ದಯಮಾಡಿ ಅವಳ ವಿಷಯವನ್ನು ಮತ್ತೆ ಮತ್ತೆ ಕೇಳಿ - ಎಂಬಂತೆ) ಹೂಂ. ಊಟಕ್ಕೆ ಬರೋಲ್ಲಾಂತ ಹೇಳಿಹೋಗ್ಬೇಕು.

**ಅಂಬಕ್ಕ :-** (ಮುಗುಳು ನಗುತ್ತ) ಹಾಗೇ ಅವಳ ಮುಖ ಸ್ವಲ್ಪ ನೋಡಿ ಹೋಗ್ಬೇಕು. ಅಲ್ಲಾ?

**ನಾಗಯ್ಯ :-** (ನೀವು ಎಷ್ಟು ಸಂತೋಷ ಬರುವ ಪ್ರಶ್ನೆ ಕೇಳುತ್ತೀರಿ - ಎಂಬಂತೆ ನಗುತ್ತ ಹೋಗುತ್ತಾನೆ. ಲಲಿತ ಕನಸಿನಲ್ಲಿ ತಾನು ರಾಜನಾಗಿದ್ದಂತೆ ಕಂಡ ತಿರುಕನಂತೆ)

**ಲಲಿತ :-** ಇವರು ಯಾರಕ್ಕ?
**ಅಂಬಕ್ಕ :-** (ಮಗುವಿಗೆ ಎರಡರ ಮಗ್ಗಿ ಕಲಿಸುವ ತಂದೆಯಂತೆ) ಒಬ್ಬ ಹೆಂಡತಿಯ ಗಂಡ - ಅಂತ ಇವನ ಹೆಸರು. ಯಾವುದೋ ಒಂದು ವಿಷಯ ತೆಗೆದ ಕೂಡಲೇ ನಾಚ್ಗೆ, ಸಂತೋಷಸೂಚಕವಾದೊಂದು ಕ್ರಿಯೆ ಅವನ ಮುಖದಲ್ಲಿ ಮೂಡಿತ್ತಲ್ಲಾ - ಅದಕ್ಕೇ 'ನಗೆ' ಅಂತ ಹೇಳ್ತಾರೆ.  ಯಾವುದರ ವಿಷಯ ತೆಗೆದೊಡನೆ ಆತನ ಮುಖ ಕೆಂಪೇರಿತ್ತೋ - ಮುಖದಲ್ಲೊಂದು ಪ್ರೇಮದ ಗೀತ ಮೂಡಿತ್ತೊ - ಆ ವಸ್ತುವಿಗೇ 'ಹೆಂಡತಿ' ಎಂದು ಹೆಸರು. ನಿನಗೀನ್ನೇನಾದರೂ ತಿಳೀದಿದ್ರೆ ಕುಳಿತುಕೊಂಡೇ ಕೇಳಬಹುದು.

**ಲಲಿತ :-** ನನಗೀಗ ಏನ್ಮಾಡಂತೀರಕ್ಕ?

**ಅಂಬಕ್ಕ :-** Good. ಇದೀಗ ಸರಿಯಾದ ಮಾತು. ನಾನು ಹೇಳಿದ ಹಾಗೆ ಕೇಳ್ತಿಯಾ? ಹೆದರ್ಕೋಬಾರ್ದು. ನೀನೂ ಕಲಿತವಳು. ಅದಿದನ್ನು ಓದಿದವಳು - ವಿಚಾರ ಮಾಡೋದಕ್ಕೊಂದು ಬುದ್ಧಿಯಿದ್ದವಳು. ಸುಖಬೇಕೂಂದ್ರೆ ಇಷ್ಟೆಲ್ಲಾ ಮಾಡಬೇಕು. ಏನಂತಿ?

**ಲಲಿತ :-** (ಇಂಟರ್ ವ್ಯೂಗೆ ಹೋದ ಅರ್ಜಿದಾರನಂತೆ) ಹೂಂ.

**ಅಂಬಕ್ಕ :-** ಹೈಸ್ಕೂಲಿನಲ್ಲಿದ್ದಾಗ ನಾಟ್ಕಾಗೀಟ್ಕಾದಲ್ಲೇನಾದರೂ ಭಾಗ ವಹಿಸಿದ್ದೆಯೇನು?

**ಲಲಿತ :-** ಇಲ್ಲ.

**ಅಂಬಕ್ಕ :-** ಪರವಾ ಇಲ್ಲ. ಸಧ್ಯ ನಾನೊಂದು Comedy ಬರೆದಿದೀನಿ. ಅದರ ನಾಯಿಕೆಯ ಪಾತ್ರ ನಿನಗೆ.

**ಲಲಿತ :-** (ನನ್ನನ್ನು ಕಲ್ಲು ಹೇರಿ ಕೊಲ್ಲುತ್ತೀರಿ? - ಎಂಬಂತೆ) ನನಗ?

**ಅಂಬಕ್ಕ :-** ಮತ್ತೆ ಹೆದರುತ್ತೀಯಲ್ಲ. ದಿಗ್ದರ್ಶನ ನನ್ನದು. ಈಗಿನಿಂದಲೇ ರಿಹರ್ಸಲ್ ಪ್ರಾರಂಭ, ಏಳು. (ಅವಳನ್ನು ಎಳೆದುಕೊಂಡು ಒಳಗೆ ಹೋಗುವಳು.

- ತೆರೆ -